
ಜನಶಕ್ತಿ
ದುಡಿವ ಜನರ ಪ್ರಾಣಮಿತ್ರ
ಸಂಪುಟ 2 ಸಂಚಿಕೆ 46
ನವೆಂಬರ್ 16, 2008
ಕನ್ನಡ ವಾರಪತ್ರಿಕೆ
ರೂ. 5/-
www.janashakthi.org


ಒಬಾಮಾ ಐತಿಹಾಸಿಕ ಗೆಲುವು ಆದರೆ ....





ಬುದ್ಧದೇವ ಹತ್ಯೆಗೆ ಮಾವೋವಾದಿಗಳ ಯತ್ನ

ಗೋಮೂತ್ರ : ಔಷಧವೋ ! ಅಜ್ಞಾನವೋ ?




ಅದ್ವಾನಿ ಆತ್ಮದಲ್ಲಿ ಜನರೆಲ್ಲಿ?



ಮಾಗಡಿ : ಅಸ್ಪೃಶ್ಯತೆಯ ಅಪಮಾನ ದಲಿತ ಮಹಿಳೆಯ ಬಲಿ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಕಾಸ್ಮಿಕ್ ಹೀಲಿಂಗ್ ಎಂಬ ದಗಲ್ಬಾಜಿ ವಿದ್ಯೆ.....

ಜನರ ಮುಗ್ಧತೆ, ತಿಳುವಳಿಕೆಯ ಕೊರತೆಯನ್ನು ದುರ್ಬಳಕೆ ಮಾಡಿಕೊಳ್ಳಲು ನಾನಾ ತಂತ್ರಗಳನ್ನೇ ರೂಪಿಸಿಕೊಳ್ಳಲಾಗಿದೆ. ಕಾಸ್ಮಿಕ್ ಹೀಲಿಂಗ್ ಎಂಬುದೊಂದು ಅಂತಹ ವಿದ್ಯೆಗಳಲ್ಲೊಂದು.

'ಕಾಸ್ಮಿಕ್ ಹೀಲಿಂಗ್' ಎಂಬ ಒಳಸಂಚು ಇಂದು ನಿನ್ನೆಯದಲ್ಲ. 1977 ರ ಏಪ್ರಿಲ್ ತಿಂಗಳಲ್ಲಿ ಆಂಧ್ರಪ್ರದೇಶದ ಓರ್ವ ಮಂತ್ರಿ (ಚೆಲ್ಲ ಸುಬ್ಬರಾಯುಡು) ವಿಧಾನ ಸಭೆಯಲ್ಲಿ ಒಂದು ಅಪೂರ್ವ ಸಂಗತಿಯನ್ನು ಪ್ರಕಟಿಸಿದ - ಹೈದರಾಬಾದಿನಿಂದ 40 ಕಿ. ಮೀ. ದೂರದಲ್ಲಿರುವ ಯಾದುಗಿರಿ ಬೆಟ್ಟದ ಒಂದು ಮಂದಿರದ ದೇವರು 'ಲಕ್ಷ್ಮೀನರಸಿಂಹ ಸ್ವಾಮಿ'. ಆತ ಬಹಳ ಜನ ರೋಗಿಗಳಿಗೆ ಕನಸಿನಲ್ಲಿ ಬಂದು ಆಪರೇಶನ್ ಮಾಡುತ್ತಾನಂತೆ! ಇಂತಹ ಆಪರೇಶನ್‌ಗಳ ಗುರುತುಗಳನ್ನು ಆತ ನೋಡಿದ್ದಾಗಿ ತಿಳಿಸಿದ. ಅಲ್ಲಿಗೆ ಭಾರೀ ಸಂಖ್ಯೆಯಲ್ಲಿ ಜನಸ್ತೋಮ ಆಪರೇಶನ್ ಮಾಡಿಸಿಕೊಳ್ಳಲು ಬರುತ್ತಾರಂತೆ. ಹಾಗಿದ್ದ ಮೇಲೆ ಆಂಧ್ರ ಪ್ರದೇಶದ ಆಸ್ಪತ್ರೆಗಳನ್ನು, ಅಲ್ಲಿಯ ಸರ್ಜರಿಯನ್ನು ತಯಾರಿಸಿದ ಕಾರ್ಖಾನೆಗಳನ್ನು ಮುಚ್ಚುವುದು ಒಳಿತಲ್ಲವೆ?

ಇಂತಹ ಮೂರ್ಖ ಹೇಳಿಕೆಗಳನ್ನು ಕೊಡುವಂತಹ ಮಂತ್ರಿಗಳು ಈ ದೇಶದಲ್ಲಿ ಹೆಚ್ಚುತ್ತಿದ್ದಾರೆ. ಅಂತೆಯೇ, ಇಂಥಹವುಗಳನ್ನು ಪ್ರದರ್ಶಿಸುವ ಟಿ.ವಿ. ಚಾನೆಲ್‌ಗಳು, ತರಂಗಗಳಂತಹ ಕುಖ್ಯಾತ ಪತ್ರಿಕೆಗಳೂ ಈ ದೇಶದಲ್ಲಿ ಧಾರಾಳವಾಗಿ ಇವೆ.

ಈ ಕಾಸ್ಮಿಕ್ ಹೀಲಿಂಗ್ ಎಂಬುವುದರ ಹಿಂದೆ ಅಡಗಿದ ಒಂದು ವಿಚಾರವಿದೆ. ಅದೇ ಮೇಡಿಟೇಶನ್. ಅದನ್ನು ಕೆಲವೊಮ್ಮೆ Transcendental Meditation ಎಂಬುವುದಾಗಿಯೂ ಕರೆಯುತ್ತಾರೆ.

ಈಗ ನಾವು ಮೊದಲಿಗೆ ಯೋಚಿಸಬೇಕಾದ ವಿಚಾರ ಇದು. ನಾವು ಅಂತಹ Deceptive Pereception (ಮೋಸದ ಸಂವೇದನೆಯನ್ನು ಉಂಟು ಮಾಡುವ) ಇಂದ್ರಿಯಗಳಿಂದ ಪಡೆಯುವ ಜ್ಞಾನ ಎಷ್ಟು ಸರಿ? ಈ ತಪ್ಪು ಅನುಭವಗಳು Deceptive Pereception ಗಳನ್ನು ಕೊಡುತ್ತದೆ. ಅದರಲ್ಲಿ ಮುಖ್ಯವಾಗಿ ಮೂರು ವಿಧ. Illusion (ಭ್ರಮೆ), Hellusination (ವಿಭ್ರಮೆ), Delution (ಭ್ರಾಂತಿ).

ಭ್ರಮೆ - ಇದು ಪಂಚೇಂದ್ರಿಯಗಳಿಂದ ಉಂಟಾಗುತ್ತದೆ. ಕಣ್ಣಿಗೆ ಕಾಣುವುದು ಎಲ್ಲಾ ಕಾಲದಲ್ಲೂ ಸತ್ಯವಲ್ಲ. ವಿಶೇಷ ಸಂದರ್ಭಗಳಲ್ಲಿ (ಅರ್ಧರಾತ್ರಿಯಲ್ಲಿ) ಅದು ಅಸತ್ಯವನ್ನೆ ಸತ್ಯವಾಗಿಸಬಹುದು. ಭೂತಭ್ರಮೆಯಾಗಿರಬಹುದು. ಇದಕ್ಕೆ ಒಂದು ಉದಾಹರಣೆ. ಅದಕ್ಕೆ Optical Illusion ಕಣ್ಣು ಮಾಡುವ ಮೋಸ. ಇಂದ್ರಜಾಲ (ಮ್ಯಾಜಿಕ್) ಇದಕ್ಕೊಂದು ಉದಾಹರಣೆ. ಕೆಲವರಿಗೆ ರಾತ್ರಿ ಭೂತದರ್ಶನವಾಗಬಹುದು. ಅದು ಕಣ್ಣಿಂದುಂಟಾಗುವ ಭ್ರಮೆ. ಅಂತೆಯೇ ಪ್ರತಿಯೊಂದು ಇಂದ್ರಿಯಗಳಿಂದಲೂ ತಪ್ಪು ಗ್ರಹಿಕೆಗಳಾಗುತ್ತವೆ. ಅವುಗಳು Optical, Olfactory, Lingual, Tactile ಮೊದಲಾದವುಗಳಿಂದ ಉಂಟಾಗುವ



ಭ್ರಮೆಗಳಾಗಿವೆ. ಅರ್ಧ ರಾತ್ರಿಯಲ್ಲಿ ಸಂಚರಿಸುವಾಗ ಎಲೆ ಸರಿದ ಶಬ್ದವೂ ಭೂತ ಎಂಬ ಭ್ರಮೆ ಕೊಡಬಹುದು. ನೆಲ್ಲಿಕಾಯಿ ತಿಂದು ನೀರು ಕುಡಿದಾಗ ನಾಲಗೆಯ ರಸನೇಂದ್ರಿಯದ ಭ್ರಮೆ (ರುಚಿ) ಉಂಟಾಗುತ್ತದೆ. ಚರ್ಮಕ್ಕೆ ಸಂಬಂಧಪಟ್ಟ ಭ್ರಮೆಯಂತೂ ಸರ್ವವಿಧಿತ. ಭ್ರಮೆಯಿಂದಾಗಿ (ಉದಾ: ಬಸ್ಸಿನಲ್ಲಿ!) ಮುದುಕಿಯ ಸ್ಪರ್ಶವೂ ಮಾಧುರೀ ದೀಕ್ಷಿತಳ ಸ್ಪರ್ಶವಾಗಬಹುದು! ಅಂತೆಯೇ ಮಧ್ಯ, L.S.D., ಮಾರ್ಫಿನ್, ಫೆಥಡಿನ್, ಟಿಂಕ್ಚರ್ ಓಪಿಯಮ್ ಇವುಗಳಿಂದಲೂ ಅತೀಂದ್ರಿಯ ಅನುಭವಗಳಾಗುತ್ತವೆ. ಇದನ್ನು ವಿಭ್ರಮೆ (Hellusination)ಎಂದು ಕರೆಯುತ್ತಾರೆ.

ನಮ್ಮ ಋಷಿ ಮುನಿಗಳು ಅಫೀಮು, ಸುರೆ ಇತ್ಯಾದಿಗಳನ್ನು ಉಪಯೋಗಿಸಿ ಎಂತೆಂಥ 'ವಿರಾಟ್ ರೂಪ' ಗಳ ದರ್ಶನವನ್ನು ಮಾಡಿಲ್ಲ! ಇದರ ಅರ್ಥ ನಾನು ತತ್ವಶಾಸ್ತ್ರಕ್ಕೆ ಅನ್ವಯಿಸಿ ಹೇಳುತ್ತಿಲ್ಲ 'ಎನ್ನುವುದನ್ನು ಓದುಗರು ಗಮನಿಸಬೇಕು - ಏಕೆಂದರೆ - ಈ ಎಲ್ಲಾ ವಿಕಾರಗಳಿಂದ ತತ್ವಶಾಸ್ತ್ರ ಭಿನ್ನವಾದುದು. ಅದು ಶಾಸ್ತ್ರಗಳ ಶಾಸ್ತ್ರ - ಅಥವಾ - ವಿಜ್ಞಾನಗಳ ವಿಜ್ಞಾನ. ಅದು ಬೇರೆ ಮಾತು. ಆದರೆ ಈ ಭ್ರಮೆಗಳು ಮೌಢ್ಯದ ಪರಮಾತಿರೇಕ. ಕುವೆಂಪು ಅವರ ಮಗ ಪೂರ್ಣಚಂದ್ರ ತೇಜಸ್ವಿ UFO (ಉದಾ: ಹಾರುವ ತಟ್ಟೆ, ಬರ್ಮುಡಾ ಟ್ರೈಯಾಂಗಲ್) ಬಗ್ಗೆ ಬರೆದು ಈ ರಾಜ್ಯದ ಜನತೆಗೆ ಅನ್ಯಾಯವೆಸಗಿದ್ದಾರೆ.

ಇನ್ನು Delusion (ವಿಭ್ರಾಂತಿ) ಅಥವಾ ಕೆಟ್ಟ ಮತಿಭ್ರಮೆ - ಎಂದರೆ ಬಾಲ್ಯದಿಂದಲೇ ವಿಕೃತ ವಿಚಾರಗಳನ್ನು ಮತ್ತೆ ಮತ್ತೆ ಹೇಳುವುದರಿಂದ ವ್ಯಕ್ತಿಯ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವ ವಿಚಾರಗಳು. ಈ ತಂತ್ರವನ್ನು ಆರ್.ಎಸ್.ಎಸ್. ಮತ್ತು ಮುಸ್ಲಿಂ ಮೂಲಭೂತವಾದಿಗಳು ಅನುಸರಿಸುತ್ತಾರೆ. ಈ ರೀತಿ ವಿಭ್ರಾಂತಿಗೊಳಗಾದ ಮನಸ್ಸು ಎಂದೂ ತೆರೆದುಕೊಳ್ಳುವುದಿಲ್ಲ - ಸತ್ಯ ಅವರೆದುರಿಗೆ ಬಂದು ನಿಂತರೂ ಅವರಿಗೆ ಏನೂ ಕಾಣಿಸದು. ಭಜರಂಗಿಗಳ ಹಾಗೆ ನಾಯಿ ಬಾಲ ಡೊಂಕು.

ಈ ಮೂರು ಬಗೆಯ ಇಂದ್ರಿಯ ಅಗ್ರಾಹ್ಯತೆಯಿಂದ ವ್ಯಕ್ತಿಗಳು ನಾನಾ ಬಗೆಯ ಮೂಢ ನಂಬಿಕೆಗಳಿಗೆ ಬಲಿಯಾಗುತ್ತಾರೆ. ಕಾಸ್ಮಿಕ್ ಹೀಲಿಂಗ್‌ನ ಅಬ್ಬರದ ಪ್ರಚಾರವು ಇಂಥವರಿಗೆ ಪ್ರಿಯವಾಗುತ್ತದೆ.

ಟಿ. ಮೆಡಿಟೇಶನ್:

ಮೇಲ್ಕಾಣಿಸಿದ ನಾನಾ ಬಗೆಯ ಭ್ರಮೆ, ವಿಭ್ರಮೆ ಮತ್ತು ವಿಭ್ರಾಂತಿಗಳಿಂದ ಇದರಿಂದ ಲಭ್ಯವಾಗುವ ಅನುಭವ ಕೇವಲ ವೈಯಕ್ತಿಕವಾದುದು (Subjective). ಸಾಮಾನ್ಯ ಮಟ್ಟದ ಮೆಡಿಟೇಶನ್ ಮಾನಸಿಕ ಶಾಂತಿಯನ್ನು ತಂದು ಕೊಡುತ್ತದೆ. ಆದರೆ, ಅದು ಯೋಗದ ನಾಲ್ಕನೆಯ ಮೆಟ್ಟಿಲು 'ಪ್ರಾಣಾಯಾಮ'ವನ್ನು ದಾಟಿ ಹೋದರೆ ಮಾನಸಿಕ ವಿಭ್ರಮೆ ಕವಿಯುತ್ತದೆ. ಉದಾ: ಮುದ್ರಣಾಲಯದಲ್ಲಿ ಕೆಲಸ ಮಾಡುವವನೊಬ್ಬನನ್ನು ಆತನ ಪತ್ನಿ ಡಾ. ಕೋವೂರರ ಬಳಿಗೆ ಕರೆತಂದಿದ್ದಳು. ಆ ವ್ಯಕ್ತಿ ಯೋಗದ ಅತಿರೇಕಾಭ್ಯಾಸದಿಂದ ವಿಭ್ರಮೆಗೆ ಒಳಗಾಗಿದ್ದ. ಆತ ಯೋಗದಿಂದ ದೂರದರ್ಶನ, ಭವಿಷ್ಯದರ್ಶನ ಸಾಧ್ಯವೆಂದು ನಂಬಿದ್ದ. ಅದಕ್ಕಾಗಿ ಪದ್ಮಾಸನ ಹಾಕಿ ಸಾವಿರಾರು ಬಾರಿ 'ಓಂ' 'ಹ್ರೀಂ' ಎಂದು ಸ್ಮರಿಸುತ್ತಾ ಸಾಧನೆ ಮಾಡತೊಡಗಿದ್ದ. ಕೊನೆಗೊಂದು ದಿನ ಇದ್ದಕ್ಕಿದ್ದಂತೆ 'ಮುರುಗಾ ಮುರುಗಾ' ಎಂದು ಬೊಬ್ಬೆ ಹೊಡೆಯುತ್ತಾ ಮನೆಗೆ ಮೂರು ಸುತ್ತು ಬಂದನಂತೆ. ನಾನಾ ಮಂತ್ರವಾದಿಗಳೆಡೆಗೆ ಆತ ಕೊಂಡೊಯ್ಯಲ್ಪಟ್ಟ. ಏನೂ ಪ್ರಯೋಜನವಾಗದೆ ಆತನ ಪತ್ನಿ ಡಾ. ಕೋವೂರರೆಡೆಗೆ ಕರೆದುಕೊಂಡು ಬಂದಿದ್ದಳು. ಕೋವೂರ್ ಆತನನ್ನು ಗುಣಪಡಿಸಿದರು. ಆ ಪ್ರಶ್ನೆ ಬೇರೆ; ಆದರೆ, ಮೂಲಭೂತವಾದ ಸಂಗತಿಯೆಂದರೆ ಈ 'ಮೆಡಿಟೇಶನ್' - 'ಆಟೊ ಹಿಪ್ನೊಸಿಸ್'ನ (ಸ್ವಯಂ ಸಂಮೋಹಿಸುವಿಕೆ) ಯ ಒಂದು ನಿಧಾನ ಪ್ರಕ್ರಿಯೆ. ಇದರ ಪರಿಣಾಮವಾಗಿಯೇ ರಾಮಕೃಷ್ಣರು-ಕ್ರಿಸ್ತ, ಅಲ್ಲಾಹ್, ರಾಮ - ಎಲ್ಲರನ್ನೂ ಕಂಡರು. (ಆದರೆ, ರಾಮಕೃಷ್ಣ ಪರಮಹಂಸರು ಈ ಆಘಾತಕ್ಕೆ ಒಳಗಾಗಿದ್ದರೂ ಅವರ ಹೃದಯದಲ್ಲಿ ಮಾನವಮಾತ್ರರ ಬಗೆಗೆ ಮಿಡಿಯುವ ಅಂತಃಕರಣವಿತ್ತು. ಅವರಂಥ ಮಹಾ ಚೇತನವನ್ನು ನಾನು 'ಮೆಡಿಟೇಶನ್' ರೋಗಗ್ರಸ್ಥರಿಗೆ ಹೋಲಿಸುವುದಿಲ್ಲ) ಅವರ ಶಿಷ್ಯ ವಿವೇಕಾನಂದರಿಗೆ ಇಂಥದೇ ಹಿಪ್ನೋಸಿಸ್ ದೇವರನ್ನು ತೋರಿಸಿ ಕೊಟ್ಟಿತು! ಆದರೆ, ಯುಗಯುಗಗಳಲ್ಲಿ ಹುಟ್ಟುವ ಮಹಾನ್ ವ್ಯಕ್ತಿಗಳಲ್ಲಿ ಅವರೂ ಒಬ್ಬರು ಎಂಬುದನ್ನು ನಾವು ಮರೆಯುವಂತಿಲ್ಲ. ಏಕೆಂದರೆ, ಅವರು ಸೆಕ್ಯೂಲರ್ ಆಗಿದ್ದರು. ಆದರೆ, ಅವರಿಗೆ ದೇವರು ಮಾತ್ರ ಕಂಡದು ಮಾತ್ರ ಮೆಡಿಟೇಶನ್‌ನಿಂದಾದ ಸಮ್ಮೋಹನದಿಂದ.

ವಸ್ತುಸ್ಥಿತಿಯಲ್ಲಿ ಯೋಗದ ವ್ಯಾಯಾಮ (ಯೋಗವು ಹೃದ್ರೋಗಿಗಳಿಗೆ ಚಿಕಿತ್ಸೆ ಮತ್ತು ಔಷಧಿಯೊಂದಿಗೆ ಸಹಕಾರಿಯಾಗಬಲ್ಲುದೇ ಹೊರತು ಯೋಗವೇ ಹೃದ್ರೋಗಕ್ಕೆ ಔಷಧಿಯಾಗಲಾರದೆಂದು ಸುಪ್ರಸಿದ್ಧ Cardioligist ಸಿ. ಲಕ್ಷ್ಮೀನಾರಾಯಣ್ ಹೇಳುತ್ತಾರೆ (ವಿವರಕ್ಕೆ ನೋಡಿ 16-4-78 ರ ಇಂಡಿಯನ್ ಎಕ್ಸ್‌ಪ್ರೆಸ್) ಯೋಗ ಅತ್ಯಂತ ವೈಜ್ಞಾನಿಕ ಅಂದರೆ - ಯಮ, ನಿಯಮ, ಆಸನ, ಪ್ರಾಣಾಯಾಮದ ತನಕ ಮಾತ್ರ! ಆದರೆ, ಆ ನಂತರ ನಾಲ್ಕು ಭಾಗಗಳು (ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿ) ವಿಕೃತಿಯೆಡೆಗೆ ಕೊಂಡೊಯ್ಯುತ್ತವೆ. ಭಾರತೀಯ ದರ್ಶನದ ಮಹಾ ಪಂಡಿತರಾದ ಡಾ. ದೇವೀ ಪ್ರಸಾದ್ ಚಟ್ಟೋಪಾಧ್ಯಾಯರು ಸಮೀಕ್ಷಿಸಿದಂತೆ 'ಯೋಗ' ಒಂದು ನಾಸ್ತಿಕ ದರ್ಶನ. ಪುರೋಹಿತಶಾಹಿಯಿಂದ ವಿಕೃತಗೊಂಡು ಅದು ಆಸ್ತಿಕವಾಯಿತು.

ದುರದೃಷ್ಟವೆಂದರೆ ಇನ್ನೂ ಟಿ.ಎಮ್. ಬಗೆಗೆ ಮಹಾಭ್ರಾಂತಿ ಜನರಲ್ಲಿ ಹರಡಿದೆ. ಕಾಸ್ಮಿಕ್ ಹೀಲಿಂಗ್ ಈ ಭ್ರಾಂತಿಯ ಒಂದು ಅನೈತಿಕ ಸಂತಾನ. ಅದನ್ನು ಡಾ. ಬಿ. ಎಮ್. ಹೆಗ್ಡೆಯಂಥ ಶ್ರೇಷ್ಠ Cardiologist ಸಮರ್ಥಿಸುವುದು ಒಂದು ದುರಾದೃಷ್ಟ! ಅವರು ತಮ್ಮ ಅವೈಜ್ಞಾನಿಕ ಚಿಂತನೆಗಳಿಗೆ ವಿಜ್ಞಾನದ ಬಣ್ಣ ಕೊಡುತ್ತಾರೆ. ಈ ರೀತಿ ಇಂಥವರು 'ಜ್ಞಾನ ಕ್ಷೇತ್ರ'ಕ್ಕೆ ಅನ್ಯಾಯ ಮಾಡುತ್ತಿದ್ದು ತಮಗೆ ಗೊತ್ತಿಲ್ಲದ ಕ್ಷೇತ್ರದ ಬಗ್ಗೆ ಬೊಗಳೆ ಬಿಡುವುದನ್ನು ನಿಲ್ಲಿಸಿದರೆ ಈ ದೇಶಕ್ಕೆ, ಜನತೆಗೆ ಕ್ಷೇಮ.

ವಿಜಾರ್ಡ್ ಆಫ್ ನೇಪಲ್ಸ್ (Wizard of Naples) ಎಂದು ಬಹು ಹೆಸರಾಂತ ವ್ಯಕ್ತಿ ಬಡವರ ಹೆಸರು ಹೇಳುತ್ತಾ - ತನ್ನ ಅತೀಂದ್ರಿಯ ಶಕ್ತಿಯಿಂದ ನಾನಾ ಕಾಯಿಲೆಗಳನ್ನು ಗುಣಪಡಿಸುವವನೆಂದು ಪ್ರಚಾರ ಪಡೆದು ಹೇಗೊ ಪ್ರಖ್ಯಾತನಾದ. ಆದರೆ, ಆತ ರೋಮಿನ ಆಸ್ಪತ್ರೆಯಲ್ಲಿ ಹಲವಾರು ವರ್ಷ ಕ್ಯಾನ್ಸರ್‌ನಿಂದ ನರಳಿ ನರಳಿ ಸತ್ತ. ಅತೀಂದ್ರಿಯ ಶಕ್ತಿಯಿತ್ತೆನ್ನಲಾದ ಈ ವ್ಯಕ್ತಿಗೆ ತನ್ನನ್ನು ಗುಣಪಡಿಸಿಕೊಳ್ಳಲಾಗಲಿಲ್ಲ.

ಪ್ಲಾಂಚೆಟ್ (Planchette)

ಇದು ಇವತ್ತಿಗೂ ಭದ್ರವಾಗಿ ನೆಲೆ ನಿಂತ ಒಂದು ಭಯಾನಕ ಮೌಢ್ಯ. ಈ ಪ್ಲಾಂಚೆಟ್ ಒಂದು ಉಪಕರಣ. ಇದು ಅತ್ಯಂತ ಹಗುರವಾಗಿದ್ದು ವ್ಯಕ್ತಿಯೊರ್ವ ಮುಟ್ಟಿಕೊಂಡಾಗಲೂ ಅದು ಚಲಿಸುತ್ತದೆ. ಅದು ಹೇಗೆ? ಮನೋವಿಜ್ಞಾನದಲ್ಲಿ ಅದಕ್ಕೆ `Psyco motor movements

ಪುಟ 15 ಕ್ಕೆ

ಸಂಪಾದಕೀಯ-

ಬಿಜೆಪಿ ಸರ್ಕಾರದ-ಕನ್ನಡ ಪ್ರೀತಿಯ ತಂತ್ರ...

ಕನ್ನಡ ಮತ್ತು ತೆಲುಗು ಭಾಷೆಗಳಿಗೆ ಶಾಸ್ತ್ರೀಯ ಸ್ಥಾನ ಕಲ್ಪಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದ್ದು, ಸ್ವಾಗತಾರ್ಹವಾಗಿದೆ. ಈ ಮೂಲಕ ಕನ್ನಡ ಭಾಷೆ ಹೊರನಾಡಿನಲ್ಲಿ ಬೆಳೆಯಲು ಸಿಕ್ಕಿರುವ ಒಂದಿಷ್ಟು ಅವಕಾಶಗಳನ್ನು ಬಳಸಿಕೊಳ್ಳುವುದು ಅಗತ್ಯವಾಗಿ ಆಗಬೇಕು.

ಕನ್ನಡ ಭಾಷೆ-ಸಂಸತಿಯು ಇದರಿಂದಷ್ಟೇ ಪೂರ್ಣವಾಗಿ ಬೆಳೆಯಲು ಸಾಧ್ಯವಾಗುವುದಿಲ್ಲ. ಈ ಸಂತಸದ ಜೊತೆಗೆ ಗಮನಿಸಬೇಕು.ಇವು ಸಮೃದ್ಧವಾಗಿ ಬೆಳೆಯಲು ಆರ್ಥಿಕ-ಸಾಮಾಜಿಕ, ರಾಜಕೀಯದಂತಹ ಮೂಲಭೂತ ಕ್ರಮಗಳು ಅತ್ಯಗತ್ಯ. ಭಾಷೆ ಬೆಳೆಯಬೇಕಾದರೆ ಆ ನಾಡಿನ ಜನರ ಬದುಕು ಬೆಳೆಯಬೇಕು, ಉಳಿಯಬೇಕು. ಬದುಕು ಭಾಷೆಗೆ ಇರುವುದು ಅವಿನಾವಭಾವ ಸಂಬಂಧ. ಭಾಷೆಯು ಸಂಸತಿಯ ಸಮೃದ್ಧ ಗಣಿ... ಹೀಗಾಗಿ ನಮ್ಮ ನಾಡಿನಲ್ಲಿ ಜನತೆಗೆ ಬದುಕು ಕಟ್ಟಿಕೊಡುವ ಅಪಾರ ಉದ್ಯೋಗ ಅವಕಾಶಗಳ ಸೃಷ್ಟಿಯಾಗಿ ಸದೃಢ ಆರ್ಥಿಕ, ಸಂರಕ್ಷಣೆ, ದೊರೆತಾಗ ಭಾಷೆಗೂ ಬಂದು ಭದ್ರತೆ ದೊರೆಯುವಂತಾಗುತ್ತದೆ.


'ನನ್ನ ಮಾತೃಭಾಷೆ ಕನ್ನಡ ಕಲಿತೂ ಇಲ್ಲಿಯೇ ದುಡಿದು ಬಾಳಬಹುದು' ಎಂಬ ವಿಶ್ವಾಸ ಜನರಲ್ಲಿ ಸೃಷ್ಟಿಯಾಗುವುದು. ಅತ್ಯಗತ್ಯ. ಆದರೆ ಏಕೀಕರಣದ ಆಶಯವಾದ ಕನ್ನಡ ಆಡಳಿತ ಭಾಷೆಯಾಗಬೇಕೆಂದ ಕಷ್ಟ ಆಗ್ರಹವೂ, ಭಾಷೆಯ ಉಳಿವಿಗೆ, ಜನರ ಹಿತರಕ್ಷಣೆಗೆ ಅತ್ಯಗತ್ಯವಾದ ಈ ಅಂಶವು ಇನ್ನೂ ಜಾರಿಯಾಗಲಿಲ್ಲ. ಆಡಳಿತದಲ್ಲಿದ್ದ ಎಲ್ಲಾ ಸರ್ಕಾರಗಳೂ ಮಾತನ್ನಾಡುತ್ತವೆಯಾದರೂ ಅದರ ಜಾರಿಗೆ ಬದ್ಧವಾಗದೇ ನವೆಂಬರ್‌ನ ಮಂತ್ರವಾಗಿರುವುದು ಸರ್ಕಾರಗಳ ಜನದ್ರೋಹತನವನ್ನು ಎತ್ತಿ ತೋರಿಸುತ್ತದೆ. ಈಗಲೂ ಕನ್ನಡಭಾಷೆಗೆ ಜಾಗತೀಕರಣದ ಧಾಳಿಯು ಕುತ್ತಾಗಿದೆ. ಕನ್ನಡ ಕಲಿತರೆ ಬದುಕಲಾರವು ಬದುಕಬೇಕಾದರೆ ವಸಾಹತುಶಾಹಿ ಭಾಷೆ ಕಲಿಯಲೇಬೇಕೆಂಬ ಒತ್ತಡಕ್ಕೆ ಹಿಡಿದ ದುರಂತದ ಕನ್ನಡಿ ಇದರತ್ತ ನಮ್ಮ ಗಮನ ಒತ್ತು ಇರಬೇಕು.

ಇನ್ನೊಂದು ಬಹಳ ಗಂಭೀರ ಸಂಗತಿಯೆಂದರೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಸಿಕ್ಕಿರುವುದರಿಂದ ತಮಗೆ ಅಪಾರ ಸಂತಸವಾಗಿದೆ ಎಂದು ಮುಖ್ಯಮಂತ್ರಿ ಹೇಳಿರುವುದರ ಸತ್ಯಾಸತ್ಯತೆ ಪರಿಶೀಲಿರುವುದು ಅಗತ್ಯ. ಬಿಜೆಪಿ, ಅದರ ಮಾತೃ ಸಂಸ್ಥೆಯಾಗಿರುವ ಆರ್.ಎಸ್.ಎಸ್.ಗೆ ನಿಜಕ್ಕೂ ಕನ್ನಡ ಹಾಗೂ ಇಂತಹ ಭಾಷೆಗಳು ಬೆಳೆಯುವುದು ಬೇಕಾಗಿದೆಯೇ? ಅದಕ್ಕೆ ಬೇಕಿಲ್ಲ. ಹಿಂದಿ ಭಾಷೆಯನ್ನೇ ಏಕೈಕ ರಾಷ್ಟ್ರಭಾಷೆಯಾಗಿ ಘೋಷಿಸಬೇಕೆಂದು ಅದು ಪ್ರತಿಪಾದಿಸುತ್ತಾ ಬಂದಿದೆ. ಹಿಂದಿಯನ್ನು(ಸಂಸತವನ್ನು) ಉಳಿದ ಎಲ್ಲಾ ಭಾರತೀಯ ಭಾಷೆಗಳ ಮೇಲೆ ಹೇರಲು ಏನೆಲ್ಲಾ ಕಸರತ್ತು ಮಾಡುತ್ತಿದೆ. 'ಹಿಂದಿ, ಹಿಂದೂ, ಹಿಂದುಸ್ಥಾನ' ಎಂಬ ಅದರ ಘೋಷಣೆ ನೆಲದ ಜನಭಾಷೆಗಳು ಹಾಗೂ ಸಂಸತಿಯ ವೈವಿಧ್ಯತೆಯ ಮೇಲೆ ಸಾರಿದ ಸಮರ ಘೋಷಣೆ. ಮಾತ್ರವಲ್ಲ ಭಾಷೆಯನ್ನು ಕೋಮುವಾದೀಕರಿಸುವ ಯತ್ನ. ಹೀಗಿರುವಾಗ ಕನ್ನಡದ ಬಗ್ಗೆ ಮುಖ್ಯಮಂತ್ರಿ, ಬಿಜೆಪಿ ಮಾತನಾಡುವುದು ಒಂದು ಡೋಂಗಿತನದ್ದು. ಇಂತಹ ಡೋಂಗಿತನ ಇಲ್ಲವೆನ್ನುವುದಾದರೆ ಕನ್ನಡವನ್ನು ಒಳಗೊಂಡು ಎಲ್ಲಾ ಜನ ಭಾಷೆಗಳೂ ರಾಷ್ಟ್ರೀಯ ಭಾಷೆಗಳು ಎಂಬ ವಾಸ್ತವವನ್ನು ಈ ಸಂಘ ಪರಿವಾರ ಒಪ್ಪುವುದೇ? ಆದರೆ ಇದುವರೆಗೂ ಒಪ್ಪಿಲ್ಲ.. ಹಾಗೆಯೇ ಈಗಲೂ ಜನರಿಂದ ದೂರವಾಗಿರುವ ಸತ್ತ ಭಾಷೆಯೆಂದೂ ಕರೆಯಲ್ಪಡುವ ಸಂಸತವನ್ನು ವಿಜೃಂಭಿಸಲು ಅದು ಮಾಡುವ ಪ್ರಯತ್ನ ಅದರ ನಿಜ ಪ್ರೀತಿಯನ್ನು ಆಳುವ ವರ್ಗದ ಫ್ಯಾಶಿಸ್ಟ್ ಗುಣವನ್ನೂ ತೋರುತ್ತದೆ.


ಪ್ರಜಾಸತ್ತಾತ್ಮಕ ವಿರೋಧಿ ಫ್ಯಾಶಿಸ್ಟ್ ನಿಲುವಿನಿಂದಾಗಿಯೇ ಭಾಷೆಯನ್ನು ಕೋಮುವಾದೀಕರಣಕ್ಕೆ ಬಳಸುತ್ತದೆ. ನಮ್ಮದೇ ಭಾರತೀಯ ಭಾಷೆಯಾಗಿರುವ ವಿವಿಧ ಜಾತಿಗಳ ಜನರು ಬಳಸುವ ಉರ್ದುವನ್ನು ಮುಸ್ಲಿಂರು ಹೆಚ್ಚು ಬಳಸುತ್ತಾರೆಂದು ಅದರ ವಿರುದ್ಧ ಕನ್ನಡವನ್ನು ಎತ್ತಿ ಕಟ್ಟುತ್ತದೆ. ಹಾಗೆಯೇ ಬ್ರಿಟೀಷರ ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ಭಾಷಿಕ ಪ್ರದೇಶಗಳನ್ನು ಒಂದೆಡೆ ಸೇರಿಸಲು ಏಕೀಕರಣ ಚಳುವಳಿ ನಡೆದಿತ್ತು. ಆದರೆ ಚಿಕ್ಕ ರಾಜ್ಯಗಳ ಹೆಸರಿನಲ್ಲಿ ಇಂದು ಕರ್ನಾಟಕವನ್ನೇ ಒಡೆಯಲು ಅದು ಬಯಸುತ್ತದೆ. ಅಂತಹ ವಿಭಜಕ, ಪ್ರತ್ಯೇಕತಾವಾದವನ್ನು, ಅಂತಹ ಶಕ್ತಿಗಳನ್ನು ಸಕ್ರಿಯವಾಗಿ ಬೆಂಬಲಿಸುತ್ತದೆ. ಇದು ದೇಶದ ಮಟ್ಟದಲ್ಲಿಯೂ ನಡೆಯುವ ಧಾಳಿ. ವಸ್ತುಸ್ಥಿತಿ ಹೀಗಿರುವಾಗ ಯಡಿಯೂರಪ್ಪನವರಾಗಲೀ, ಬಿಜೆಪಿ ನಾಯಕರಾಗಲೀ ಸಂಭ್ರಮಿಸುವುದಾಗಲೀ, ಅಥವಾ ದೆಹಲಿಯವರೆಗೆ ಹೋಗಿ ಧರಣಿ ಕುಳಿತು ಬರುವುದಾಗಲೀ- ಕೇವಲ ತೋರಿಕೆಯ ಪ್ರೀತಿ, ಈಗಲೂ ಕನ್ನಡ ಭಾಷಾ ಪ್ರೇಮಿಗಳನ್ನು, ಭಾಷಾಂಧ ಶಕ್ತಿಗಳನ್ನು ದುರ್ಬಳಕೆ ಮಾಡುವ ದೂರಗಾಮಿ ತಂತ್ರದ ಭಾಗವಾಗಿದೆ.

ಇಂತಹ ಸ್ಥಿತಿಯಲ್ಲಿ ಕನ್ನಡ ಸಮೃದ್ಧವಾಗಿ ಬೆಳೆಯಲು ಇರುವ ಜಾಗತೀಕರಣದಂತಹ ಪ್ರಕ್ರಿಯೆಯ ಎಲ್ಲಾ ಅಡ್ಡಿಗಳನ್ನು, ಕೋಮುವಾದಿ ಫ್ಯಾಶಿಸ್ಟ್ ಕರಾಳ ಧಾಳಿಗಳು ಸವಾಲುಗಳನ್ನು ಎದುರಿಸುವುದು ನಮ್ಮೆಲ್ಲರ ಸಂಕಲ್ಪವಾಗಬೇಕು.

ಅಡ್ವಾನಿ ಆತ್ಮದಲ್ಲಿ ಜನರೆಲ್ಲಿ...?



ರಾಜ್ಯಕ್ಕೆ ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ಬಂದು ಹೋಗಿದ್ದಾರೆ. ಬೆಂಗಳೂರಿನಲ್ಲಿ ಅವರ ಆತ್ಮಕಥನದ ಬಿಡುಗಡೆ. ಮುಖ್ಯವಾಗಿ ಹಂಪಿಯ ಉತ್ಸವದ ಮುಖ್ಯ ಅತಿಥಿ, ಕುಡತಿನಿಯ ವಿದ್ಯುತ್ ಘಟಕದ ಉದ್ಘಾಟನೆ ಹೀಗೆ ಹಲವು ಕಾರ್ಯಕ್ರಮಗಳಲ್ಲಿಯೂ ಬಿಸಿಯಾಗಿದ್ದಾರೆ. ಅಡ್ವಾಣಿಯನ್ನು ಕರೆಸಿದ್ದು ಬಿಜೆಪಿ ಸರ್ಕಾರ. ಯಡಿಯೂರಪ್ಪ ಹಾಗೂ ಅವರ ಪರಿವಾರದಲ್ಲಿ ಅಡ್ವಾಣಿ ಈಗಾಗಲೇ ಪ್ರಧಾನಿ ಎಂಬಷ್ಟು ಒತ್ತು



ಕೊಟ್ಟಿದ್ದಾರೆ. ಅವರನ್ನು ಜನರೆದುರು ಬಣ್ಣಿಸಿದ ರೀತಿ ನೀಡಿದ ಪ್ರೊಜೆಷನ್‌ಗೆ ರಾಜಕೀಯ ಉದ್ದೇಶ ಇಲ್ಲದಿರಲಿಲ್ಲ. ಇದು ಲೆಕ್ಕಾಚಾರದ ಭೇಟಿಯೇ.

ಅಡ್ವಾಣಿಯವರ ಆತ್ಮಕಥನ ಬಿಡುಗಡೆಯನ್ನು ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ವ್ಯವಸ್ಥೆಗೊಳಿಸಿದ್ದು, ವಿಶೇಷ. ಇದಕ್ಕೆ ಇನ್‌ಫೋಸಿಸ್‌ನ ನಾರಾಯಣಮೂರ್ತಿ ಪಾಲ್ಗೊಳ್ಳುವಿಕೆಯೂ ಗಮನಿಸುವಂತಹದ್ದು. ಅಡ್ವಾಣಿ ಆತ್ಮಕಥನವು ಚರಿತ್ರೆಯ ಕೆಲವು ಮಗ್ಗಲನ್ನು, ತಮ್ಮ ದೃಷ್ಟಿಗೆ ತಿರುಚಿದ ಸಂಗತಿಯನ್ನು ಹಲವಾರು ಅಸಂಬದ್ಧತೆಗಳ ಕಂತೆಯಾಗಿರುವುದು ಈಗಾಗಲೇ ಲೋಕದ ಗಮನಕ್ಕೆ ಬಂದಿದೆ.ಅತ್ಯಂತ ನಿರ್ಣಾಯಕವಾದ ರಾಜಕೀಯ ಸಂದರ್ಭ ಹಾಗೂ ವಿದ್ಯಾಮಾನಗಳ ಅನಾವರಣ ಬಗ್ಗೆ 'ಆಧುನಿಕ ಉಕ್ಕಿನ ಈ ಮನುಷ್ಯ' ಬರೋಬ್ಬರಿ ಬಾಯಿ ಮುಚ್ಚಿಕೊಂಡಿರುವುದು ವಿಶೇಷವಾಗಿ ಉಲ್ಲೇಖಿತಗೊಂಡಿವೆ.

ಹೀಗೇಕೆ ಎಂದು ಕೇಳಿದಾಗ ಅಡ್ವಾಣಿ ಆಗಸ ನೋಡಿ ಬಿಗಿಯಾಗಿ ಹಿಡಿದುಕೊಂಡಿರುವ ಮುಷ್ಠಿಯನ್ನು ಕುಟ್ಟಿದ್ದಾರೆ. ಆತ್ಮಕಥನ ಎಂದೂ, ಹಲವು ದಶಕಗಳ ರಾಜಕೀಯ ಚರಿತ್ರೆಯ ದಾಖಲು, ಇದರ ಆಧಾರದಲ್ಲಿ ಹಲವು ಸಂಶೋಧನೆಗಳನ್ನು ಮಾಡಬಹುದು ಎಂದೆಲ್ಲಾ ಹೇಳುವ 'ನನ್ನ ದೇಶ ನನ್ನ ಜನ' (ಸಂಘ ಪರಿವಾರದ ದೇಶ-ಜನ ಎಂದು) ದಲ್ಲಿ ವಸ್ತು ನಿಷ್ಠತೆ ಕಾಯ್ದುಕೊಳ್ಳದೇ, ಆತ್ಮ ಅಥವಾ ಜೀವನದ ಅಂತರಂಗವನ್ನು ತೆರೆದಿಡದೇ ಎಂದಿನಂತೆ 'ಮುಚ್ಚಿಟ್ಟ ಅಜೆಂಡಾ' ಗಳನ್ನು ಪ್ರಜ್ಞಾವಂತರು ಗುರುತಿಸಿದ್ದಾರೆ. ಹಿಪೊಕ್ರಸಿಯನ್ನು ರಾಜಕೀಯ ತಂತ್ರದ ಒಂದು ಅವಿನಾಭಾವ ಅಂಗವೆಂದು ನಂಬಿದವರು ಹೀಗೆಲ್ಲಾ ಹೊಗಳಿ ಉದ್ಘರಿಸಬಹುದು ಎಂಬುದಕ್ಕೆ ಈ ಸಮಾರಂಭವೂ ಒಂದು ಸಾಕ್ಷಿ.

ಅಲ್ಲಿ ಅಡ್ವಾಣಿ ಆಡಿದ ಮಾತುಗಳೂ ಅಂತಹುವೇ. 'ಭಾರತ ಶಕ್ತಿಶಾಲಿ ರಾಷ್ಟ್ರವಾಗಬೇಕು. ಸದೃಢ ನಾಯಕತ್ವ ಬೇಕು, ಆದರ್ಶ ರಾಜಕಾರಣ ಮರೆಯಾಗುತ್ತಿದೆ. ಹೀಗೆಲ್ಲಾ, ಇದರರ್ಥ ಏನು ಎಂಬುದೇ ಪ್ರಶ್ನೆ.

ಜನ ಶಕ್ತಿಶಾಲಿಯಾಗದೇ ದೇಶ ಶಕ್ತಿಶಾಲಿಯಾಗದು, ಜನರ ಹಿತ ರಕ್ಷಣೆ ಅದರತ್ತ ದೃಢತೆ ಇಲ್ಲದೇ ಮಿಲಿಟರಿ ಮಾತಿನ ದೃಢತೆ ಸುಭದ್ರತೆ ತರದು, ಇನ್ನೂ ಯಡಿಯೂರಪ್ಪ, ಜನಾರ್ಧನರೆಡ್ಡಿಗಳಂತಹ ನಡುವೆ ನಿಂತು ಆ ಆದರ್ಶ ರಾಜಕಾರಣದ ಮಾತು ಹಾಸ್ಯಾಸ್ಪದವೇ. ಇಂತಹುಗಳಲ್ಲಿ ಪರಿಹಾರವಾಗಿ ಅಧಃಪತನದ, ದೇಶ ಜನ ವಿರೊಧಿ ಕೃತ್ಯಗಳಿಂದಲೇ ಅಧಿಕಾರಕ್ಕೆ ಬರಬೇಕೆಂಬ ತಹ ತಹಿಕೆಯು ಇರುವಾಗ ಸಂತನಂತೆ ಆಡುವುದು ಹೀನ ರಾಜಕಾರಣಕ್ಕೆ ಆದರ್ಶದ ಗಿಲೀಟು ಹಚ್ಚುವ ಯತ್ನವೇ ಆಗಿದೆ.

ಹಾಗೆಯೇ ಹಂಪಿ ಉತ್ಸವವನ್ನು ಬಿಜೆಪಿ ಪೂರ್ಣವಾಗಿ ತನ್ನ ವೇದಿಕೆಯಾಗಿ ಬಳಸಿಕೊಂಡಿದೆ. ಅತಿಥಿಯಾಗಿದ್ದ ಅಡ್ವಾಣಿಯೂ ಯಡಿಯೂರಪ್ಪನವರ, ಬಿಜೆಪಿಯ ಈ ಸರ್ಕಾರವನ್ನು ವಿಜಯನಗರ ಸಾಮ್ರಾಜ್ಯಕ್ಕೆ, ಕೃಷ್ಣದೇವರಾಯನಿಗೆ ಹೋಲಿಸಿ ಪೂಸಿ ಹೊಡೆದದ್ದು ಒಂದು ಅಸಹ್ಯದ ದಾಖಲೆಯೇ.

'ನನ್ನ ಜನ ನನ್ನ ದೇಶ' ಎಂದೆಲ್ಲಾ ದೇಶದಾದ್ಯಂತ ಪ್ರವಚನ ನೀಡುವ ಅಡ್ವಾಣಿಗೆ ರಾಜ್ಯದಲ್ಲಿ ನಿತ್ಯವೂ ಆತ್ಮಹತ್ಯೆ ಗೀಡಾಗುವ ರೈತರ ಸ್ಥಿತಿ ಕಾಣಲಿಲ್ಲ. ಹೆಲಿಕ್ಯಾಪ್ಟರ್ ಹಾರುವ-ಕಾರು ಮಾರ್ಗದಲ್ಲಿನ ಗುಡಿಸಲು ವಾಸಿಗಳು, ಜನಸಾಮಾನ್ಯರಿಗೆ ರೇಷನ್ ಕಾರ್ಡ್ ಸಿಗದೇ ಪಡುವ ಪರಿಹಾರ ಜನರಿಗೆ ಬರಲೇ ಇಲ್ಲ. ನಿತ್ಯವೂ ಒಂದಿಲ್ಲೊಂದು ನೆಪವೊಡ್ಡಿ ಸಂಘ ಪರಿವಾರ ಹಾಗೂ ಅದಕ್ಕೆ ಬೆಂಬಲವಾಗಿ ರಕ್ಷಿಸುವ, ಭಾಗಿಯೂ ಆಗುವ ರಾಜ್ಯ ಸರ್ಕಾರ ಅಲ್ಪಸಂಖ್ಯಾತ ಮುಸ್ಲಿಂರು, ಕ್ರಿಶ್ಚಿಯನ್ನರ ಮೇಲೆ ನಡೆಸುತ್ತಿರುವ ಅಮಾನವೀಯ ಧಾಳಿ, ಅದರಿಂದ ಜನರ ನರಳಾಟ ಅಡ್ವಾಣಿ ಆತ್ಮವನ್ನು ಕಲಕಲಿಲ್ಲ. ದಿನವೂ ಬದುಕಿನ ರಕ್ಷಣೆಗಳಾಗಿ ಹೋರಾಟ, ದಲಿತರ ಮೇಲೆ ನಿಲ್ಲದ ದೌರ್ಜನ್ಯಗಳು, ಮಹಿಳೆಯರ ಮೇಲೆ ನಡೆದ ಅತ್ಯಾಚಾರ, ದಬ್ಬಾಳಿಕೆ.... ಇವಾವೂ ಕಂಡೂ, ಕಾಣದಂತೆ, ಕಾಣಲು ನಿರಾಕರಿಸಿ ಮುತ್ತು ರತ್ನ ಅಳೆದು ಮಾರಿದ, ತೂರಿದ ಅರಮನೆ ಕೀರ್ತನೆ ಮಾಡುವ ಅಡ್ವಾಣಿಯವರ ದೇಶ ಯಾವುದು? ಜನ ಯಾರು?

ಕಲ್ಲು ಕಂಬಗಳಿಂದ ನಾದ ಹೊರಡಿಸಿ ಉದ್ಧಾರ ತೆಗೆದು ಅದೇ ಸುದ್ದಿಯೆಂದು ಮಾಡುವವರಿಗೆ ಗದ್ದುಗೆ ರಾಜಕೀಯ ಲೆಕ್ಕಾಚಾರವೇ ಕಾಳಜಿ. ಉಪ ಚುನಾವಣೆಯಲ್ಲಿ 8 ಸ್ಥಾನ ಗೆಲ್ಲಬೇಕು. ಬಿಜೆಪಿ ಗುರಿ ಇರಿಸಿಕೊಂಡಂತೆ 25 ಸಂಸತ್ತಿನ ಸ್ಥಾನವೂ ಗೆದ್ದು ಪ್ರಧಾನಿ ಪಟ್ಟಕ್ಕೆ ಹತ್ತಿರಬಾಗಬೇಕು. ಹೀಗಾಗಿ ಇದು ಎಲೆಕ್ಷನ್ ತಯಾರಿ...

❖ ❖ ❖


'ಕಾಂಗ್ರೆಸ್ ಆತ್ಮಾವಲೋಕನ'........

ವಿಧಾನ ಸಭೆಯ ಚುನಾವಣೆಗಳು ಕಳೆದು ಆರು ತಿಂಗಳಾದ ನಂತರ ಕರ್ನಾಟಕದ ಕಾಂಗ್ರೆಸ್ ಸೋಲಿಗೆ ಕಾರಣವೇನೆಂದು ಆತ್ಮಶೋಧನೆಗೆ ಕುಳಿತಿತ್ತು. ಇಂತಹ 'ಗಂಭೀರ' ಗೋಷ್ಠಿಗಳು ನಡೆಯುವುದೇ ರೆಸಾರ್ಟ್‌ಗಳಲ್ಲಿ ತಡವಾಗಿಯಾದರೂ ಇಂತಹ ಅವಲೋಕನಕ್ಕೆ ಮುಂದಾಗಿರುವುದು ಉತ್ತಮವೇ. ಇದಕ್ಕೆ ಮುಂಬರುವ ಉಪ ಚುನಾವಣೆ, ಲೋಕಸಭಾ ಚುನಾವಣೆಯೇ ಪ್ರೇರಣೆ ಎಂಬುದು ಸುಳ್ಳಲ್ಲ. ಕಾಂಗ್ರೆಸ್ ಇಂತಹ ವಿಮರ್ಶೆಗೆ ತನ್ನನ್ನು ಒಡ್ಡಿಕೊಳ್ಳುವುದೇ ತೀರಾ ಕಡಿಮೆ. ಆದರೂ ಹಿಂದೆ ಇಂತಹುದೇ ಹೆಸರಿನಲ್ಲಿ ಕೆಲವು ಸಭೆಗಳು ನಡೆದಿವೆ.

ಈ ಸಭೆಯಲ್ಲಿ ತನ್ನ ಸೋಲಿಗೆ ಏನು ಕಾರಣ ಎಂಬ ಬಗ್ಗೆ ವಿವರವಾಗಿ, ವಸ್ತುನಿಷ್ಠವಾಗಿ ಚಿಂತಿಸಿ, ತಪ್ಪುಗಳನ್ನು ಸರಿಪಡಿಸುವ

ಪುಟ 14 ಕ್ಕೆ

ಬುದ್ಧದೇವ ಹತ್ಯೆಗೆ ಮಾವೋವಾದಿ ಯತ್ನ



ಪಶ್ಚಿಮ ಬಂಗಳಾದ ಜನಪ್ರಿಯ ಮುಖ್ಯಮಂತ್ರಿ ಬುದ್ಧದೇವರನ್ನು ಅಡವಿಯಲ್ಲಿ ಅಡಗಿ ಕುಳಿತ ಮಾವೋವಾದಿಗಳೆಂದು ಹೇಳಿಕೊಳ್ಳುವ ವಿಧ್ವಂಸಕರು ಕೊಲ್ಲುವ ಸಂಚು ರೂಪಿಸಿದ್ದರು. ಅದೃಷ್ಟವಶಾತ್ ಬುದ್ಧದೇವ ಪಾರಾಗಿದ್ದಾರೆ. ನಕ್ಸಲೀಯರ ನಿಜ ಮುಖ ಬಯಲಾಗಿದೆ.

ಕೇವಲ ಐದು ನಿಮಿಷ ತಡವಾಗಿದ್ದರೂ ಮಾವೋವಾದಿಗಳ ಸಂಚಿಗೆ ಬುದ್ಧದೇವ ಬಲಿಯಾಗುತ್ತಿದ್ದರು. ಅವರನ್ನು ಎಸ್ಕಾರ್ಟ್ ಮಾಡುತ್ತಿದ್ದ ರಕ್ಷಣಾ ಸಿಬ್ಬಂದಿ ಅಂದು ಸ್ವಲ್ಪ ವೇಗವಾಗೇ ಹೊರಟಿದ್ದರು. ಬುದ್ಧದೇವ ಜೊತೆ ಕೇಂದ್ರ ಸಚಿವ ರಾಮ್ ವಿಲಾಸ್ ಪಾಸ್ವಾನ್ ಸಹ ಇದ್ದರು.

ಮಿಡ್ನಾಪುರ ಜಿಲ್ಲೆಯ ಸಲೂಬನಿಯಲ್ಲಿ ಏಷ್ಯಾದ ಬೃಹತ್ ಕಬ್ಬಿಣ ಮತ್ತು ಉಕ್ಕು ಘಟಕ ನಿರ್ಮಾಣಕ್ಕೆ ಅಡಿಗಲ್ಲು ಹಾಕಿ ಹೊರಟಿದ್ದಾಗ ಮಾವೋವಾದಿಗಳು ಕಲೈಚನಂದಿ ಸೇತುವೆ ಕೆಳಗೆ ಲ್ಯಾಂಡ್ ಮೈನ್ ಅಳವಡಿಸಿ ಬುದ್ಧರನ್ನು ಹತ್ಯೆ ಮಾಡುವ ಸಂಚು ರೂಪಿಸಿದ್ದರು.

ಪುರುಲಿಯಾ ಪ್ರದೇಶದ ಸಲೂಬನಿ ದಟ್ಟ ಅರಣ್ಯ ಪ್ರದೇಶವಾಗಿದ್ದು ಪಶ್ಚಿಮ ಬಂಗಾಳದ ಗಡಿ ಪ್ರದೇಶದಲ್ಲಿದ್ದು ಸಾಕಷ್ಟು ರಕ್ಷಣಾ ಸಿಬ್ಬಂದಿ ಕೊರತೆ ಅನುಭವಿಸುತ್ತಿದೆ.

'ನೀವ್ಯಾಕೆ ತುಂಬಾ ಕಡಿಮೆ ರಕ್ಷಣಾ ಸಿಬ್ಬಂದಿಯನ್ನು ಇಟ್ಟುಕೊಂಡಿರುತ್ತೀರಿ' ಎಂದು ಪತ್ರಕರ್ತರೊಬ್ಬರು ಬುದ್ಧದೇವ ಅವರನ್ನು ಪ್ರಶ್ನಿಸಿದ್ದರು. 'ನಾನು ಜನರ ನಾಯಕನಾಗಿದ್ದು ಜನರೇ ರಕ್ಷಣೆ ಕೊಡುತ್ತಾರೆ. ಸಿಬ್ಬಂದಿ ಏಕೆ' ಎಂದು ಪ್ರತಿಕ್ರಿಯಿಸಿದ್ದರು. ಆದರೆ ಇಲ್ಲಿನ ದಟ್ಟ ಅಡವಿಯಲ್ಲಿ ಅವರ ಜನರ ಇರಲು ಸಾಧ್ಯವೇ? ಭಾರತದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಪಡೆದುಕೊಂಡಿರುವ ರಕ್ಷಣಾ ಸಿಬ್ಬಂದಿಗೆ ಹೋಲಿಸಿದರೆ ಅತ್ಯಂತ ಕಡಿಮೆ ರಕ್ಷಣೆ ಹೊಂದಿರುವುದು ಬುದ್ಧದೇವ. ಹೀಗಿರುವಾಗ ಪಶ್ಚಿಮ ಬಂಗಾಳವನ್ನು ವೇಗವಾಗಿ ಕೈಗಾರೀಕರಣಗೊಳಿಸಿ ಅಲ್ಲಿನ ಜನತೆಯ ಆರ್ಥಿಕ ಜೀವನ ಮಟ್ಟವನ್ನು ಹೆಚ್ಚಿಸಬೇಕೆಂಬ ಅವರ ನಿರಂತರ ಪ್ರಯತ್ನಕ್ಕೆ ವಿಚ್ಛಿದ್ರಕಾರಿ ಶಕ್ತಿಗಳು ತಡೆಯೊಡ್ಡುತ್ತಿವೆ.

ಕೆಲವು ವಿಶ್ವಾಸನೀಯ ಮೂಲಗಳ ಪ್ರಕಾರ ತರಬೇತಿ ಹೊಂದಿದ, ಸ್ವಯಂ ಸೇವಾ ಸಂಘಟನೆಗಳ ಅಪಾರ ಆರ್ಥಿಕ ನೆರವು ಹೊಂದಿರುವ ಆಂಧ್ರದ 40 ಮಾವೋವಾದಿಗಳು ಈ ಸಂಚು ರೂಪಿಸಿದ್ದಾರೆ. ರೇವತಿ ಎಂಬ ಸ್ವಯಂ ಘೋಷಿತ ಮಹಿಳೆ ಈ ಸಂಚಿನ ರೂವಾರಿಯಾಗಿದ್ದಾರೆ. ನಮ್ಮ ದಾಳಿಗಳಿಗೆ ರಾಜ್ಯದಲ್ಲಿನ ಸಿಪಿಎಂ ಪಕ್ಷ ಸ್ಪರ್ಧಿಯೇ ಅಲ್ಲ, ನಮಗೆ ಪ್ರತಿರೋಧ ಒಡ್ಡುವುದು ಸಿಆರ್‌ಪಿಎಫ್ ಮಾತ್ರ. ಅವರ ವಿರುದ್ಧ ನಮ್ಮ ತೀವ್ರ ದಾಳಿಗಳನ್ನು ರೂಪಿಸಿದ್ದೇವೆ ಎಂತಲೂ ಈ ಮಾವೋವಾದಿಗಳು ಹೇಳಿದ್ದಾರೆ. ಅವರ ಬಳಿ ಎಂತೆಂಥಾ ಶಸ್ತ್ರಾಸ್ತ್ರಗಳಿವೆ ಎಂಬುದು ಇದರಿಂದಲೇ ತಿಳಿಯುತ್ತದೆ.

ಕಳೆದ ಕೆಲವು ವರ್ಷಗಳಿಂದ ಪಶ್ಚಿಮ ಬಂಗಾಳದಲ್ಲಿ ಮಾವೋವಾದಿ ಚಟುವಟಿಕೆಗಳು ತೀವ್ರಗೊಂಡಿವೆ. ಮಿಡ್ನಾಪುರ, ಪುರುಲಿಯಾ ಮತ್ತು ಬಂಕೂರ ಜಿಲ್ಲೆಗಳಲ್ಲಿ ತಮ್ಮ ಕಾರ್ಯಾಚರಣೆಗಳನ್ನು ವಿಸ್ತರಿಸುತ್ತಿದ್ದಾರೆ. ಎಡರಂಗ ಸರ್ಕಾರ ಪಶ್ಚಿಮ ಬಂಗಾಳವನ್ನು ಕೈಗಾರೀಕರಣ ಮಾಡಲು ಹೊರಟಿರುವುದರ ವಿರುದ್ಧ ರೂಪಿಸಿರುವ 'ಮಹಾಜೋತ್' ತೃಣಮೂಲ ಕಾಂಗ್ರೆಸ್, ಎನ್‌ಜಿಓಗಳು, ಬಿಜೆಪಿ ಮತ್ತು ಅದರ ಅಂಗಸಂಸ್ಥೆಗಳು ಮಾವೋವಾದಿ ಚಟುವಟಿಕೆಗಳ ವಿಸ್ತರಣೆಗೆ ಉತ್ತಮ ಅವಕಾಶ ದೊರಕಿಸಿಕೊಟ್ಟಿದ್ದಾರೆ.

ನಂದಿಗ್ರಾಮವನ್ನು ಮಾವೋವಾದಿಗಳು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದ ಸಂದರ್ಭದಲ್ಲಿ ಸಿಆರ್‌ಪಿಎಫ್ ನಡೆಸಿದ ಕಾರ್ಯಾಚರಣೆ ಸಂದರ್ಭದಲ್ಲಿ ಅಪಾರ ಪ್ರಮಾಣದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ದೊರತಿವೆ. ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷಗಳು ಇವರಿಗೆ ರಕ್ಷಣೆ ಒದಗಿಸಿರುವುದು ಬಹಿರಂಗಗೊಂಡಿತು. ಈ ಕುರಿತು ರಾಷ್ಟ್ರೀಯ ಭದ್ರತಾ ಸಲಹೆಗಾರರು ಸಹ ಆತಂಕ ವ್ಯಕ್ತಪಡಿಸಿದ್ದರು. ನಂದಿಗ್ರಾಮವನ್ನು ಜನವಸತಿ ರಹಿತ ಪ್ರದೇಶವಾಗಿ ರೂಪಿಸಿದ್ದೇವೆ. ಇಂತಹ ಪ್ರದೇಶಗಳು ಇನ್ನಷ್ಟು ಸೃಷ್ಟಿಯಾಗಲಿವೆ ಎಂಬ ಲಿಖಿತ ದಾಖಲೆಗಳು ಸಿಆರ್‌ಪಿಎಫ್ ದಾಳಿ ಸಂದರ್ಭದಲ್ಲಿ ದೊರೆತಿದ್ದವು.

ಭೂಮಿ ಉಚ್ಛೇದ್ ಸಮಿತಿಗೆ ತೃಣಮೂಲ ಕಾಂಗ್ರೆಸ್ ನಾಯಕತ್ವ ನೀಡಿದೆ ಎಂದು ಯಾರಾದರೂ ಭಾವಿಸಿದರೆ ಅದಕ್ಕಿಂತಲೂ ಮೂರ್ಖತನ ಮತ್ತೊಂದು ಇಲ್ಲ ಎಂತಲೇ ಹೇಳಬೇಕು. ಇದು ವಾಸ್ತವವಾಗಿ ಮಾವೋವಾದಿಗಳ ಹಿಡಿತದಲ್ಲಿದ್ದು ಅದನ್ನು ಸಶಸ್ತ್ರ ದಳಗಳಾಗಿ ಪರಿವರ್ತಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಇನ್ನಷ್ಟು ಭದ್ರತಾ ಪಡೆಗಳನ್ನು ರವಾನಿಸಬೇಕೆಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಮಾಡಿತು. ಈ ಮನವಿಗೆ ಕೇಂದ್ರ ತಕ್ಷಣ ಸ್ಪಂದಿಸಲಿಲ್ಲ. ವಿಳಂಬಕ್ಕೆ ಕಾರಣವೇನೆಂಬುದನ್ನು ತಿಳಿಸದೆ ಬೇಜವಾಬ್ದಾರಿಯಿಂದ ವರ್ತಿಸಿತು. ಮುಂದಿನ ಚುನಾವಣೆಗಳಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳುವ ಯೋಜನೆಗಳು ಇರುವುದರಿಂದ ಕಾಂಗ್ರೆಸ್ ಈ ರೀತಿ ವರ್ತಿಸಿದೆ.

ಪಶ್ಚಿಮ ಬಂಗಾಳದಲ್ಲಿ ಎಡರಂಗವನ್ನು ಸೋಲಿಸಲು ರೂಪಿಸಿರುವ ಮಹಾಜೋತ್‌ನಲ್ಲಿ ಬಿಜೆಪಿ ಮತ್ತು ಅದರ ಪರಿವಾರ ಸೇರಿರುವುದು ಇನ್ನಷ್ಟು ಅಪಾಯವನ್ನು ಸೃಷ್ಟಿಸಿದೆ. ಸಂಘ ಪರಿವಾರ ರಾಜ್ಯಾದ್ಯಂತ ತನ್ನ ಕೋಮು ಚಟುವಟಿಕೆಗಳನ್ನು ವಿಸ್ತರಿಸುವಲ್ಲಿ ಮಗ್ನವಾಗಿದೆ. ಭವಿಷ್ಯದಲ್ಲಿ ಈ ಬೆಳವಣಿಗೆಗಳು ಸೌಹಾರ್ದತೆಯಿಂದಿರುವ ರಾಜ್ಯದಲ್ಲಿ ಕೋಮುದ್ವೇಷ ಸೃಷ್ಟಿಸಲು ಕಾರಣವಾಗಲಿದೆ.

ಮಾವೋವಾದಿಗಳು ನಡೆಸುವ ಸಭೆ, ಸಮಾರಂಭಗಳಲ್ಲಿ ಸಿಪಿಐ(ಎಂ) ನಮ್ಮ ಮೊದಲ ಶತ್ರು ಎಂದು ಗಂಟಾಘೋಷವಾಗಿ ಪ್ರಕಟಿಸಿದ್ದಾರೆ. ಅವರು ಹೀಗೆ ಹೇಳುವುದರಲ್ಲಿ ಹೊಸತೇನ ೂ ಇಲ್ಲದಿದ್ದರೂ ಅವರು ನಡೆಸುತ್ತಿರುವ ಸಶಸ್ತ್ರ ದಾಳಿಗಳನ್ನು ಹತ್ತಿಕ್ಕಲೇಬೇಕು. ಒಂದೆಡೆ ಮಾವೋವಾದಿ ಶಕ್ತಿಗಳಿಗೆ ನೆರವು ಒದಗಿಸುತ್ತಿರುವ ತೃಣಮೂಲ ಕಾಂಗ್ರೆಸ್ ಮತ್ತೊಂದೆಡೆ ಕೋಮುವಾದಿ ಸಂಘಟನೆಗಳು ಬೆಳೆಯಲು ಸಹಕಾರ ನೀಡುತ್ತಿದೆ. ಹಾಗಾಗಿ ಪಶ್ಚಿ ಮ ಬಂಗಾಳವನ್ನು ರಕ್ಷಿಸಬೇಕಾದ ಬೇಜವಾಬ್ದಾರಿ ಅಲ್ಲಿನ ಎಡರಂಗ ಸರ್ಕಾರ ಮತ್ತು ಜನತೆಯ ಮೇಲಿದೆ.

ನಿವೃತ್ತಿಯ ಸುತ್ತ ಮುತ್ತ......

'ಜಂಬೋ' ಅನಿಲ್ ಕುಂಬ್ಳೆ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. 'ಕೋಲ್ಕತ್ತ ಮಹಾರಾಜ' ಸೌರವ್ ಗಂಗೂಲಿಯನ್ನು ನಿವೃತ್ತಿ ಮಾಡಿದ್ದಾರೆ. ಕ್ರಿಕೆಟ್‌ನಲ್ಲಿ ನೋಡಿ, ಮೂವತ್ತಾರು ಮೂವತ್ತೆಂಟು ವರ್ಷಗಳಿಗೆ ನಿವೃತ್ತಿ. ಆಯ್ಕೆಗಾರರು, ಮಾಜಿಗಳು, ಮಾಧ್ಯಮದವರು ಎಲ್ಲ ಕಡೆಗಳಿಂದ ಆಟಗಾರರನ್ನು ನಿವೃತ್ತಿಮಾಡಲು ಒತ್ತಡ, ರಾಜಕೀಯ. ಅದೇ ನೋಡಿ, ರಾಜಕೀಯದಲ್ಲಿ ನಿವೃತ್ತಿಯೇ ಇಲ್ಲ! ಅಧಿಕಾರ ಕೈ ಬೀಸಿ ಕರೆದರೂ, ಕಾಲಬಳಿ ಬಂದು ಬಿದ್ದರೂ, ಒಲ್ಲೆನೆಂದ ಗಾಂಧೀಜಿ, ಜೆ.ಪಿ. ಅಧಿಕಾರದಿಂದ ಸ್ವಯಂ ನಿವೃತ್ತಿ ತೆಗೆದುಕೊಂಡ ಜೋತಿಬಸು ಮುಂತಾದ ಬೆರಳೆಣಿಕೆಯೂ ಪೂರ್ತಿಯಾಗದಷ್ಟು ಜನರನ್ನು ಬಿಟ್ಟರೆ ಅಧಿಕಾರ ರಾಜಕಾರಣದಲ್ಲಿ ನಿವೃತ್ತಿಯೆಂಬುದಿಲ್ಲ. ಧೀರ್ಘಾಯುಷಿಗಳೆಂದರೆ ರಾಜಕಾರಣಿಗಳು! ಅಧಿಕಾರದ ಕುರ್ಚಿಯೇರಿದ ಮೇಲಂತೂ ಇವರು ಚಿರಾಯುಗಳು! ನಡೆದಾಡುವುದಕ್ಕಾಗದಿದ್ದರೆ ಕಡೆಗೆ ಕುರ್ಚಿಯಲ್ಲಿ ಕೂರಲೂ ಆಗದಿದ್ದರೂ ಅಧಿಕಾರದ ಮಂಚದಲ್ಲಾದರೂ ಮಲಗಿ ರಾಜಕಾರಣ ಮಾಡುತ್ತಾರೇ ವಿನಹ: ಅಧಿಕಾರದಿಂದ ನಿವೃತ್ತಿ ಎಂಬುದಿಲ್ಲ!

ಬಾರಕ್ ಒಬಾಮ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಏನು ಮಾಡುತ್ತಾರೋ ಬಿಡುತ್ತಾರೋ ಅದು ಮುಂದಿನ ಪ್ರಶ್ನೆ. ಆದರೆ ನಲವತ್ತೇಳರ ಒಬ್ಬ ವ್ಯಕ್ತಿ ಅಧ್ಯಕ್ಷನಾಗಿರುವುದಕ್ಕೆ ಅಭಿನಂದಿಸಲೇಬೇಕು! 'ಯೇ ಹೈ ಯಂಗಿಸ್ಥಾನ್...,' ಬರೀ ಪೆಪ್ಸಿ ಕುಡಿಯಲಷ್ಟೇ?. ನಮ್ಮ ದೇಶದಲ್ಲಿ ಚಿಕ್ಕ ವಯಸ್ಸಿನಲ್ಲಿ ರಾಜಕೀಯದಲ್ಲಿ ಮೇಲೇರಬೇಕೆಂದರೆ, ರಾಜಕೀಯದಲ್ಲಿ ಮೇಲಿರುವ ಅವರ ಅಪ್ಪ 'ಮೇಲೆ' ಹೋಗಬೇಕು! ಇದಕ್ಕೆ ಇರಬೇಕು ರಾಜಕೀಯ ಮೇಲಾಟ ಎನ್ನುವುದು?.

ಏನೇ ಆದರೂ ರಾಜಕೀಯದಲ್ಲಿ ಮೇಲೇರಲು ಜನಗಳೊಂದಿಗೆ ಒಡನಾಡಿ ಕಷ್ಟ ಪಡಬೇಕೆಂಬುದಂತೂ ನಿಜ. ಕಷ್ಟ ಪಡದೆ ಮೇಲೇರಿ, ರಾಜಕಾರಣದ ಎಲ್ಲ ಸುಖಗಳನ್ನೂ ಪಡೆಯಲು ಏನು ಮಾರ್ಗ? ಅದೇ ಕಾವಿಕಾರಣ! ಕಾವಿಕಾರಣದಲ್ಲಿ ರಾಜಕಾರಣದ ರಿಸ್ಕ್‌ಗಳಾವುದೂ ಇಲ್ಲ. ರಾಜಕಾರಣಿಗಳು ದೇವಸ್ಥಾನ ಕಟ್ಟಿಸಿರಬಹುದು, ಕೆಲವರು ದೇವಸ್ಥಾನದ ದುಡ್ಡಿಗೂ ಕೈಯಿಕ್ಕಿರ ಬಹುದು. ಆದರೆ ಯಾರೂ ಇತ್ತೀಚೆಗೆ ಕಾವಿಕಾರಣಿಯೊಬ್ಬರು ದೇವಸ್ಥಾನವನ್ನೇ ಮಾತ್ರೆಯಂತೆ ಗುಳುಂ ಮಾಡಿದಂತೆ, ಬೇರೆ ಯಾರೂ ಮಾಡಿದ ಉದಾಹರಣೆ ಸದ್ಯಕ್ಕೆ ಗೋಚರಿಸುತ್ತಿಲ್ಲ. ಈಗ ರಾಜಕಾರಣಕ್ಕಿಂತ ಕಾವಿಕಾರಣವೇ ಲಾಭದಾಯಕವೇನೋ ಅನ್ನಿಸದಿರದು. ಕಾವಿಕಾರಣದ ಸಾಧು ಸಂತ ಸಾಧ್ವಿಗಳ ವ್ಯಾಪ್ತಿ ಎಷ್ಟು ವಿಶಾಲವಾಗಿದೆ ನೋಡಿ. 'ಸಾಧ್ವೀ' ಪಟ್ಟದವರು ಬಾಂಬ್ ಇಕ್ಕುವ ಹಂತಕ್ಕೂ ಹೋಗಿದ್ದಾರೆ!

ಹೀಗೆ ನೇರವಾಗಿ ಬಾಂಬ್ ಇಕ್ಕುವವರನ್ನು ಬೆಂಬಲಿಸುವುದರ ಜತೆಗೆ ನಮ್ಮ ಪೇಜಾವರರು ಆಗಿಂದ್ದಾಗ್ಗೆ ಏನಾದರೂ ಒಂದು 'ಬಾಂಬ್' ಹಾಕುತ್ತಲೇ ಇರುತ್ತಾರೆ. ಇತ್ತಿಚಿನದು ಎಂದರೆ ದಲಿತರು ಬೌದ್ಧ ಧರ್ಮಕ್ಕೆ ಹೋಗಬಾರದು, ಅದು ಸರಿಯಿಲ್ಲ ಅಂತ ಒಂದು ಹೊಗೆ ಬಾಂಬ್ ಸಿಡಿಸಿದ್ದಾರೆ. ಉಡುಪಿಯಲ್ಲಿ 'ಇತರೆಯವರಿಗೆ' ಎಂದು ಪ್ರತ್ಯೇಕ ವಿಶೇಷ ಭೋಜನಾಲಯವೇ ಇದೆ. 'ಇತರರಿಗೆ' ಹೀಗೆ ವಿಶೇಷ 'ಗೌರವ' ಕೊಡುವ ಧರ್ಮ ಬಿಟ್ಟು ಎಲ್ಲೆಲ್ಲೋ ಯಾಕೆ ಹೋಗ್ತೀರಿ ಅಂತ ಅವರ ಅಳಲು. ರಾಜಕಾರಣಿಗಳಾದರೂ ನಿವೃತ್ತಿಯಾಗಬಹುದು. ಆಗದಿದ್ದರೂ ಕೆಲವರನ್ನಾದರೂ ಜನ ಕಡ್ಡಾಯ ನಿವೃತ್ತಿ ಮಾಡಿ ಮನೆಯಲ್ಲಿ ಕೂಡಿಸಬಹುದು. ಆ ಅವಕಾಶವಾದರೂ ಇದೆ. ಆದರೆ ಕಾವಿಧಾರಿಗಳಿಗೆ ಆ ಅವಕಾಶವೂ ಇಲ್ಲ!.

ಪಂಡಿತ ಭೀಮಸೇನ್ ಜೋಷಿಯವರಿಗೆ ಭಾರತರತ್ನ ಪ್ರಶಸ್ತಿ. ಭಾರತ ಸರ್ಕಾರಕ್ಕೆ ಅಭಿನಂದನೆಗಳು!

ಶ್ರೀ

ಬೆಂಗಳೂರಿನ ಹೃದಯಕ್ಕೆ ಕೇವಲ 50 ಕಿ.ಮೀ. ದೂರದಲ್ಲಿರುವ ಮಾಗಡಿ ತಾಲ್ಲೂಕಿನ ಗ್ರಾಮದಲ್ಲಿ ಮೇಲ್ಜಾತಿಯ ಜನರ ಬೀದಿಯ ನಲ್ಲಿಯಲ್ಲಿ ನೀರು ಹಿಡಿದಿದ್ದೇ ಅಪರಾಧವಾಗಿ ದಲಿತ ಗಂಗಮ್ಮ ಪ್ರಾಣವನ್ನೇ ಕಳಕೊಳ್ಳಬೇಕಾಯಿತು ಎಂದರೆ ಭಾರತ ಸಾಮಾಜಿಕ ಪರಿಸ್ಥಿತಿ ಏನೆಂದು ಅರ್ಥವಾಗುತ್ತದೆ.

ಮಾಗಡಿ: ಅಸ್ಪೃಶ್ಯತೆಯ ಅಪಮಾನ

ದಲಿತ ಮಹಿಳೆಯ ಬಲಿ

ದಲಿತರು 'ಆರ್ಯ ಧರ್ಮಕ್ಕೆ ಬೇಕಾದರೆ ಸೇರಲಿ(ಅಂದರೆ ಹಿಂದೂ ಧರ್ಮದಲ್ಲೇ ಇರಲಿ ಅಂತ) ಬೌದ್ಧ ಧರ್ಮಕ್ಕೆ ಸೇರುವುದು ಸರಿಯಲ್ಲ ಅಂತ ನಮ್ಮ ಪೇಜಾವರ ಶ್ರೀಗಳು ಉಪದೇಶ ಕೊಡುವ ಸರಿಸುಮಾರು ಅದೇ ಹೊತ್ತಿಗೆ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿರುವ ಮತ್ತಿತರೆ ಗ್ರಾಮ ಪಂಚಾಯ್ತಿಯ ಲಕ್ಕಸಂದ್ರ ಗ್ರಾಮದಲ್ಲಿ ಹಿಂದೂ ರಾಷ್ಟ್ರದ ವೈಭವ ಮೆರೆಯುತ್ತಿತ್ತು.

ಅದೊಂದು ಗ್ರಾಮ. ಭಾರತದ ಲಕ್ಷೋಪಲಕ್ಷ ಗ್ರಾಮಗಳಂತೆ ಅಲ್ಲೂ ದಲಿತ ಕೇರಿ ಸವರ್ಣೀಯರ ಕೇರಿ ಎಂಬ ವಿಭಾಗ. ದಲಿತ ಕೇರಿಯಲ್ಲೊಂದು ದಿನ ಬೀದಿನಲ್ಲಿ ನೀರಿನ ಟ್ಯಾಂಕ್‌ನಲ್ಲಿ ನೀರಿಲ್ಲ ಣಗುಡುತ್ತಿತ್ತು. ನೀರು ಹಿಡಿಯಲು ಬಂದ 28 ರ್ಷದ ದಲಿತ ಮಹಿಳೆ ಗಂಗಮ್ಮ ಪಕ್ಕದ ೀದಿಯಲ್ಲಿ ನೀರು ಹಿಡಿದರು. ಬೆಂಗಳೂರು ಹೃದಯ ಭಾಗದಿಂದ ಕೇವಲ 50 ಕಿಲೋ ಮೀಟರ್ ದೂರದಲ್ಲಿರುವ ಈ ಗ್ರಾಮದಲ್ಲಿ ಅಲ್ಲೋಲ ಕಲ್ಲೋಲ.

ಮೇಲ್ಜಾತಿಯ ಹೆಂಗಸರು ಗಂಗಮ್ಮಳೊಂದಿಗೆ ಕ್ಕಿಬಿದ್ದರು. ಹೀನಾಮಾನವಾಗಿ ಜಾತಿ ನಿಂದನೆ ಮಾಡಿದರು. ಇದು ಅಲ್ಲಿ ನಿಲ್ಲಲಿಲ್ಲ. ಗ್ರಾಮದಲ್ಲಿ ಸಿಬಿಸಿ ಚರ್ಚೆಯಾಯ್ತು. ಗ್ರಾಮದ ಇನ್ನಷ್ಟು ನರು ಮತ್ತೆ ಗಂಗಮ್ಮನ ಮನೆ ಮುಂದೆ ನಿಂತು ೀಮಾಮಾನ ಬೈಯ್ದು ಜಗಳವಾಡಿದರು. ಈಗ ಂಗಸರ ಜೊತೆ ಹಲವು ಗಂಡಸರೂ ೇರಿಕೊಂಡಿದ್ದರು. ಗಂಗಮ್ಮಳ ಗಂಡ ನುಮಂತಯ್ಯ ಮನೆಯಲ್ಲಿರಲಿಲ್ಲ. ಗಂಗಮ್ಮ ಾಡಿರುವ ಘೋರ ಅಪರಾಧಕ್ಕಾಗಿ ಪಂಚಾಯ್ತಿ ರಿಸಲಾಯಿತು. ಪಂಚಾಯ್ತಿಗೆ ಗಂಗಮ್ಮ ಬರಲಿಲ್ಲ. ಡ ಊರಲ್ಲಿ ಇರಲಿಲ್ಲ. ಮೇಲ್ಜಾತಿಯ ಜನ ಡಲಿಲ್ಲ. ಗಂಡ ಹೆಂಡಿರಾದ ರಾಜಣ್ಣ, ಬಾಗ್ಯಮ್ಮ ಣ್ಣ (ಹಾರ್ಮೋನಿಯಂ ಮೇಸ್ಟ್ರು), ಮಹದೇವಯ್ಯ ಮ ಪಂಚಾಯ್ತಿ ಸದಸ್ಯ ಶಿವಣ್ಣ ಇವರೆಲ್ಲ ಂದಾಳ್ತನ ವಹಿಸಿ ಜಾತಿಗರ ಕೇರಿಗೆ ಕಾಲಿಟ್ಟ ಗಂಗಮ್ಮನಿಗೆ ತಕ್ಕ ಪಾಠ ಕಲಿಸಲು ತೀರ್ಮಾನಿಸಿ ಹರತೊಟ್ಟಿದ್ದರು.



ಬಲಿಯಾದ ಗಂಗಮ್ಮ

ದಲಿತರಿಗೆ ಗ್ರಾಮದಲ್ಲಿ ಅಘೋಷಿತ ಬಹಿಷ್ಕಾರ ಶುರುವಾಯ್ತು. ಪಂಚಾಯ್ತಿಗೆ ಬರಿದ್ದರೇನಂತೆ ಗಂಗಮ್ಮ ದಲಿತ ಸಮುದಾಯದ ಹಿರಿಯ ಬೈರಪ್ಪನವರ ಮೇಲೆ ಒತ್ತಡ ಹೇರಿ ಇತರ ದಲಿತರ ಮೇಲೂ ಒತ್ತಾಯ ಹಾಕಿ ಗಂಗಮ್ಮನ ಕೈಯಿಂದ 101 ರೂಪಾಯಿ ದಂಡವನ್ನು ಬಲವಂತದಿಂದ ವಸೂಲಿ ಮಾಡೇಬಿಟ್ಟರು. ಪಂಚಾಯ್ತಿಯ ತೀರ್ಮಾನ ಅಲ್ಲಿಗೆ ಜಾರಿಯಾದಂತಾಯ್ತು. ಗಂಗಮ್ಮ ತನ್ನ ಗಂಡ ಊರಲಿಲ್ಲ. ಬರಲಿ ಅಂದರೆ, "ನಿನ್ನ ಗಂಡ ಏನು ಮಿನಿಷ್ಟ್ರೇನೇ............ ಮಾದಿಗ ಮುಂಡೆ............" ಇಂತಹ ಹೇರ ಪದ ಸಂಪತ್ತನ್ನು ಬಳಸಿ ಬಯ್ಗುಳದ ಮಳೆ ಸುರಿಸಿದ್ದಾರೆ. ಅಕ್ಟೋಬರ್ 17, 18, 19 ರಂದು ಇವೆಲ್ಲಾ ಘಟನಾವಳಿಗಳು ನಡೆದಿವೆ.

19 ರಂದು ಗಂಡ ಹನುಮಂತಯ್ಯ ಮನೆಗೆ ಬಂದಾಗ ವಿಷಯ ಗೊತ್ತಾಗಿ ಆತನೂ ಕೂಡ ದಂಡ ಕಟ್ಟಬಾರದಿತ್ತೆಂಬ ಗಂಗಮ್ಮಳ ನಿಲುವನ್ನು ಬೆಂಬಲಿಸಿದ್ದಾರೆ. ಮೇಲ್ಜಾತಿಯ ಜನರ ದಬ್ಬಾಳಿಕೆ ವಿರುದ್ಧ ಒಟ್ಟಾಗಿ ನಿಲ್ಲುವ ತೀರ್ಮಾನ ಮಾಡಿಕೊಂಡು 19 ರ ರಾತ್ರಿ ಇಬ್ಬರೂ ಮಲಗಿದ್ದಾರೆ. 20ರ ಮುಂಜಾನೆ ಎದ್ದು ಹೊಲಕ್ಕೆ ಹೋಗುತ್ತೇನೆಂದು ಹೆಂಡತಿಗೆ ಹೇಳಹೊರಟರೆ ಹೆಂಡತಿಯ ಬಾಯಲ್ಲಿ ನೊರೆ ಬರುತ್ತಿರುವುದು ಕಂಡುಬಂದಿತ್ತು.

ಮೇಲ್ಜಾತಿಯ ಜನರು ಮಾಡಿದ ಅಪಮಾನದಿಂದ ತೀವ್ರವಾಗಿ ನೊಂದ ಗಂಗಮ್ಮ ರಾತ್ರಿ ತೊಗರಿ ಹೊಲಕ್ಕೆಂದು ತಂದಿಟ್ಟಿದ್ದ ವಿಷ ಕುಡಿದದ್ದು ಗೊತ್ತಾಗಿದೆ. ಆಸ್ಪತ್ರೆಗೆ ಸಾಗಿಸುವ ಮುಂಚೆಯೇ ಗಂಗಮ್ಮಳ ಜೀವವೂ ಹೋಗೇಬಿಟ್ಟಿದೆ.

ಗಂಗಮ್ಮ ಆತ್ಮಹತ್ಯೆ ಮಾಡಿಕೊಂಡ ಮೇಲೂ ದಲಿತರ ಬಹಿಷ್ಕಾರದ ಪರಿಸ್ಥಿತಿ ಬದಲಾಗಿಲ್ಲ. ದಲಿತರು ರೇಷನ್ ಡಿಪೋಗೆ ಹೋದರೆ ಕೈಮುಗಿದು 'ಇಲ್ಲಿ ಬರಬೇಡಿ' ಅಂತ ವಾಪಸ್ ಕಳಿಸುತ್ತಾರೆ. ದಲಿತರನ್ನು ಯಾರೂ ಕೂಲಿಗೆ ಕರೆಯುತ್ತಿಲ್ಲ. ರಾಜಣ್ಣ, ಭಾಗ್ಯಮ್ಮ, ಶಿವಣ್ಣ, ಮಹದೇವಯ್ಯ ಗ್ರಾಮ ಪಂಚಾಯತ್ ಸದಸ್ಯ ಶಿವಣ್ಣ ಮುಂತಾದವರ ಮೇಲೆ ಮಾಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಆರೋಪಿಗಳೆಲ್ಲಾ ಪರಾರಿಯಾಗಿದ್ದಾರೆ. ಯಾರೂ ಸಿಕ್ಕಿಲ್ಲ.

ಹೇಗೆ ತಾನೇ ಸಿಗುತ್ತಾರೆ? ಪೊಲೀಸರಿಗೆ, ಪಂಚಾಯ್ತಿ ಮುಖಂಡರು ಶಾಸಕರಿಗೆ ಅಪರಾಧಿಗಳು ಸಿಗುವುದು ಬೇಕಾಗಿದ್ದರೆ ಹೇಗಾದರೂ ಮಾಡಿ ಪಾತಾಳಗರಡಿ ಬಿಟ್ಟು ತಲಾಷ್ ಮಾಡುತ್ತಿದ್ದರು. ಪಾಪ ಅವರಿಗೆ ಅದೆಲ್ಲಾ ಬೇಕಾದಂತೆ ಕಾಣುತ್ತಿಲ್ಲ. ಮಾಗಡಿ ಶಾಸಕ ಬಾಲಕೃಷ್ಣ ಜೆಡಿ(ಎಸ್)ನಲ್ಲಿರುವವರು. ಹಿಂದೆ ಬಿಜೆಪಿಯಲ್ಲಿದ್ದವರು. ಪಂಚಾಯ್ತಿ ಮುಖಂಡರಲ್ಲಿ ಪಕ್ಷಬೇಧವೇನಿಲ್ಲ. ಜಾತಿಯ ಪ್ರಶ್ನೆ ಬಂದಾಗ ಕಾಂಗ್ರೆಸ್, ಬಿಜೆಪಿ, ಜನತಾದಳ ಮುಂತಾದ ಬೇಧಗಳು ಅಳಿಸಿಹೋಗಿ ಎಲ್ಲರೂ 'ಪಕ್ಷಾತೀತ' ರಾಗುವುದು ಹೊಸದೇನಲ್ಲ. ಇಲ್ಲಿ ಆಗಿರುವುದೂ ಅದೇ.

ದೌರ್ಜನ್ಯ ಬಯಲಾದ ಮೇಲೆ ಸಿಪಿಐ(ಎಂ) ನಿಯೋಗ, ವಿವಿಧ ದಲಿತ ಸಂಘಟನೆಗಳು ಗ್ರಾಮಕ್ಕೆ ಭೇಟಿ ನೀಡಿವೆ. ಮುರುಕು ಶೀಟಿನ ಮನೆಯ ಗಂಗಮ್ಮನ ಇಬ್ಬರು ಮಕ್ಕಳ ಮತ್ತು ಕುಟುಂಬದವರ ಭವಿಷ್ಯಕ್ಕಾಗಿ 10 ಲಕ್ಷ ರೂ ಪರಿಹಾರ ನೀಡಬೇಕು. ಅಪರಾಧಿಗಳನ್ನು ತತ್‌ಕ್ಷಣ ಬಂಧಿಸಿ ಶಿಕ್ಷಿಸಬೇಕು ಎಂದು ಒತ್ತಾಯಿಸಲಾಗಿದೆ. ಪ್ರಕರಣ ದಾಖಲಿಸದೇ ಎಷ್ಟೋ ಜನ ತಪ್ಪಿಸಿಕೊಂಡವರಿದ್ದಾರೆ. ಅವರನ್ನು ಪ್ರಕರಣದಲ್ಲಿ ಸೇರಿಸಲು ಒತ್ತಾಯಿಸಲಾಗಿದೆ. ಸಿಪಿಐ(ಎಂ) ನಿಯೋಗದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವೆಂಕಟಾಚಲಯ್ಯ, ಗೋಪಾಲಕೃಷ್ಣ ಅರಳಹಳ್ಳಿ ಜಿಲ್ಲಾಸಮಿತಿ ಸದಸ್ಯ ಬಿ.ರಾಜಶೇಖರ್‌ಮೂರ್ತಿ ಮುಂತಾದವರು ಭೇಟಿ ನೀಡಿದ್ದಾರೆ.

ನವೆಂಬರ್ 13ರಂದು ಸಿಪಿಐ(ಎಂ) ವತಿಯಿಂದ ಡಿಐಜಿ ಕಛೇರಿ ಮುಂದೆ ಪ್ರತಿಭಟನೆಯನ್ನು ಯೋಜಿಸಲಾಗಿದೆ.

ದಶಲಕ್ಷ ಸಹಿ ಸಂಗ್ರಹ ಚಳುವಳಿ



ಅರಿತು ಸಿಐಟಿಯು ಜಿಲ್ಲಾ ಸಮಿತಿ ರಾಜ್ಯ ವ್ಯಾಪಿ ಸಮಾನ ಕನಿಷ್ಠ ಕೂಲಿಗಾಗಿ ಬೆಂಗಳೂರು, ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿ ರೂ. ಹತ್ತು ಸಾವಿರ ಕನಿಷ್ಠ ಕೂಲಿಗಾಗಿ ಆಗ್ರಹಿಸಿ ದಶಲಕ್ಷ ಸಹಿ ಚಳುವಳಿ ಸಂಗ್ರಹ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕಾರ್ಪೋರೇಷನ್ ವೃತ್ತದ ಬಳಿ ಆಯೋಜಿಸಿದ್ದ ಈ ಮಹತ್ವದ ಕಾರ್ಯಕ್ರಮಕ್ಕೆ ನಮ್ಮ ನಡುವಿನ ಖ್ಯಾತ ಸಾಹಿತಿ ಯು.ಆರ್. ಅನಂತಮೂರ್ತಿ ಸಹಿ ಮಾಡುವ ಮೂಲಕ ಉದ್ಘಾಟಿಸಿದರು.

ಉದ್ಘಾಟಿಸಿ ಮಾತನಾಡುತ್ತಾ, ಆಳಿದ ಎಲ್ಲ ಸರ್ಕಾರಗಳು ಕೂಲಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿಪಡಿಸುವಲ್ಲಿ ವಿಫಲವಾಗಿವೆ. ಆದ್ದರಿಂದ ಸರ್ಕಾರ ಕೂಡಲೇ ಸಮಾನ ಕನಿಷ್ಠ ವೇತನ ನಿಗದಿಗೊಳಿಸಬೇಕು. ಹಲವು ದಶಕಗಳ ಹಿಂದೆ ನಿಗದಿಯಾಗಿರುವ ಕೈಗಾರಿಕಾ ಶಾಸನಾತ್ಮಕ ಕನಿಷ್ಠ ಕೂಲಿಯಲ್ಲಿ ಯಾವುದೇ ಬದಲಾವಣೆಯಾಗದೇ ಹಾಗೆ ಉಳಿದಿದೆ. ಗ್ರಾಹಕ ಬೆಲೆ ಸೂಚ್ಯಂಕದಲ್ಲಿನ ಅಂಶಗಳ ಏರಿಕೆ ಆಧಾರದಲ್ಲಿ ತುಟ್ಟಿಭತ್ಯೆ ಮಾತ್ರ ಹೆಚ್ಚುತ್ತಿದ್ರೂ, ಅದು ಅಸಮರ್ಪಕವಾಗಿದೆ. ಅಕ್ಕಿ, ರಾಗಿ, ಗೋಧಿ, ಬೇಳೆ, ಎಣ್ಣೆ ತರಕಾರಿ ಸೇರಿ ಅಗತ್ಯ ವಸ್ತುಗಳ ಬೆಲೆಗಳು, ಪ್ರಯಾಣದರಗಳು ಏರುತ್ತಿವೆ. ಆದರೆ ಅಸಂಘಟಿತ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ಮಾತನಾಡಿ ಸುಪ್ರೀಂಕೋರ್ಟ್ ತೀರ್ಪಿನ ಆಧಾರದ ಮೇಲೆ ಶೇ.25 ರಷ್ಟು ಹೆಚ್ಚಳದೊಂದಿಗೆ ಇಂದಿನ ಕನಿಷ್ಠ ವೇತನ ಬೆಂಗಳೂರು ವ್ಯಾಪ್ತಿಯಲ್ಲಿ ಕುಶಲರಲ್ಲದ ಕಾರ್ಮಿಕರಿಗೆ 10 ಸಾವಿರ ರೂ.ನಿಗದಿಗೊಳಿಸ ಬೇಕಾಗಿದೆ. ಆದರೆ ಇರುವರೆಗೂ ಈ ಕನಿಷ್ಠ ವೇತನವನ್ನು ಹೆಚ್ಚಿಸುವುದರಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ರಾಜ್ಯ ವ್ಯಾಪ್ತಿ ಕನಿಷ್ಠ ಕೂಲಿಯನ್ನು ಹೆಚ್ಚಿಸಬೇಕೆಂದು ಅವರು ಆಗ್ರಹಿಸಿದರು.

ಈ ಕಾರ್ಯಕ್ರಮದಲ್ಲಿ ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಕರ್ನಾಟಕ ಪ್ರಾಂತ ರೈತ ಸಂಘ ಅಧ್ಯಕ್ಷ ಮಾರುತಿ ಮಾನ್ಪಡೆ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಎಸ್.ಎಫ್.ಐ.ನ ಹೆಚ್.ಎನ್. ನವೀನ್‌ಕುಮಾರ್, ಅನಂತನಾಯ್ಕ ಉಪಸ್ಥಿತರಿದ್ದರು.

ಬೆಲೆಗಳು ಗಗನಕ್ಕೇರಿವೆ. ದಿನಸಿ ವಸ್ತುಗಳು ಕೊಳ್ಳುವುದಿರಲಿ, ನೋಡಲು ಕೂಡಾ ಸಿಗದಷ್ಟು ದುಬಾರಿಯಾಗಿವೆ. ಆದರೆ ಅಸಂಘಟಿತ ಕಾರ್ಮಿಕರ ಳ ಮಾತ್ರ ಏನಕ್ಕೂ ಸಾಲದಂತಿದೆ. ಇದನ್ನು

ಜನಶಕ್ತಿ ಕನ್ನಡ ವಾರಪತ್ರಿಕೆ

ನವೆಂಬರ್ 16, 2008


<u>ನಾಡಗೀತೆ ಆಶಯಕ್ಕೆ ವಿರುದ್ಧವಾಗಿ ಸರ್ಕಾರ</u>

<u>ಉಡುಪಿಯಲ್ಲಿ ಪಂಕ್ತಿ ಬೇಧವೇಕೆ?</u>

<u>ವಿಧಾನ ಪರಿಷತ್ ಚುನಾವಣೆ: ಅಸಹ್ಯಕರ ಆಪರೇಷನ್</u>

<u>ಉದ್ಯೋಗ ಗುತ್ತಿಗೆ ಇಲ್ಲ ಖಾತ್ರಿ</u>

ಸೌಹಾರ್ದ ಕರ್ನಾಟಕ ರಾಜ್ಯೋತ್ಸವ



ಸೌಹಾರ್ದ ಕರ್ನಾಟಕ ರಾಜ್ಯೋತ್ಸವ : ರಾಜ್ಯದಲ್ಲಿ ಮತಾಂಧತೆ ಹಾಗೂ ಬಾಷಾಂಧತೆಯನ್ನು ಕೆರಳಿಸಿ ಮುಗ್ದ ಜನರನ್ನು ದಾರಿ ತಪ್ಪಿಸುವ ಕೆಲಸ ನಡೆಯುತ್ತಿರುವ ಸಂದರ್ಭದಲ್ಲಿ ಸೌಹಾರ್ದ ಕರ್ನಾಟಕ ರಾಜ್ಯೋತ್ಸವ ಈ ಆಚರಣೆಗೆ ಹೆಚ್ಚಿನ ಮಹತ್ವ ಬಂದಿದೆ.

ಅವಿಭಜಿತ ಕಮ್ಯೂನಿಸ್ಟ ಪಕ್ಷವು ಭಾಷಾವಾರು ಪ್ರಾಂತಗಳ ರಚನೆಗಾಗಿ ಸಮರಶೀಲ ಹೋರಾಟಗಳನ್ನು ನಡೆಸಿದೆ. ಕನ್ನಡ ಆಡಳಿತ ಭಾಷೆಯಾಗಿ ಎಲ್ಲಾ ಹಂತಗಳಲ್ಲಿ ಜ್ಯಾರಿಯಾಗಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತಿದೆ. ಇದರಿಂದ ಜನ ಸಾಮಾನ್ಯರು ಆಡಳಿತ ವ್ಯವಸ್ಥೆಯಲ್ಲಿ ಭಾಗವಹಿಸುವುದಕ್ಕೆ ಪ್ರೇರೇಪಣೆ ಸಿಗುತ್ತದೆ. ಅಂದ ಮಾತ್ರಕ್ಕೆ ಭಾಷಾ ದುರಭಿಮಾನದಿಂದ ಅನ್ಯ ಭಾಷಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಹರಣ ಮಾಡುವುದು ಸರಿಯಲ್ಲ. ಈ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪುರವರ 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಯ ಸರ್ವಜನಾಂಗದ ಶಾಂತಿಯ ತೋಟ... ಎಂಬಂತಹ ಸಾಲುಗಳನ್ನು ನೆನಪಿಸಿಕೊಳ್ಳುತ್ತಾ ದೇಶದ ಐಕ್ಯತೆಯನ್ನು ಕಾಪಾಡುವ ಸಂದೇಶವನ್ನು ಜನರಿಗೆ ತಲುಪಿಸಲು ಸಿಪಿಐ(ಎಂ) ಪ್ರಯತ್ನಿಸುತ್ತಿದೆ. ಕಹಿನ ಬಿಜೆಪಿ ನೇತೃತ್ವದ ಸರ್ಕಾರವು 'ನಾಡಗೀತೆಯ' ಆಶಯ, ಅಂತಃಪತನಕ್ಕೆ ವಿರುದ್ಧವಾಗಿ ವರ್ತಿಸುತ್ತಿದೆ. ಕೋಮುಸೌಹಾರ್ದತೆ ನಾಶಕ್ಕೆ ಕುಮ್ಮಕ್ಕು ನೀಡಿ ಬೆಂಬಲಿಸುತ್ತಿದೆ. ಇದರ ಅಂಗವಾಗಿ ಜಾಥಾ, ಸಮಾವೇಶ, ವಿಚಾರ ಸಂಕಿರ್ಣ, ಬಹುಬಾಷಾ ಕವಿಗೋಷ್ಟಿ, ಸಂವಾದ, ಸಾಂಸತಿಕ ಕಾರ್ಯಕ್ರಮ, ಸಹಭೋಜನ ಮೊದಲಾದ ಕಾರ್ಯಕ್ರಮ ಹಮ್ಮಿಕ್ರೊಳ್ಳಲಾಗುವುದು.


ರಾಜ್ಯ ಮಟ್ಟದ ಪ್ರಥಮ ಕಾರ್ಯಕ್ರಮವಾಗಿ ಮೈಸೂರಿನಲ್ಲಿ .ನವೆಂಬರ್ 8ರಂದು ಮೈಸೂರಿನ ಕಲಾಮಂದಿರದಲ್ಲಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕರಾಟ್ ಅವರಿಂದ ಈ ಕಾರ್ಯಕ್ರಮವು ಉದ್ಘಾಟನೆಗೊಳ್ಳಲಿದೆ. ನವೆಂಬರ್ 10 ರಂದು ಇನ್ನೊಂದು ಕಾರ್ಯಕ್ರಮ ಮಂಗಳೂರಿನಲ್ಲಿ ನಡೆಯಲಿದ್ದು ಪಾಲಿಟ್‌ಬ್ಯೂರೊ ಸದಸ್ಯ ಹಾಗೂ ರಾಜ್ಯಸಭಾ ಸದಸ್ಯರಾದ ಸೀತಾರಾಂ ಯೆಚೂರಿ ಭಾಗವಹಿಸಲಿದ್ದಾರೆ.

ಕೋಮುವಾದ ಮತ್ತು ಭಯೋತ್ಪಾದನೆ ವಿರುದ್ಧ ಜಾಥಾ ಮತ್ತು ರ‍್ಯಾಲಿ : ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಕೋಮುವಾದಿ ಹಾಗೂ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚುತ್ತಿವೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಿಂದೂ ಕೋಮುವಾದಿಗಳಿಗೆ ಆಶ್ರಯ ದೊರೆತಂತಾಗಿದೆ. ಕೋಮುವಾದವು ಭಯೋತ್ಪಾದನಾ



ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುತ್ತದೆ. ಇದರ ಅತೃಪ್ತಿಯನ್ನು ಬಳಸುವ ಭಯೋತ್ಪಾದಕ ಶಕ್ತಿಗಳು, ಕೆಲವು ಅಲ್ಪಸಂಖ್ಯಾತ ಯುವಜನರನ್ನು ಹಾದಿ ತಪ್ಪಿಸಿ ಅವರಿಂದ ನಡೆಯುತ್ತಿರುವ ಭಯೋತ್ಪಾದನಾ ಚಟುವಟಿಕೆಗಳು ಕೋಮುವಾದಿಗಳ ಬೆಳವಣಿಗೆಗೆ ಸಹಾಯವಾಗುತ್ತಿದೆ. ಇತ್ತೀಚಿನ ಘಟನೆಗಳನ್ನು ಅವಲೋಕಿಸಿದರೆ ಹಿಂದುತ್ವದ ಭಯೋತ್ಪಾದಕ ಚಟುವಟಿಕೆಗಳೂ ಅದರ ಸಿದ್ಧತೆಗಳು ಬೆಚ್ಚಿಬೀಳಿಸುತ್ತವೆ. ಅಲ್ಲಲ್ಲಿ ನಡೆಯುತ್ತಿವೆ. ಇದರ ವಿರುದ್ಧ ಜನಜಾಗೃತಿ ಮೂಡಿಸುವುದು ಅಗತ್ಯ. ಆದ್ದರಿಂದ ದೇಶದಾದ್ಯಂತ ಕೋಮುವಾದ ಮತ್ತು ಭಯೋತ್ಪಾದನೆ ವಿರುದ್ಧ ಪ್ರಚಾರ ನಡೆಯುತ್ತಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬೀದರ್ ಜಿಲ್ಲೆಯ ಬಸವ ಕಲ್ಯಾಣ, ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಹಾಗೂ ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಯಿಂದ ಜಾಥಾ ನಡೆಸಲು ನಿರ್ಧರಿಸಲಾಗಿದೆ. ಜಾಥಾಗಳ ನೇತೃತ್ವವನ್ನು ಕ್ರಮವಾಗಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ, ಜಿ.ಎನ್.ನಾಗರಾಜ್ ಹಾಗೂ ಮಾರುತಿ ಮಾನ್ಪಡೆ ವಹಿಸಲಿದ್ದಾರೆ. ಈ ಜಾಥಾಗಳು ವಿವಿಧ ಜಿಲ್ಲೆಗಳಿಂದ ಹಾದು ಬರಲಿದ್ದು ಅಲ್ಲಲ್ಲಿ ಸಭೆ, ಪ್ರಚಾರ, ಕರಪತ್ರ ವಿತರಣೆ ನಡೆಸಿ ಜನರನ್ನು ಜಾಗೃತಗೊಳಿಸುವುದು. ಜಾಥಾಗಳು ಡಿಸೆಂಬರ್ 22 ರಂದು ಬೆಂಗಳೂರು ಸೇರಲಿದ್ದು ರಾಜ್ಯ ಮಟ್ಟದ



ಸ್ವಾಗತ ಅಂದು ರ‍್ಯಾಲಿಯೊಂದನ್ನು ನಡೆಸಲು ಉದ್ದೇಶಿಸಲಾಗಿದೆ.

ಮತಾಂತರ ಕುರಿತು ಪೇಜಾವರ ಮಠಾದೀಶರು: ಪಂಕ್ತಿಭೇದವನ್ನಾದರೂ ನಿಲ್ಲಿಸುವರೇ? ದಲಿತರು ಬೌದ್ಧ ಧರ್ಮಕ್ಕೆ ಮತಾಂತರ ಮಾಡುವುದು ಬೇಡ ಎಂಬ ಪೇಜಾವರ ಮಠಾದೀಶರ ಹೇಳಿಕೆ ಖಂಡನೀಯ. ಆರ್.ಎಸ್.ಎಸ್.ನ ಅಂಗ ಸಂಸ್ಥೆಯಾದ ವಿಶ್ವ ಹಿಂದೂ ಪರಿಷತ್‌ನ ರಾಷ್ಟ್ರೀಯ ಉಪಾಧ್ಯಕ್ಷರಾದ ಪೇಜಾವರ ಮಠಾದೀಶರು ಆರ್.ಎಸ್.ಎಸ್‌ನ ವಕ್ತಾರನಂತೆ ಮಾತನಾಡುತ್ತಿದ್ದಾರೆ. ಚಾತುವರ್ಣ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಆರ್.ಎಸ್.ಎಸ್ ಬಯಸುತ್ತದೆ ಎಂಬುದು ಈಗಾಗಲೇ ತಿಳಿದ ವಿಚಾರವಾಗಿದೆ.

ಇತ್ತೀಚಿಗೆ ನಡೆದ ಕೋಮು ಗಲಭೆಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧದ ದಾಳಿಯಲ್ಲಿ ಹೆಚ್ಚಾಗಿ ದಲಿತರನ್ನೇ ಬಳಸಿಕೊಂಡಿರುವುದು ತಿಪಟೂರು ಹಾಗೂ ಹಾವೇರಿಗಳಲ್ಲಿ ವ್ಯಕ್ತವಾಗಿದೆ. ತನ್ನ ರಾಜಕೀಯ ಮುಖವಾಡವಾದ ಬಿಜೆಪಿಯ ಅಧಿಕಾರವನ್ನು ಶಾಶ್ವತಗೊಳಿಸಿ ಕೊಳ್ಳಲು ಹಾಗೂ ಕೇಂದ್ರದಲ್ಲಿ ಅಧಿಕಾರಕ್ಕೆ ತರಲು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ದಲಿತರನ್ನು ಅಲ್ಪ-ಸಂಖ್ಯಾತರ ವಿರುದ್ಧ ಎತ್ತಿಕಟ್ಟುತ್ತದೆ. ಆದ್ದರಿಂದಲೇ ದಲಿತರು ಬೌದ್ಧಧರ್ಮಕ್ಕೆ ಮತಾತಂತರವಾಗುವುದನ್ನು ಪೇಜಾವರ ಶ್ರೀಗಳು ವಿರೋಧಿಸುತ್ತಿದ್ದಾರೆ.

ಪೇಜಾವರ ಶ್ರೀಗಳ ಮಠದಲ್ಲಿ ಊಟದಲ್ಲಿ ದ್ವಿಪಂಕ್ತಿ ವ್ಯವಸ್ಥೆಯನ್ನು ಮಾಡುವುದರ ಮೂಲಕ ದಲಿತರನ್ನು, ಇತರೆ ಹಿಂದುಳಿದವರನ್ನು ಎರಡನೇ ದರ್ಜೆ ನಾಗರಿಕರನ್ನಾಗಿ ಕಾಣಲಾಗುತ್ತಿದೆ. ದಲಿತರಿಗೆ ಪ್ರವಚನ ಮಾಡುವ ಇವರು ತಮ್ಮ ಮಠದಲ್ಲಿ ನಡೆಯುತ್ತಿರುವ ತಾರತಮ್ಯವನ್ನು ನಿಲ್ಲಿಸಬೇಕು.

ಅಷ್ಟಾಗಿಯೂ ಪ್ರತಿಯೊಬ್ಬ ವ್ಯಕ್ತಿಗೂ ಮತಾಂತರ ಗೊಳ್ಳುವ ಹಕ್ಕನ್ನು ಸಂವಿಧಾನದಲ್ಲಿ ನೀಡಲಾಗಿದೆ ಎಂಬುದನ್ನು ಪೇಜಾವರಶ್ರೀಗಳು ಗಮನಿಸಬೇಕು.

ಉದ್ಯೋಗ ಖಾತರಿ ಯೋಜನೆ : ಮುಖ್ಯಮಂತ್ರಿ ಅಜ್ಞಾನ ಲಕ್ಷಾಂತರ ನಿರುದ್ಯೋಗಿಗಳಿಗೆ, ಕೃಷಿ ಕೂಲಿಕಾರರಿಗೆ ಆಸರೆ ನೀಡುವಂತಹ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸದಿರುವ ಬಿಜೆಪಿ ರಾಜ್ಯ ಸರ್ಕಾರ ಜನರನ್ನು ವಂಚಿಸಿದೆ. ಹಲವಾರು ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಯ ಕೊರತೆಯಿಂದಾಗಿ, ಅರ್ಜಿಗಳನ್ನು ಸ್ವೀಕರಿಸಲು, ಜಾಬ್ ಕಾರ್ಡ್ ನೀಡಲು ವಿಳಂಬವಾಗುತ್ತಿದೆ. ಕೆಲಸ ಮಾಡಿದ 15 ದಿನಗಳೊಳಗೆ ವೇತನ ನೀಡಬೇಕೆಂದು ಕಾನೂನು ಇದ್ದರೂ 6 ತಿಂಗಳು, ಒಂದು ವರ್ಷದಿಂದ ಕೂಲಿ ನೀಡದ ಉದಾಹರಣೆಗಳಿವೆ.

ಇದಕ್ಕೂ ಮಿಗಿಲಾಗಿ ಈಗ ನೀಡುತ್ತಿರುವ ದಿನಗೂಲಿ ರೂ.82 ಅತ್ಯಂತ ಕಡಿಮೆ ಇದ್ದು ಕೆಲವು ಜಿಲ್ಲೆಗಳಲ್ಲಿ ಕೂಲಿಕಾರರನ್ನು ಆಕರ್ಷಿಸುತ್ತಿಲ್ಲ. ಆದ್ದರಿಂದ ದಿನಗೂಲಿಯನ್ನು ರೂ. 150ಕ್ಕೆ ಹೆಚ್ಚಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

ಕೂಲಿ ನಿರ್ಧಾರದ ಹಕ್ಕು ರಾಜ್ಯ ಸರ್ಕಾರಕ್ಕೆ ಇದ್ದರೂ ಕೂಲಿ ಹೆಚ್ಚಳಕ್ಕೆ ಕೇಂದ್ರ ಸರ್ಕಾರಕ್ಕೆ ಬರೆಯುವುದಾಗಿ ಬಿಜೆಪಿ ಸಚಿವರು ಹೇಳುವ ಮೂಲಕ ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ. ಅವರ ಬಗ್ಗೆ ಕನಿಕರಪಡಬಹುದ್ಯು ಎಂದಷ್ಟೆ ಹೇಳಬಹುದು.


ಯಡಿಯೂರಪ್ಪನವರು ಉಪಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಾಗಿದ್ದ ಅವಧಿಯಲ್ಲಿ ಉದ್ಯೋಗ ಖಾತರಿ ಯೋಜನೆ ಜ್ಯಾರಿ ಮಾಡುವಲ್ಲಿ ರಾಜ್ಯ ಸರ್ಕಾರ ನಿರ್ಲಕ್ಷ್ಯ? ತೋರಿದೆ ಎಂದು ಭಾರತ ಸರ್ಕಾರದ ಲೆಕ್ಕಾಪರಿಶೋಧಕ ಇಲಾಖೆಯು ಟೀಕಿಸಿದೆ. ಇದರ ಮುಂದುವರೆದ ಭಾಗವಾಗಿ ಇಂದಿನ ಬಿಜೆಪಿ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿ ನೋಡಿದರೆ ಈ ಯೋಜನೆಯನ್ನು ಜ್ಯಾರಿ



ಮಾಡುವ ಕಾಳಜಿ ಬಿಜೆಪಿ ಸರ್ಕಾರಕ್ಕೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಪಂಚಾಯತ್ ಸಂಸ್ಥೆಗಳ ಅಧಿಕಾರಕ್ಕೆ ಕುತ್ತು : ಪಂಚಾಯಿತಿ ಸಂಸ್ಥೆಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆಗಾಗಿ ಸಮಿತಿಯೊಂದನ್ನು ರಚಿಸಲಾಗುವುದೆಂದು ಮುಖ್ಯಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿ... ಹೇಳುವ ಮೂಲಕ ರಾಜ್ಯ ಸರ್ಕಾರವು ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನು ತಳೆದಿದೆ ಎಂದು ಸಿಪಿಐ(ಎಂ) ಆಪಾದಿಸಿದೆ. ಅಧಿಕಾರ ವಿಕೇಂದ್ರಿಕರಣದ ಮೂಲಕ ಗ್ರಾಮೀಣ ಅಭಿವೃದ್ಧಿ ಸಾಧಿಸುವುದು ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳನ್ನು ವಿಸ್ತರಿಸುವುದು ಚುನಾಯಿತ ಪಂಚಾಯಿತಿ ಸಂಸ್ಥೆಗಳ ಆಶಯವಾಗಿರುತ್ತದೆ. ಈ ಆಶಯಗಳನ್ನು ಈಡೇರಿಸಬೇಕಾದಲ್ಲಿ ಪಂಚಾಯ್ತಿಗಳಿಗೆ ಅನುದಾನ ಹೆಚ್ಚಿಸಬೇಕು ಹಾಗೂ ಸಿಬ್ಬಂದಿಗಳನ್ನು ಹೆಚ್ಚಿಸಬೇಕು.

ನಿಗದಿತ ಅವಧಿಗಳಲ್ಲಿ ಗ್ರಾಮ ಸಭೆಗಳ ನಡೆಯಬೇಕೆಂದಿದ್ದರೂ ಅದು ನಡೆಯುತ್ತಿಲ್ಲ. ಕೇವಲ ತೋರಿಕೆಗಾಗಿ ರಿಕಾರ್ಡುಗಳನ್ನು ಬರೆಯಲಾಗುತ್ತಿದೆ. ಇದರಿಂದ ಪ್ರಜಾ ಪ್ರಭುತ್ವದಲ್ಲಿ, ಅಧಿಕಾರ ವಿಕೇಂದ್ರಿಕರಣದಲ್ಲಿ ಬಿಜೆಪಿಗೆ



ನಂಬಿಕೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ವಿಧಾನ ಪರಿಷತ್ ಚುನಾವಣೆ : ಇತ್ತೀಚಿಗೆ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ಅಧಿಕಾರ ದುರುಪಯೋಗ ಹಾಗೂ ಹಣ ಬಲದಿಂದ ಬಿಜೆಪಿ 3 ಸ್ಥಾನಗಳನ್ನು ಪಡೆದು ಕೊಂಡಿದೆ. ಪ್ರಜಾಪ್ರಬುತ್ವ ವಿರೋಧಿ ಆಪರೇಷನ್ ಕಮಲದ ಮೂಲಕ 8 ಜನ ಶಾಸಕರನ್ನು ಖರೀದಿಸಿ ಬಿಜೆಪಿಯ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ಖರೀದಿಸಲು ಮುಂದಾಗಿರುವುದು ಮಂಡ್ಯ ಮ... ನಂಜನಗೂಡು ನಗರಗಳಲ್ಲಿ ಬಹಿರಂಗಗೊಂಡಿದೆ. ಇದೇ ಆಪರೇಷನ್ ಕಮಲವನ್ನು ವಿಧಾನ ಪರಿಷತ್ ಚುನಾವಣೆಯಲ್ಲೂ ಬಳಸಿ ಬಿಜೆಪಿ ಗೆದ್ದು ಕೊಂಡಿದೆ. ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳನ್ನು ಸಿಪಿಐ(ಎಂ) ಖಂಡಿಸುತ್ತದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಹಾಗೂ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ವೈ. ಗು... ಶಾಂತ್ ತಿಳಿಸಿದ್ದಾರೆ.

ದೊಡ್ಡ ಉದ್ಯಮಿಗಳೊಂದಿಗೆ ಮಾತ್ರ ಪ್ರಧಾನಿಗಳ ಮಾತುಕತೆ ಕಾರ್ಮಿಕ ಸಂಘಗಳೊಂದಿಗೆ, ಸಣ್ಣ ಉದ್ಯಮಿಗಳೊಂದಿಗೆ ಏಕಿಲ್ಲ?

ನವಂಬರ್ 3 ರಂದು ಪ್ರಧಾನ ಮಂತ್ರಿಗಳು ದೇಶದ ದೊಡ್ಡ ಕೈಗಾರಿಕೋದ್ಯಮಿಗಳೊಂದಿಗೆ ಪ್ರಸಕ್ತ ಜಾಗತಿಕ ಹಣಕಾಸು ಬಿಕ್ಕಟ್ಟು ಮತ್ತು ಅದರ ಪರಿಣಾಮಗಳ ಬಗ್ಗೆ ಚರ್ಚಿಸಿದರು. ನಂತರ ಪ್ರಧಾನಿಗಳ ಅಧ್ಯಕ್ಷತೆಯಲ್ಲಿ ಕೈಗಾರಿಕೋದ್ಯಮಿಗಳು ಇರುವ ಒಂದು ಶೃಂಗ ಸಮಿತಿ ರಚನೆಗೊಂಡಿದೆ ಎಂದು ಪ್ರಕಟಿಸಲಾಗಿದೆ. ಇದಕ್ಕೆ ಮೊದಲು ಹಣಕಾಸು ಮಂತ್ರಿಗಳು ಕೂಡಾ ಈ ಉದ್ಯಮಿಗಳೊಂದಿಗೆ ಪ್ರತ್ಯೇಕವಾಗಿ ಮತ್ತು ಒಟ್ಟಾಗಿ ಚರ್ಚೆ ನಡೆಸಿದ ವರದಿಗಳು ಬಂದಿವೆ. ಈ ಸುದ್ದಿಗಳನ್ನು ನೋಡಿದರೆ ಭಾರತ ಸರಕಾರಕ್ಕೆ ಕೂಡಾ ಅಮೆರಿಕಾದ ಬುಶ್ ಸರಕಾರದಂತೆ ಈ ದೊಡ್ಡ ಉದ್ಯಮಿಗಳಿಗೆ ಏನೇನು ರಿಯಾಯ್ತಿ, ನೆರವು, ನೀಡಿ ಅವರನ್ನು ಪಾರುಮಾಡುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಾತ್ರ ಕಾಳಜಿಯಿದ್ದಂತೆ ಕಾಣುತ್ತದೆ.

ಕೈಗಾರಿಕೆಗಳ ಬೆಳವಣಿಗೆಯಲ್ಲಿ ಕಾರ್ಮಿಕರೂ ಪ್ರಮುಖ ಪಾಲುದಾರರು. ಅಲ್ಲದೆ ಈಗಿನ ಬಿಕ್ಕಟ್ಟಿನಿಂದ ಅತಿ ಹೆಚ್ಚು ಸಂಕಟಗಳಿಗೆ ಒಳಗಾಗುವವರು ಕಾರ್ಮಿಕರು. ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆದಾರರನ್ನು ಕೂಡಾ ಈಗಿನ ಪರಿಸ್ಥಿತಿ ಅತ್ಯಂತ ತೀವ್ರವಾಗಿ ತಟ್ಟಿದೆ. ಆದರೂ ಪ್ರಧಾನ ಮಂತ್ರಿಗಳಿಗಾಗಲೀ, ಹಣಕಾಸು ಮಂತ್ರಿಗಳಿಗಾಗಲೀ ಕಾರ್ಮಿಕರನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಗಳೊಂದಿಗೆ, ಸಣ್ಣ ಉದ್ದಿಮೆದಾರರೊಂದಿಗೆ ಕೂಡಾ ಚರ್ಚಿಸಬೇಕು ಎಂದು ಅದೇಕೋ ಅನ್ನಿಸುತ್ತಿಲ್ಲ.

ಈ ಅಂಶವನ್ನು ದೇಶದ ಪ್ರಮುಖ ಕೇಂದ್ರೀಯ ಕಾರ್ಮಿಕ ಸಂಘಟನೆಯ ಅಧ್ಯಕ್ಷರೂ, ದೇಶದ ಹಿರಿಯ ಕಾರ್ಮಿಕ ಮುಖಂಡರೂ ಆದ ಎಂ.ಕೆ. ಪಂಧೆಯವರು ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು ಅವರ ಗಮನಕ್ಕೆ ತಂದಿದ್ದಾರೆ. ಇದು ಕೇವಲ ಆಕಸ್ಮಿಕವೋ ಅಥವಾ ಉದ್ದೇಶಪೂರ್ವಕವೋ ಎಂದು ತಿಳಿಯದು ಎಂದು ಹೇಳಿರುವ ಅವರು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮತ್ತು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಿಗಳ ರಾಷ್ಟ್ರೀಯ ಮಂಡಳಿಯ ಸಭೆ ಕರೆದು ದುಡಿಯುವ ಜನಗಳನ್ನು ಕವಿದಿರುವ ಕಾರ್ಮೋಡಗಳನ್ನು ತಿಳಿಗೊಳಿಸಬೇಕು, ಅನಿಶ್ಚಿತತೆಗಳನ್ನು ನಿವಾರಿಸಬೇಕು ಎಂದು ಒತ್ತಾಯ ಮಾಡಿದ್ದಾರೆ.

ಸರಕಾರ ದೊಡ್ಡ ಉದ್ಯಮಿಗಳ ಸಂಘಟನೆಯಾದ ಸಿಐಐ(ಭಾರತೀಯ ಉದ್ದಿಮೆಗಳ ಮಹಾಒಕ್ಕೂಟ)ಯ 12 ಬೇಡಿಕೆಗಳಲ್ಲಿ ಹೆಚ್ಚಿನವನ್ನು ಈಡೇರಿಸಿದರೂ, ಘಟಕಗಳನ್ನು ಮುಚ್ಚಬೇಡಿ ರಿಟ್ರೆಂಚ್‌ಮೆಂಟ್, ಲೇಆಫ್‌ಗಳನ್ನು ಮಾಡಬೇಡಿ ಎಂಬ ಪ್ರಧಾನಿಗಳ ಮನವಿಯನ್ನು ಅವರು ಲೆಕ್ಕಿಸುತ್ತಿಲ್ಲ. ರಿಲಯೆನ್ಸ್ ಇಂಡಸ್ಟ್ರೀಸ್‌ನ ಮಾಲಕ ಪ್ರಧಾನಿಗಳ, ಹಣಕಾಸು ಮಂತ್ರಿಗಳ ಸಭೆಯಲ್ಲಿ ಭಾಗವಹಿಸಿದ ಒಬ್ಬ ಪ್ರಮುಖ. ಮುಂಬೈಯ ಬಳಿಯಿರುವ ಪಾತಾಳ ಗಂಗಾದಲ್ಲಿನ ಆತನ ಒಡೆತನದ ಏಳು ಪಾಲಿಯೆಸ್ಟರ್ ಘಟಕಗಳಲ್ಲಿ ಐದನ್ನು ಮುಚ್ಚಲಾಗಿದೆ

ಉತ್ತುಪುರಂ ಬಳಿ ಗೋಲಿಬಾರ್ ದಲಿತ ಯುವಕನ ಸಾವು

ಕರ್ನಾಟಕದಲ್ಲಿ ಪೊಲೀಸರ ಗುಂಡಿನ ದಾಳಿ ಪ್ರಕರಣದ ಹಾವೇರಿ ಗೋಲಿಬಾರ್ ಘಟನೆಯ ಕರಾಳ ದಿನಗಳ ನೆನಪು ಮಾಸುತ್ತಲೇ ಇಂತಹದ್ದೇ ಒಂದು ಘಟನೆ ತಮಿಳುನಾಡಿನಲ್ಲಿ ನಡೆದಿದೆ.

ಸುರೇಶ್ ಎಂಬಾತನೇ ಪೊಲೀಸರ ಗುಂಡಿನ ದಾಳಿಗೆ ತುತ್ತಾದ ವ್ಯಕ್ತಿ. 25ರ ಹರೆಯದವನಾದ ಈತ ದಲಿತ ಜನಾಂಗಕ್ಕೆ ಸೇರಿದವನಾಗಿದ್ದಾನೆ. ತಮ್ಮ ನಾಯಕನ ಮೇಲೆ ಹಲ್ಲೆ ಮಾಡಿದ್ದಾರೆಂಬ ಕಾರಣಕ್ಕೆ ರೊಚ್ಚಿಗೆದ್ದ ಗುಂಪು ರಸ್ತೆತಡೆ ನಡೆಸಿದೆ. ಪರಿಣಾಮ ಇನ್ನೊಂದು ಗುಂಪು ಅವರ ಮೇಲೆ ಹಲ್ಲೆ ನಡೆಸಿ ಬಿಗುವಿನ ವಾತಾವರಣ ಉಂಟಾಗಿ ಪೊಲೀಸ್ ದಾಳಿಯಿಂದ ಅಮಾಯಕ ಬಲಿಯಾಗಿದ್ದಾನೆ.

ಉತ್ತಪುರಂ ಇತ್ತೀಚೆಗೆ ರಾಷ್ಟ್ರವ್ಯಾಪಿ ಸುದ್ದಿಯಾಗಿತ್ತು. ಮೇಲ್ಜಾತಿಯ ಜನರು ಇಲ್ಲಿ ದಲಿತರು ಗ್ರಾಮ ಪ್ರವೇಶಿಸದಂತೆ ದೊಡ್ಡ ಗೋಡೆಯನ್ನು ಹಲವು ವರ್ಷಗಳಿಂದ ದಲಿತರನ್ನು ಪ್ರತ್ಯೇಕಿಸಿದ್ದ ಸಿಪಿಐ(ಎಂ) ಅಸ್ಪಶ್ಯತಾ ವಿರೋಧಿ ವೇದಿಕೆಗಳ ತೀವ್ರ ಪ್ರತಿಭಟನೆಯ ನಂತರ ಅಲ್ಲಿನ ಸರ್ಕಾರದ ಮೇಲ್ವಿಚಾರಣೆಯಲ್ಲಿ ಈ ಗೋಡೆಯನ್ನು ಒಡೆದು ಹಾಕಲಾಗಿತ್ತು. ಮತ್ತು ದಲಿತರಿಗೆ ಗ್ರಾಮ ಪ್ರವೇಶ ಸಿಕ್ಕಿತ್ತು. ಇತ್ತೀಚೆಗೆ ದಲಿತರೊಬ್ಬರು ತೀರಿಕೊಂಡಾಗ ಶವ ಯಾತ್ರೆ ಕೂಡ ಅಲ್ಲಿಂದ ಸಾಗಿ ಅಸ್ಪಶ್ಯತೆಯ ವ್ಯವಸ್ಥೆಗೆ ಪೆಟ್ಟುಬಿದ್ದಿತ್ತು. ಅಂತಹ ಗ್ರಾಮಕ್ಕೆ ದಲಿತರು ಭೇಟಿ ನೀಡಿ ವಾಪಸ್ ಬರುವಾಗ ಡಾ|| ಕೃಷ್ಣಮೂರ್ತಿ ಮತ್ತು ಸಂಗಡಿಗರ ಮೇಲೆ ದಾಳಿ ನಡೆದಿದೆ.

ಇಳುಮಳಿ ಬಳಿ ಒಂದು ಗುಂಪು ಇವರ ಮೇಲೆ ದಾಳಿ ನಡೆಸಿದೆ. ಆಗ ಘಟನೆಯಲ್ಲಿ ಡಾ. ಕೃಷ್ಣಮೂರ್ತಿ ಗಾಯಗೊಂಡರಲ್ಲದೆ ಐದಾರು ವಾಹನಗಳು ಜಖಂಗೊಂಡಿವೆ.

ಇದರಿಂದ ರೊಚ್ಚಿಗೆದ್ದ ಕೃಷ್ಣಮೂರ್ತಿ ಹಾಗೂ ಅವರ ಸಹಚರರು ದಿನಾಂಕ 04-11-2008 ರಂದು ಈ ಕೊಟ್ಟಪತ್ತಿ ಹಳ್ಳಿಯ ಹತ್ತಿರ ರಸ್ತೆತಡೆ ನಡೆಸಿದ್ದಾರೆ. ಆಗ ಸ್ಥಳಕ್ಕೆ ಡಿಜಿಪಿ ಕೃಷ್ಣಮೂರ್ತಿ ನೇತೃತ್ವದಲ್ಲಿ ಪೊಲೀಸರ ತಂಡ ಸ್ಥಳಕ್ಕೆ ಈ ಕೊಚ್ಚಿಪಟ್ಟಿಗೆ ಬಂದಿದೆ. ಹಾಗೆಯೇ ಪರಿಹಾರ ಕೊಡಬೇಕೆಂದು ಒತ್ತಾಯಿಸಿ ಧರಣಿ ಕುಳಿತ ಜನರ ಮೇಲೆ ಪೊಲೀಸರು ದಾಳಿ ನಡೆಸಿದ್ದಾರೆ. ಆಗ ರೊಚ್ಚಿಗೆದ್ದ ಜನ ಪೊಲೀಸರ ಗುಂಪಿನ ಮೇಲೆ ಕಲ್ಲೆಸೆದಿದ್ದಾರೆ. ಆಗ ಪೊಲೀಸರು ಜನರ ಮೇಲೆ ಅಶ್ರುವಾಯು ಹಾಗೂ ಗುಂಡಿನ ದಾಳಿ ನಡೆಸಿದ್ದಾರೆ. ಆಗ ದಲಿತ ಯುವಕ ಸುರೇಶ ಪೊಲೀಸರ ಗುಂಡಿಗೆ ಬಲಿಯಾಗಿದ್ದಾನೆ.

ಮದುರೈ ಜಿಲ್ಲೆಯ ಉತ್ತಮರಂನ ದಲಿತ ಯುವಕನ ಸಾವಿಗೆ ಕಾರಣವೇನು? ಅದನ್ನು ಪರಿಶೀಲಿಸುವಂತೆ ಸಿಪಿಐ(ಎಂ) ಮತ್ತು ತಮಿಳುನಾಡು ಅಸ್ಪಶ್ಯ ವಿರೋಧಿ ವೇದಿಕೆ ಆಗ್ರಹಿಸಿದೆ.

ತಮಿಳುನಾಡು ಅಸ್ಪಶ್ಯ ವಿರೋಧಿ ವಏದಿಕೆಯ ಸಂಚಾಲಕ ಪಿ.ಸಂಪತ್ ಘಟನೆಯನ್ನು ಖಂಡಿಸಿದ್ದಾರಲ್ಲದೆ, ಗುಂಡಿನ ದಾಳಿ ನಡೆಸಿದ ಪೊಲೀಸರ ವಿರುದ್ಧ ಸೂಕ್ತ ಕಾಯ್ದೆ ಕ್ರಮಗಳನ್ನು ರೂಪಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಅವರು ಎಚ್ಚರಿಸಿದ್ದಾರೆ.

ವರದಿ : ಗಣೇಶ್, ಚೆನ್ನೈ

ನವಂಬರ್ 21: ಅಖಿಲ ಭಾರತ ಪ್ರತಿಭಟನಾ ದಿನ

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಕೂಡಾ ಸರಕಾರದ ನಿಲುವಿನ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದೆ. ಆಳವಾದ ಜಾಗತಿಕ ಆರ್ಥಿಕ ಬಿಕ್ಕಟ್ಟು ಭಾರತವನ್ನೂ ತಟ್ಟಿದೆ ಎಂದು ಭಾರತ ಸರಕಾರವೂ ಈಗ ಒಪ್ಪಿಕೊಂಡಿದೆ. ಆದರೆ ಅದನ್ನು ಎದುರಿಸಲು ಅದು ಕೈಗೊಳ್ಳುತ್ತಿರುವ ಕ್ರಮಗಳು, ಅದು ಜಗತ್ತಿನಾದ್ಯಂತ ನವ-ಉದಾರವಾದಿ ನೀತಿಗಳು ವಿಫಲವಾಗಿದ್ದರೂ, ಅದರಿಂದ ಇನ್ನೂ ಪಾಠ ಕಲಿತಿಲ್ಲ. ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ದೊಡ್ಡ ಉದ್ದಿಮೆದಾರರ ಕಾಳಜಿಗಳನ್ನಷ್ಟೇ ಪರಿಶೀಲಿಸುವ ಸಮಿತಿಯ ರಚನೆ ಮತ್ತು ಪ್ರತಿದಿನ ಅದು ಪ್ರಕಟಿಸುತ್ತಿರುವ ಹಣದ ಹರಿವಿನ ಕ್ರಮಗಳು ಈ ಸರಕಾರ ಯಾವ ದಾರಿ ಹಿಡಿದಿದೆ ಎಂಬುದನ್ನು ತೋರಿಸುತ್ತಿದೆ. ಸರಕಾರಕ್ಕೆ ಆರ್ಥಿಕ ಬಿಕ್ಕಟ್ಟು ಮತ್ತು ಅದು ಅನುಸರಿಸುತ್ತಿರುವ ನವ-ಉದಾರವಾದಿ ನೀತಿಗಳು ದುಡಿಯುವ ಜನಗಳಿಗೆ ತಂದಿರುವ ಸಂಕಟಗಳ ಗಂಭೀರತೆಯ ಬಗ್ಗೆ ಏನೇನೂ ಕಾಳಜಿಯಿದ್ದಂತಿಲ್ಲ. ಹಣಕಾಸು ಮಂತ್ರಿಗಳು ಪ್ರಕಟಿಸುತ್ತಿರುವ ಕ್ರಮಗಳು ಮತ್ತು ಪ್ರಧಾನ ಮಂತ್ರಿಗಳ ಭರವಸೆಗಳು ಸರಕಾರ ದೊಡ್ಡ ಉದ್ಯಮಿಗಳ ಬೇಡಿಕೆಗಳನ್ನು ಒಪ್ಪಿಕೊಂಡಿರುವುದನ್ನು ತೋರಿಸುತ್ತದೆ.

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯು ಸರಕಾರ ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಬದಲಿಸಬೇಕು, ಬ್ಯಾಂಕಿಂಗ್, ವಿಮೆ ಇತ್ಯಾದಿಗಳಲ್ಲಿ ಎಫ್‌ಡಿಐ ಏರಿಕೆ, ಪೆನ್ಶನ್ ಮುಂತಾದ ಸಂಸತ್ತಿನಲ್ಲಿ ಬಾಕಿ ಉಳಿದಿರುವ ಹಣಕಾಸು ಮಸೂದೆಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಕರೆ ನೀಡಿದೆ. ಸಾರ್ವಜನಿಕ ವಲಯವನ್ನು ಬಲಗೊಳಿಸುವ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು, ಸಾಮಾಜಿಕ ವಲಯದಲ್ಲಿ, ಕೃಷಿ ಮತ್ತು ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆ ವಲಯಗಳಲ್ಲಿ ಬೃಹತ್ ಪ್ರಮಾಣದಲ್ಲಿ ಹೂಡಿಕೆ ಮಾಡಬೇಕು ಎಂದು ಅದು ಆಗ್ರಹಿಸಿದೆ.

ಕಾರ್ಮಿಕ ವರ್ಗ ಈ ಸಂದರ್ಭದಲ್ಲಿ ಜಾಗೃತಗೊಂಡು ಕಾರ್ಮಿಕ-ವಿರೋಧಿ ಮತ್ತು ಜನ-ವಿರೋಧಿ ನೀತಿಗಳನ್ನು ಪ್ರತಿರೋಧಿಸಲು ನವಂಬರ್ 21 ರಂದು ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಬೇಕು ಎಂದು ಪ್ರಾಯೋಜಕ ಸಮಿತಿ ಕರೆ ನೀಡಿದೆ. ಅಂದು ಧರಣಿ, ಮುಷ್ಕರ ಪ್ರದರ್ಶನ ಮತ್ತು ರ್‍ಯಾಲಿಗಳ ಮೂಲಕ ಸರಕಾರ ತನ್ನ ನವ-ಉದಾರವಾದಿ ನೀತಿಗಳನ್ನು ಈಗಲಾದರೂ ಕೈಬಿಡಬೇಕು ಎಂದು ಕಾರ್ಮಿಕರು ಆಗ್ರಹಿಸುತ್ತಾರೆ.

ಜನಶಕ್ತಿ ಕನ್ನಡ ವಾರಪತ್ರಿಕೆ
ನವೆಂಬರ್ 16, 2008

ಒಬಾಮಾ ಐತಿಹಾಸಿಕ ವಿಜಯ

ಉತ್ತಮ ಭವಿಷ್ಯದ ಕನಸು ಕಾಣಬಹುದೇ?

ಸೀತಾರಾಂ ಯೆಚೂರಿ



ಇವತ್ತು ಒಬ್ಬ ಕರಿಯ ಬದಲಾವಣೆಯ ಜನಾದೇಶ ಹೊತ್ತು ಶ್ವೇತ ಭವನದ ಒಳಗೆ ನಡೆದಿದ್ದಾನೆ. ಈ ಅರ್ಥದಲ್ಲಿ ನಿಜವಾಗಿಯೂ ನಮ್ಮ ಕಣ್ಣೆದುರಿನಲ್ಲೇ ಇತಿಹಾಸ ನಿರ್ಮಾಣ ಆಗುತ್ತಿದೆ. ಇಂದು ಜಗತ್ತಿನೆದುರು ಹಲವಾರು ಸವಾಲುಗಳಿವೆ. ಅಂತಹ ಬಹಳಷ್ಟು ಸವಾಲು ಸಮಸ್ಯೆಗಳನ್ನು ಅಮೇರಿಕಾವೇ ಸೃಷ್ಟಿಸಿದೆ. ಇಂತಹಗಳ ಅರಿವು ಒಬಾಮನ ಗಮನದಲ್ಲಿ ಇದೆ. ಆದರೆ ಅವರ ಮುಂದಿನ ನಡೆ ಹೇಗೆ? ಅಮೇರಿಕಾದ ಹಿಂದಿನ ಅನುಭವಗಳೇನು? ಅಮೇರಿಕಾದ ಚಿರತೆಯು ಪಟ್ಟೆ ಬದಲಿಸೀತೆ?


ಅಮೆರಿಕದ 44 ನೇ ಅಧ್ಯಕ್ಷರ ಪದವಿಗೆ ಬರಾಕ್ ಹುಸೇನ್ ಒಬಾಮಾ ರವರ ಗಮನಾರ್ಹ ಏರಿಕೆ ನೋಡಿದಾಗ ನನಗೆ ಚೀನೀ ಶಾಪವೊಂದು ನೆನಪಾಗುತ್ತದೆ. 'ನೀನು ಆಸಕ್ತಿಯುತ ಅವಧಿಯಲ್ಲಿ ಜೀವಿಸು' ಅಂತ ಆ ಶಾಪ ನಿಂದನೆ.

ನನ್ನ ಪೀಳಿಗೆಯವರ ಹರೆಯದಲ್ಲಿ - ಅಂದರೆ 1960 ರ ದಶಕದಲ್ಲಿ - ಒಂದು ಹಾಲಿವುಡ್ ಫಿಲಂ ಬಂದಿತ್ತು. ಅದರ ಹೆಸರು 'ಇವತ್ತು ರಾತ್ರಿ ಊಟಕ್ಕೆ ಯಾರು ಬರುತ್ತಿದ್ದಾರೆ' 'ಊಹಿಸಿ' (Guess Who is Coming for Dinner) ಅಂತ. ಮಗಳು ಆಕೆಯ ಕರಿಯ ಸ್ನೇಹಿತನನ್ನು ರಾತ್ರಿ ಊಟಕ್ಕೆ ಆಹ್ವಾನಿಸಿದಾಗ, ಬಿಳಿಯ ಕುಟುಂಬದ ಒಳಗಿನ ತುಮುಲದ ಮೂಲಕ ಅಮೆರಿಕನ್ ಸಮಾಜದ ಸಂಘರ್ಷಗಳನ್ನು ಅದು ಚಿತ್ರಿಸಿತ್ತು. ಸಿಡ್ನಿ ಪೋಶಿಯರ್ ವರ್ಣ ಪೂರ್ವಗ್ರಹದ ಅಭದ್ರತೆಗಳನ್ನು ಮನಮುಟ್ಟುವಂತೆ ಬಿಂಬಿಸಿದ್ದ. ಈ ಫಿಲಂ ಎಲ್ಲಾ ರೀತಿಯ ಅನ್ಯಾಯಗಳು ಮತ್ತು ಮಲತಾಯಿ ಧೋರಣೆಗಳ ವಿರುದ್ಧ ಹೋರಾಡಲು ನಮ್ಮಲ್ಲಿ ಕೆಲವರ ದೃಢನಿಶ್ಚಯವನ್ನು ಗಟ್ಟಿಗೊಳಿಸಿತ್ತು. 1970 ರ ದಶಕದಲ್ಲಿ ನನ್ನ ಮೊದಲ ಭೇಟಿಯಲ್ಲಿ ನ್ಯೂಯಾರ್ಕ ಬೀದಿಗಳಲ್ಲಿ ಚಿಲ್ಲರೆ ಬೇಡುವ ಕರಿಯ ಸಾಮಾನ್ಯ ದೃಶ್ಯವಾಗಿತ್ತು. ಇವತ್ತು ಒಬ್ಬ ಕರಿಯ ಬದಲಾವಣೆಯ ಜನಾದೇಶ ಹೊತ್ತು ಶ್ವೇತ ಭವನದ ಒಳಗೆ ನಡೆದಿದ್ದಾನೆ. ಈ ಅರ್ಥದಲ್ಲಿ ನಿಜವಾಗಿಯೂ ನಮ್ಮ ಕಣ್ಣೆದುರಿನಲ್ಲೇ ಇತಿಹಾಸ ನಿರ್ಮಾಣ ಆಗುತ್ತಿದೆ.

ಒಬಾಮಾರನ್ನು 'ಸಾಮಾಜಿಕ ಮತ್ತು ಮಾನವೀಯ ದೃಷ್ಟಿಯಿಂದ' ಅಮೆರಿಕದ ಅಧ್ಯಕ್ಷ ಪದವಿಗೆ ಅತ್ಯಂತ ಪ್ರಗತಿಪರ ಅಭ್ಯರ್ಥಿ ಎಂದು ಫಿಡೆಲ್ ಕ್ಯಾಸ್ಟ್ರೋ ಬಣ್ಣಿಸಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿ ಪ್ರಗತಿಪರ ತಿರುವು ಪಡೆಯಬಹುದು ಎಂದು ನಿರೀಕ್ಷಿಸುವುದು ಭ್ರಮೆಯಾದೀತು ಎಂದು ಅದೇ ಸಮಯದಲ್ಲಿ ಎಚ್ಚರಿಸಿದ್ದಾರೆ.


ಮಾರ್ಕ್ಸ್ ಒಂದು ಬಾರಿ ಹೇಳಿದ್ದರು, 'ಮನುಷ್ಯರು ತಮ್ಮ ಚರಿತ್ರೆಯನ್ನು ತಾವೇ ನಿರ್ಮಿಸುತ್ತಾರೆ, ಆದರೆ ಅವರಿಗೆ ಮನ ಬಂದಂತೆ ಅಲ್ಲ. ಅವರು ತಾವು ಆಯ್ಕೆ ಮಾಡಿದ ಸನ್ನಿವೇಶದಲ್ಲಿ ಚರಿತ್ರೆಯನ್ನು ನಿರ್ಮಿಸುವುದಿಲ್ಲ. ಬದಲಾಗಿ ಹಿಂದಿನಿಂದ ಬಂದ, ಈಗಾಗಲೇ ಇರುವ, ನೇರವಾಗಿ ಎದುರಿಸುವ ಸನ್ನಿವೇಶದಲ್ಲಿ ನಿರ್ಮಿಸುತ್ತಾರೆ'

'ನಾವು ಗೆದ್ದಿದ್ದೇವೆ' ಎಂದು ಜನರ ಒಕ್ಕೊರಲ ಕೂಗು....



ಸನ್ನಿವೇಶದ ಬಳುವಳಿ :

ಜಾಗತಿಕ ಏಕಧ್ರುವೀಯತೆಯನ್ನು ಜಗತ್ತಿನ ಮೇಲೆ ಹೊರಿಸುವ ಅಮೆರಿಕನ್ ಸಾಮ್ರಾಜ್ಯಶಾಹಿಯ ದಂಡಯಾತ್ರೆ ; ಯಾವುದೇ



ಸಾರ್ವಭೌಮ ಸ್ವತಂತ್ರ ದೇಶದ ಮೇಲೆ 'ಅಪಾಯದ ತಡೆಗೆ ಅಪಾಯದ ಮೊದಲೇ ಆಕ್ರಮಣ' ಮಾಡುವ ರಣನೀತಿ ; 'ಭಯೋತ್ಪಾದಕತೆ ವಿರುದ್ಧ ಜಾಗತಿಕ ಹೋರಾಟ' ದ ಹೆಸರಲ್ಲಿ ಯಾವುದೇ ದೇಶದ ಮೇಲೆ ಅತಿಕ್ರಮಣ ಮಾಡಿ ಅದನ್ನು ವಶ ಪಡಿಸಿಕೊಳ್ಳುವ ಅಮೆರಿಕದ ಸ್ವಯಂ-ಘೋಷಿತ ಹಕ್ಕು. ಅಮೆರಿಕದ ಹಲವು ಸರ್ಕಾರಗಳು ಪಾಲಿಸಿಕೊಂಡು ಬಂದ 'ಪ್ರಭುತ್ವದ ಭಯೋತ್ಪಾದನೆ' ಯ ಕುಖ್ಯಾತ ಚರಿತ್ರೆ ಸಹ ಅವರ ಎದುರು ಇದೆ. ಕ್ಯೂಬಾದ ವಿರುದ್ಧ ಆರ್ಥಿಕ ದಿಗ್ಬಂಧನದ ಅಪರಾಧ ಮುಂದುವರೆಸುವುದಾಗಿ ಒಬಾಮಾರೇ ಸಾರಿದ್ದಾರೆ. ಅಬು ಘ್ರೈಬ್ ಮತ್ತು ಗ್ವಾಟಾನಾಮೊ ಮಿಲಿಟರಿ ಜೈಲುಗಳಲ್ಲಿ ಭಯಾನಕ ಚಿತ್ರಹಿಂಸೆಗೆ ಅಧ್ಯಕ್ಷೀಯ ಸಮ್ಮತಿ ಸಹ ಒಬಾಮಾಗೆ ಬಳುವಳಿಯಾಗಿ ಬರುತ್ತದೆ.

20 ನೇ ಶತಮಾನದ ಉದ್ದಕ್ಕೂ ಇಸ್ರೇಲಿಗೆ ಅಮೆರಿಕನ್ ಬೆಂಬಲದಿಂದಾಗಿ ಪ್ಯಾಲೆಸ್ಟೈನ್ನರು ಅವರ ತಾಯ್ನಾಡಿನಿಂದ ವಂಚಿತರಾದರು. ಇದು ಬದಲಾಗುತ್ತದೆಯೆ? 'ಅಮೆರಿಕನ್ ಪಾರ್ಲಿಮೆಂಟಿನಲ್ಲಿ ಡೆಮೊಕ್ರಾಟಿಕ್ ಪಕ್ಷ ಪಡೆದ ಅಭೂತಪೂರ್ವ ಬಹುಮತದಿಂದ, ಭಾರತದ ಮೇಲೆ ಸಿ.ಟಿ.ಬಿ.ಟಿ. ಒಪ್ಪಂದಕ್ಕೆ ಸಹಿ ಮಾಡಲು ಒತ್ತಡ ಹೆಚ್ಚಬಹುದು. ಈಗಾಗಲೇ ಭಾರತ-ಅಮೆರಿಕ ಅಣು ಒಪ್ಪಂದದ ಹಿನ್ನೆಲೆಯಲ್ಲಿ ಹಲವು ಒತ್ತಡಗಳನ್ನು ಎದುರಿಸುತ್ತಿರುವಾಗ ಗಂಭೀರ ಪರಿಣಾಮಗಳು ಆಗಬಹುದು. ಕಾಶ್ಮೀರ ವಿವಾದ ಬಗೆಹರಿಸುವುದರಲ್ಲಿ ಒಬಾಮಾ ಭಾರೀ ಆಸಕ್ತಿ ತೋರಿಸಿದ್ದಾರೆ. ಇಂಡೋ-ಪಾಕ್ ಉಭಯತ್ರ ವಿವಾದಗಳಲ್ಲಿ ಮೂರನೇ ಪಾರ್ಟಿಗೆ ಮೂಗು ತೂರಿಸಲು ಅವಕಾಶ ಇಲ್ಲ ಎಂಬುದು ಭಾರತದ ಹಳೆಯ ಬದಲಾಗದ ನಿಲುವು. ತಾಲಿಬಾನ್ ಸೋಲಿಸಲು ಅಮೆರಿಕಕ್ಕೆ ನೆರವಾಗಲು ಪಾಕಿಸ್ತಾನಕ್ಕೆ ಅನುವಾಗುವಂತೆ ಕಾಶ್ಮೀರ ವಿವಾದದ ಪರಿಹಾರ ತುರ್ತಿನದು ಎಂದು ಒಬಾಮಾ ಹೇಳಿದ್ದಾರೆ.

ಈ ಮತ್ತು ಇತರ ಹಲವು ಪ್ರಮುಖ ವಿಷಯಗಳ ಬಗ್ಗೆ ಒಬಾಮಾ ಅಧ್ಯಕ್ಷ ಪದವಿ ಗ್ರಹಣ ಮಾಡಿದ ಮೇಲೆ ಅಮೆರಿಕದ ಮುಂದಿನ ನಿಲುವು ಏನು ಇರುತ್ತದೆ ಎಂದು ಗೊತ್ತಾಗುತ್ತದೆ. ಈಗಿನ ಜಾಗತಿಕ ಬಂಡವಾಳ ಶಾಹಿಯ ಬಿಕ್ಕಟ್ಟನ್ನು ಒಬಾಮಾರ ಅಡಿಯಲ್ಲಿ ಅಮೆರಿಕನ್ ಆಡಳಿತ ಯಾವ ರೀತಿ ಎದುರಿಸುತ್ತದೆ ಎಂದು ಜಗತ್ತಿಗೆ ಗೊತ್ತಾಗುತ್ತದೆ. ಅಮೆರಿಕದಲ್ಲಿ ಆರ್ಥಿಕ ಹಿಂಜರಿತ ಆಗಲೇ ಆರಂಭ ವಾಗಿದೆ. ಇತರ ಕೈಗಾರಿಕಾ ದೇಶಗಳಿಗೂ ಅದು ಹರಡುತ್ತಿದೆ. ಈ ಬಗ್ಗೆ ನಿಲುವುಗಳನ್ನು ಆ ಮೇಲೆ ತೆಗೆದುಕೊಳ್ಳಲು ಸಾಧ್ಯ.

ಮುಖ್ಯ ಪ್ರಶ್ನೆ ಎಂದರೆ:

ಇವುಗಳಲ್ಲಿ ಯಾವುದರಲ್ಲಾದರೂ ಬದಲಾವಣೆ ಇರುತ್ತಾ ಅಂತ ? ಆಸೆಗಳು ಮತ್ತು ನಿರೀಕ್ಷೆಗಳೇನೋ ಇವೆ. ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಹಿಂದಿನ ದಾಖಲೆಗಳನ್ನು ನೋಡಿದರೆ ಇವೆಲ್ಲಾ ಬರೀ ಭ್ರಮೆ ಎನ್ನಿಸುತ್ತದೆ. ಹಿಂದೆ ಅಮೆರಿಕನ್ ಸಾಮ್ರಾಜ್ಯಶಾಹಿಯ 'ಕಮುನಿಸಂ ವಿರುದ್ಧ ಯುದ್ಧ' ದ ಗೀಳು ವಿಯೆಟ್ನಾಂ ಮೇಲೆ ಆಕ್ರಮಣಕ್ಕೆ ಎಡೆ ಮಾಡಿತ್ತು. ಈಗಿನ 'ಭಯೋತ್ಪಾದನೆ ವಿರುದ್ಧ ಯುದ್ಧ' ದ ಒತ್ತಡ ಇನ್ನೂ ಭೀಕರ 'ಪ್ರಭುತ್ವ ಭಯೋತ್ಪಾದನೆ'ಯ ಕೃತ್ಯಗಳಿಗೆ ಒಬಾಮಾ ಆಡಳಿತವನ್ನು ತಳ್ಳಬಹುದೆ?

ಅಮೆರಿಕದ ರಾಷ್ಟ್ರ ಕಟ್ಟಿದ ಪ್ರಕ್ರಿಯೆಗೆ ಒಬಾಮಾ ತನ್ನನ್ನು ಸಮರ್ಪಿಸಿಕೊಂಡಿದ್ದಾರೆ. ಅವರ ಪುಸ್ತಕ 'The Audacity of Hope' (ಆಶಾಕಿರಣದ ಉದ್ಧಟತನ) ದ ಕೊನೆಯಲ್ಲಿ.

'ಒಂದು ಪರಿಪೂರ್ಣವಲ್ಲದ ಒಕ್ಕೂಟವನ್ನು ಪರಿಪೂರ್ಣಗೊಳಿಸುವ ಸೇವೆಯಲ್ಲಿ ಲಿಂಕನ್ ಮತ್ತು (ಮಾರ್ಟಿನ್ ಲೂಥರ್) ಕಿಂಗ್ ತಮ್ಮ ಜೀವವನ್ನೇ ತೇಯ್ದರು. ಮುಖವಿಲ್ಲದ, ಹೆಸರಿಲ್ಲದ ಪುರುಷರು-ಮಹಿಳೆಯರು, ಗುಲಾಮರು ಮತ್ತು ಸೈನಿಕರು, ದರ್ಜಿಗಳು ಮತ್ತು ಕಟುಕರು, ತಮ್ಮ ಮಕ್ಕಳ ಮೊಮ್ಮಕ್ಕಳ ಜೀವನ ಪ್ರತಿ ಇಟ್ಟಿಗೆ-ಇಟ್ಟಿಗೆ ರೈಲು-ರೈಲು ಕೈ-ಕೈ ಗಳಿಂದ ಕಟ್ಟುತ್ತಾ ನಮ್ಮ ಸಾಮೂಹಿಕ ಕನಸುಗಳಿಗೆ ಜೀವ ತುಂಬಿದರು..... ನಾನು ಈ ಪ್ರಕ್ರಿಯೆಯ ಭಾಗವಾಗಿ ಇರಬೇಕು ಎಂದು ಬಯಸುತ್ತೇನೆ..?

ಮೆಚ್ಚಬೇಕಾದ ಸಮರ್ಪಣೆ:

ಆದರೆ ಈ ಪ್ರಕ್ರಿಯೆ ಜಗತ್ತಿನ ಕೇವಲ ಶೇಕಡಾ 5 ರಷ್ಟಿರುವ 30 ಕೋಟಿ ಜನರಿಗೆ ಮಾತ್ರ ಸೀಮಿತವಾಗಿ ಇರುತ್ತಾ 'ಫಿಡೆಲ್ ಕ್ಯಾಸ್ಟ್ರೋ ಹೇಳಿದಂತೆ ಮನುಕುಲದ ಇತರ ಶೇ. 95 ಜನರು - ಯುದ್ಧ ಅಥವಾ ಶಾಂತಿ ಯಲ್ಲಿ ಇರುತ್ತಾರಾ' ? ಅವರು ಉಸಿರಾಡುವ ಗಾಳಿ ಅದಕ್ಕೆ ಯೋಗ್ಯವಾಗಿ ಇರುತ್ತಾ 'ಅವರ ಜೀವನದ ಗುಣಮಟ್ಟ ಎನಿರುತ್ತದೆ' ಇವೆಲ್ಲಾ 'ಸಾಮ್ರಾಜ್ಯದ ಅಧಿಕೃತ ನಾಯಕ' ಅಂದರೆ ಒಬಾಮಾ ಮರ್ಜಿಯ ಮೇಲೆ ಅವಲಂಬಿಸಿರುತ್ತದೆ. ಇದರ ಬಗ್ಗೆ ಒಬಾಮಾ ಎನು ಹೇಳುತ್ತಾರೆ?

ಈಗ ಚೀನೀ ಶಾಪಕ್ಕೆ ಮರಳಿ ಬರೋಣ. 'ಪ್ರತಿ ಬಿಕ್ಕಟ್ಟಿನಲ್ಲಿ ಒಂದು ಆಶಾ ಕಿರಣ ಸಹ ಇರುತ್ತದೆ' ಎಂಬ ನಂಬಿಕೆ ಅದರಲ್ಲಿ ಅಡಕವಾಗಿದೆ. ಇದನ್ನು ಉತ್ತಮ ಜಗತ್ತು ಸೃಷ್ಟಿಸಲು ಬ'ಳಸಲಾಗುತ್ತದೆಯೆ ಚಿರತೆ ತನ್ನ ಪಟ್ಟೆ ಬದಲಾಯಿಸುವುದಿಲ್ಲ ಎಂಬುದು ಅಮೆರಿಕನ್ ಸಾಮ್ರಾಜ್ಯಶಾಹಿಯ ಹಿಂದಿನ ಅನುಭವ ಇರುವವರ ಅನ್ನಿಸಿಕೆ. ಹಾಗಾದರೆ, ಈ ಅನುಭವ ಮೆಟ್ಟಿ ನಿಲ್ಲುವ ಆಶಾಗೋಪುರ ಕಟ್ಟಲು ಹೋರಾಟ ಮುಂದುವರೆಯುತ್ತದೆ.

ಬರಾಕ್ ಹುಸೇನ್ ಒಬಾಮಾ ಗೆಲುವು ಹೇಗೆ ಸಾಧ್ಯವಾಯಿತು?

ಕೆಲವು ಅಂಕೆ ಸಂಖ್ಯೆಗಳು

ಒಬಾಮಾ ಗೆಲುವು ಹೇಗೆ ಸಾಧ್ಯವಾಯಿತು? ಒಬಾಮಾ ಗೆಲುವು ಮತ ಕಾಲೇಜುಗಳ ಲೆಕ್ಕದಲ್ಲಿ ಭಾರೀ ಅಂತ ಕಂಡರೂ (364-162) ನೇರ ಮತಗಳಲ್ಲಿ ಲೆಕ್ಕ ಹಾಕಿದರೆ ಭಾರೀ ಅಲ್ಲ. ಒಬಾಮಾ ಶೇ. 53 (6.5 ಕೋಟಿ) ಮತ ಗಳಿಸಿದರೆ, ಜಾನ್ ಮೆಕೆನ್ ಶೇ. 47 (5.7 ಕೋಟಿ) ಗಳಿಸಿದ್ದರು. ಆದರೆ ಶೆ. 3 ಮತಗಳ ಏರುಪೇರು ಆದರೆ ಫಲಿತಾಂಶ ಬೇರೆ ಆಗಿರುತ್ತಿತ್ತು. ಒಬಾಮಾ ಪ್ರಚಾರ ಯಂತ್ರಕ್ಕೆ ಈ ಬಗ್ಗೆ ಚೆನ್ನಾಗಿ ಗೊತ್ತಿದ್ದು ಅವರು ಈ ನಿಟ್ಟಿನಲ್ಲಿ ಹಲವು ಅಂಶಗಳ ಬಗ್ಗೆ ಗಮನ ವಹಿಸಿದ್ದರು. ಈ ಅಂಶಗಳು ಈ ಗೆಲುವನ್ನು ಸಾಧ್ಯ ಮಾಡಿದವು. ಎಕ್ಸಿಟ್ ಪೋಲ್ (ಮತದಾನದ ನಂತರದ ಜನ ಮತ ಸಂಗ್ರಹ) ನ ಕೆಲವು ಅಂಕೆ ಸಂಖ್ಯೆಗಳು ಈ ಬಗ್ಗೆ ಬೆಳಕು ಚೆಲ್ಲಿವೆ.

ಒಬಾಮಾ ಕರಿಯರ ಮತಗಳನ್ನು ಗಳಿಸುವುದು ಸ್ವಾಭಾವಿಕವೇ: ಮಾತ್ರವಲ್ಲ ಬಹುಸಂಖ್ಯಾತ ಕರಿಯರು ಯಾವಾಗಲೂ ಡೆಮೊಕ್ರಾಟ್ ಬೆಂಬಲಿಗರೇ. ಆದರೆ ಕರಿಯರು ಮತ ಬೇರೆ ಬೇರೆ ಕಾರಣಗಳಿಂದ ತಮ್ಮ ಮತ ಚಲಾಯಿಸದಂತೆ ರಿಪಬ್ಲಿಕನ್ನರು ಕುತಂತ್ರ ಹೂಡುತ್ತಿದ್ದರು. ಕರಿಯರ ಹೆಸರುಗಳನ್ನು ಚುನಾವಣಾ ಪಟ್ಟಿಯಿಂದಲೇ ಕಿತ್ತು ಹಾಕುವುದು, ಕರಿಯರ ಚುನಾವಣೆ ರಿಜಿಸ್ಟರ್ ಮಾಡದಿರುವಂತೆ ಮಡುವುದು, ರಿಜಿಸ್ಟರ್ ಮಾಡಿದರೆ ಅದನ್ನು ಹಲವು ಕಾನೂನುಬದ್ಧ-ಬಾಹಿರ ಕ್ರಮಗಳಿಂದ ರದ್ದು ಮಾಡಿಸುವುದು, ಮತಗಟ್ಟೆಯಲ್ಲೂ ಹಲವು ಕಾನೂನುಬದ್ಧ-ಬಾಹಿರ ಕ್ರಮಗಳಿಂದ ಮತದಾನಕ್ಕೆ ಸವಾಲು ಹಾಕುವುದು ?ಇತ್ಯಾದಿ ಕುತಂತ್ರಗಳು. ಡೆಮೊಕ್ರಾಟು ಈ ಬಗ್ಗೆ ಏನೂ ಮಾಡದೆ ಸುಮ್ಮನಿರುತ್ತಿದ್ದರು. ಆದರೆ ಈ ಬಾರಿ ದೊಡ್ಡ ಪ್ರಮಾಣದಲ್ಲಿ ಡೆಮೊಕ್ರಾಟ್ ಕಾರ್ಯಕರ್ತರ ಮಧ್ಯಪ್ರವೇಶದಿಂದ ಈ ಕುತಂತ್ರಗಳಿಂದ ಮತ ಸೋರಿಕೆ ತಡೆಯುವುದು ಸಾಧ್ಯವಾಗಿದೆ. ಕರಿಯರು ದೊಡ್ಡ ಪ್ರಮಾಣದಲ್ಲಿ ಮತದಾನ ಮಾಡಿದರು. ಕರಿಯರ ಮತಗಳಲ್ಲಿ ಶೇ. 96 ಒಬಾಮಾ ಪಾಲಾಯಿತು.

ಕರಿಯರು ಮಾತ್ರವಲ್ಲ, ಎಲ್ಲಾ ಸಮುದಾಯಗಳ ಮತ ರಿಜಿಸ್ಟರ್ ಮಾಡಿಸುವ ಬಗ್ಗೆ ಒಬಾಮಾ ಪ್ರಚಾರಕರು ಅತ್ಯಂತ ಹೆಚ್ಚಿನ ಗಮನ ಕೊಟ್ಟಿದ್ದರು. ಮೊದಲ ಬಾರಿ ಮತದಾರರಲ್ಲಿ ಶೇ.68 ಕ್ಕೂ ಹೆಚ್ಚು ಮತಗಳು ಒಬಾಮಾರಿಗೆ ಬಿದ್ದವು. ಅಂದರೆ ಹಲವು ಡೆಮೊಕ್ರಾಟ್ ಬೆಂಬಲಿಗರನ್ನು ಮತಗಟ್ಟೆಗೆ ತರುವುದು ಸಾಧ್ಯವಾಗಿದೆ. ಯುವ ಮತದಾರರ (30 ಕ್ಕಿಂತ ಕಡಿಮೆ ಪ್ರಾಯ) ರಲ್ಲಿ ಶೇ.61 ಕ್ಕೂ ಹೆಚ್ಚು ಮತಗಳು ಒಬಾಮಾರಿಗೆ ಬಿದ್ದವು. ಚುನಾವಣೆಯ ಬಗ್ಗೆ ಯುವಕರ ನಿರ್ಲಕ್ಷ್ಯದ ವಿರುದ್ಧ ಮತ್ತು ಅವರು ಮತದಾನದಲ್ಲಿ ಉತ್ಸಾಹದಲ್ಲಿ ಭಾಗವಹಿಸುದಕ್ಕೆ ಒಬಾಮಾ ಪ್ರಚಾರಕರು ಒತ್ತು ಕೊಟ್ಟಿದ್ದರು. 65ಕ್ಕಿಂತ ಹೆಚ್ಚಿನ ವಯಸ್ಸಿನ ಗುಂಪು ಬಿಟ್ಟರೆ ಎಲ್ಲಾ ವಯೋಮಾನದ ಗುಂಪುಗಳಲ್ಲಿ ಒಬಾಮಾ ಮುಂದೆ ಇದ್ದರು.

ಲ್ಯಾಟಿನೋ (ಲ್ಯಾಟಿನ್ ಅಮೆರಿಕದ ಜನಾಂಗೀಯ ಮೂಲದವರು) ಗಳ ಮತದಲ್ಲೂ ಒಬಾಮಾ (2004 ಮಟ್ಟದಿಂದ ಶೆ.6 ರಷ್ಟು ಹೆಚ್ಚಿಸಿ) ಶೇ. 66 ಮತ ಪಡೆದರು. ಲ್ಯಾಟಿನೋ ಮತ್ತು ಕರಿಯರ ಸಂಬಂಧ ಅಷ್ಟೇನೂ ಚೆನ್ನಾಗಿ ಇಲ್ಲದೆ, ಒಬಾಮಾರ ಕರಿಯ ಮೂಲದಿಂದ ಲ್ಯಾಟಿನೋ ಮತಕ್ಕೆ ಸಂಚಕಾರ ಬರಬಹುದು ಎಂಬ ಗುಮಾನಿ ಹುಸಿಯಾಗಿಸಿದರು. ಬಿಳಿಯರಲ್ಲೂ ಮತಗಳಿಕೆ ಶೇ. 43 ಕ್ಕೆ ಏರಿಸಿದರು. ಕಾರ್ಮಿಕ ವರ್ಗದ (ಬಿಳಿಯರು ಸೇರಿದಂತೆ) ಮತಗಳಲ್ಲೂ ಒಬಾಮಾ ಹೆಚ್ಚಳ ಸಾಧಿಸಿದರು. ಮಹಿಳೆಯರಲ್ಲೂ (2004 ರ ಶೆ.51 ರಿಂದ) ಶೇ. 56 ಕ್ಕೆ ಮತಗಳಿಕೆ ಏರಿತು. ಇವೆಲ್ಲದ್ದಕ್ಕಿಂತ ಹೆಚ್ಚಾಗಿ ಆರ್ಥಿಕ ಕುಸಿತದ ಬಗ್ಗೆ ಆತಂಕ ಮೆಕೇನ್‌ಗೆ ಮುಳುವಾಯಿತು ಎಂಬುದು ಸ್ಪಷ್ಟವಾಗಿ ಮೂಡಿದೆ ಎಕ್ಸಿಟ್ ಪೋಲಿನಿಂದ. ಶೆ. 62 ಆರ್ಥಿಕ ಕುಸಿತ ಅತಿ ದೊಡ್ಡ ಚುನಾವಣಾ ವಿಷಯ ಎಂದರು. ಇರಾಕ್ (ಶೇ.10), ಭಯೋತ್ಪಾದನೆ (ಶೇ.9), ಆರೋಗ್ಯ ಸೇವೆ (ಶೇ.9) ಮತದಾರರನ್ನು ಕಾಡಿದ ಇತರ ಚುನಾವಣಾ ವಿಷಯಗಳು. ಆರ್ಥಿಕ ಕುಸಿತದ ಬಗ್ಗೆ 'ಅತೀವ ಆತಂಕ' ವ್ಯಕ್ತ ಪಡಿಸಿದ ಮತದಾರರಲ್ಲಿ ಶೇ. 59 ಜನ ಒಬಾಮಾ ಬೆಂಬಲಿಸಿದರು.

ಒಬಾಮಾ ಗೆಲುವಿನ ಕ್ರೆಡಿಟ್ ಮುಖ್ಯವಾಗಿ ಬುಶ್ ಮತ್ತು ಆತನ 8 ವರ್ಷದ ದುರಾಡಳಿತಕ್ಕೆ ಸಲ್ಲಬೇಕು! ಹೆಚ್ಚು ನಿರ್ದಿಷ್ಟವಾಗಿ ಆರ್ಥಿಕ ಕುಸಿತಕ್ಕೆ ಸಲ್ಲಬೇಕು. ಆರ್ಥಿಕ ಕುಸಿತ ಸಹ ಬುಶ್ ದುರಾಡಳಿತದ ನೇರ ಫಲ. ಒಬಾಮಾ ಈ ಅವಕಾಶವನ್ನು ಬಳಸಿ 'ಬದಲಾವಣೆ' ಯ ನಂಬಲರ್ಹ ಎಜೆಂಡಾ ದೇಶದ ಮುಂದಿಟ್ಟರು. ಬದಲಾವಣೆಗೆ ಹಾತೊರೆಯುತ್ತಿದ್ದ ಸಾಮಾನ್ಯ ಅಮೆರಿಕನ್ನರ ಆಸೆ ಮತ್ತು ನಿರೀಕ್ಷೆಗಳನ್ನು ಏರಿಸಿದರು. ರಾಜಕೀಯದಲ್ಲಿ ಆಸಕ್ತಿ, ತೊಡಗಿಸಿಕೊಳ್ಳುವಿಕೆ ಕೆರಳಿಸಿದರು.

ಎಲ್ಲಕ್ಕಿಂತ ಹೆಚ್ಚಾಗಿ ಒಬಾಮಾ ಮತ್ತು ಆತನ ಪ್ರಚಾರ ಯಂತ್ರ ಮೊದಲಿಂದಲೂ ಪ್ರಚಂಡ ಆತ್ಮ ವಿಶ್ವಾಸ, ಪರಿಶ್ರಮ ತೋರಿಸಿತು. ಬೆಂಬಲಿಗರಲ್ಲಿ, ಮತದಾರರಲ್ಲಿ ಭರವಸೆ ಮೂಡಿಸುವಲ್ಲಿ ಇದು ಸಹಾಯಕವಾಯಿತು.



'ಚುನಾವಣಾ ಕಾಲೇಜು' ಪಧ್ಧತಿ ಮತ್ತು 'ತೂಗು ರಾಜ್ಯಗಳು'

ಅಮೆರಿಕದ ವಿಶಿಷ್ಟ ಮತದಾನ ಪದ್ಧತಿಯಂತೆ ಪ್ರತಿ ರಾಜ್ಯಕ್ಕೆ 'ಚುನಾವಣಾ ಕಾಲೇಜು ಮತ' ಗಳಿರುತ್ತವೆ. ಇದು ಕನಿಷ್ಟ ಮೂರು ಮತ್ತು ಉಳಿದದ್ದು ಜನಸಂಖ್ಯೆಯ ಅನುಪಾತದಲ್ಲಿ ಇರುತ್ತದೆ. ಒಟ್ಟು 540 'ಚುನಾವಣಾ ಕಾಲೇಜು ಮತ' ಗಳನ್ನು ರಾಜ್ಯಗಳಿಗೆ ಹಂಚಲಾಗಿದೆ. ವಿಚಿತ್ರವೆಂದರೆ ಅಭ್ಯರ್ಥಿ ಗಳಿಸಿದ ಮತದ ಅನುಪಾತದಲ್ಲಿ ಈ ಮತಗಳನ್ನು ಕೊಡಲಾಗುವುದಿಲ್ಲ, ಉದಾಹರಣೆಗೆ ಕ್ಯಾಲಿಫೋರ್ನಿಯಾಕ್ಕೆ 55 ಮತಗಳಿವೆ. ಕ್ಯಾಲಿಫೋರ್ನಿಯಾದಲ್ಲಿ ಶೇ. 61 ಮತ ಗಳಿಸಿದ ಒಬಾಮಾಗೆ ಈ 55 ಮತಗಳು ಸಿಗುತ್ತವೆ. ಶೇ.37 ಮತಗಳಿಸಿದ ಮೆಕೇನ್ ಗೆ ಸೊನ್ನೆ! ಇದೇ ರೀತಿ ಟೆಕ್ಸಾಸ್ ನ 34 ಮತಗಳು ಶೇ. 55 ಮತ ಗಳಿಸಿದ ಮೆಕೇನ್ ಗೆ. ಶೆ. 44 ಮತ ಗಳಿಸಿದ ಒಬಮಾಗೆ ಸೊನ್ನೆ! ಈ ವಿಚಿತ್ರ ಪಧ್ಧತಿಯಿಂದಾಗಿ ಒಟ್ಟಾರೆ ಹೆಚ್ಚು ಮತ ಗಳಿಸಿದ ಅಭ್ಯರ್ಥಿ ಕಡಿಮೆ ?ಚುನಾವಣಾ ಕಾಲೇಜು ಮತ? ಪಡೆಯಬಹುದು. ಇದೇ 2000 ಚುನಾವಣೆಯಲ್ಲಿ ಆಯಿತು. ಹೆಚ್ಚು ಮತ ಪಡೆದ ಅಲ್ ಗೋರ್ ಗಿಂತ ಬುಶ್ ಹೆಚ್ಚು 'ಚುನಾವಣಾ ಕಾಲೇಜು ಮತ'ಗಳನ್ನು ಪಡೆದರು. ಅವರು ಬೇರೆ ಗೋಲ್ ಮಾಲ್ ಸಹ ಮಾಡಿದ್ದರು ಎಂಬುದು ಬೇರೆ ವಿಷಯ.


ಹೆಚ್ಚಿನ ದೊಡ್ಡ ರಾಜ್ಯಗಳು ಒಂದು ಪಕ್ಷದತ್ತ ಸ್ಪಷ್ಟ ವಾಲಿಕೆ ತೋರಿಸಿವೆ. (ಉದಾ: ಕ್ಯಾಲಿಫೋರ್ನಿಯಾ ಡೆಮೊಕ್ರಾಟ್, ಟೆಕ್ಸಾಸ್ ರಿಪಬ್ಲಿಕನ್). ಆದ್ದರಿಂದ ಈ ಪಧ್ಧತಿ ಕೆಲವು ಸಣ್ಣ ರಾಜ್ಯಗಳ ಮತಗಳ ಬೆಲೆಯನ್ನು ಬಹಳವಾಗಿ ಹೆಚ್ಚಿಸುತ್ತವೆ. ಇವುಗಳನ್ನು 'ತೂಗು ರಾಜ್ಯಗಳು' (Swing State) ಎಂದು ಕರೆಯಲಾಗುತ್ತದೆ. ಇವುಗಳು ಯಾವ ಕಡೆಗೆ ವಾಲುತ್ತವೆ, ಆ ಅಭ್ಯಥಿ ಗೆಲ್ಲುತ್ತಾನೆ. ಇಂತಹ 16 ರಾಜ್ಯಗಳಿವೆ. ಒಬಾಮಾ ಈ ರಾಜ್ಯಗಳ ಮೇಲೆ ವಿಶೇಷವಾಗಿ ನಿಗಾ ವಹಿಸಿದರು. ಈ 16 ರಾಜ್ಯಗಳಲ್ಲಿ 9 ಕ್ಕೂ ಹೆಚ್ಚನ್ನು ಒಬಾಮಾ ಗೆದ್ದರು. ಅಲ್ಲದೆ ಫ್ಲೋರಿಡಾ, ನ್ಯೂ ಮೆಕ್ಸಿಕೊ, ಕೊಲೆರಾಡೊ, ಒಹೈಯೊ ಮುಂತಾದ ರಿಪಬ್ಲಿಕನ್ ರಾಜ್ಯಗಳನ್ನು ಅವರಿಂದ ಕಿತ್ತು ಕೊಂಡರು.

ಶರತ್ ಚಂದ್ರ

ಒಬಾಮಾ ಗೆಲುವಿನ ಅರ್ಥ ಏನು ?

ಒಬಾಮಾ ಗೆಲುವಿನ ಕ್ರೆಡಿಟ್ ಮುಖ್ಯವಾಗಿ ಬುಶ್ ಮತ್ತು ಆತನ 8 ವರ್ಷದ ದುರಾಡಳಿತಕ್ಕೆ ಸಲ್ಲಬೇಕು! ಹೆಚ್ಚು ನಿರ್ದಿಷ್ಟವಾಗಿ ಆರ್ಥಿಕ ಕುಸಿತಕ್ಕೆ ಸಲ್ಲಬೇಕು. ಆರ್ಥಿಕ ಕುಸಿತ ಸಹ ಬುಶ್ ದುರಾಡಳಿತದ ನೇರ ಫಲ. ಒಬಾಮಾ ಈ ಅವಕಾಶವನ್ನು ಬಳಸಿ 'ಬದಲಾವಣೆ' ಯ ನಂಬಲರ್ಹ ಎಜೆಂಡಾ ದೇಶದ ಮುಂದಿಟ್ಟರು. ಬದಲಾವಣೆಗೆ ಹಾತೊರೆಯುತ್ತಿದ್ದ ಸಾಮಾನ್ಯ ಅಮೆರಿಕನ್ನರ ಆಸೆ ಮತ್ತು ನಿರೀಕ್ಷೆಗಳನ್ನು ಏರಿಸಿದರು. ರಾಜಕೀಯದಲ್ಲಿ ಆಸಕ್ತಿ, ತೊಡಗಿಸಿಕೊಳ್ಳುವಿಕೆ ಕೆರಳಿಸಿದರು. ಜನಾದೇಶ ಮುಖ್ಯವಾಗಿ ಬುಶ್ ಮತ್ತು ಆತನ ಗ್ಯಾಂಗ್ ನ ಬಲಪಂಥೀಯ ನೀತಿಗಳ ಸಂಪೂರ್ಣ ತಿರಸ್ಕಾರ ಮತ್ತು ಅಸಮ್ಮತಿ. ಒಬಾಮಾ ಆರ್ಥಿಕ ಕುಸಿತದ ಬಗ್ಗೆ ರ್‍ಯಾಡಿಕಲ್ ಕ್ರಮಗಳ (ಬುಶ್ ಗ್ಯಾಂಗ್‌ಗಿಂತ ಬಹಳ ಬೇರೆಯಾದ) ಪ್ರಸ್ತಾವ ಇಡಲಿಲ್ಲ. ಆದರೆ ಇಂತಹ ರ್‍ಯಾಡಿಕಲ್ ಕ್ರಮಗಳು ಒಬಾಮಾರಿಂದ ಸಾಧ್ಯ. ಅವರಿಂದ ಅದನ್ನು ಅವರು ನಿರೀಕ್ಷಿಸುತ್ತಾರೆ. ಮೆಕೇನ್‌ರಿಂದ ಇದು ಖಂಡಿತ ಸಾಧ್ಯವಿಲ್ಲ, ಎಂಬುದು ಮತದಾರನ ಆಶಯ. ಅಮೆರಿಕದ ರಾಜಕೀಯ ಬಹುಶಃ ಕ್ಲಿಂಟನ್ ನೀತಿಗಳಿಗಿಂತಲೂ ಹೆಚ್ಚು ಎಡ ನೀತಿಗಳತ್ತ ಹೋಗಬಹುದು.





ವರ್ಣ-ಜನಾಂಗೀಯ ದ್ವೇಷ, ಧಾರ್ಮಿಕತೆ, ಸಾಮಾಜಿಕ ಪ್ರತಿಗಾಮಿತನ (ಗರ್ಭಪಾತ-ವಿರೋಧ ಇತ್ಯಾದಿ), ವಲಸೆಗಾರರ ಭಯ? ಮುಂತಾದವನ್ನು ಬಳಸಿ ನಿಜವಾದ 'ಚುನಾವಣಾ ವಿಷಯ' ಗಳಿಂದ ಜನರ ಗಮನ ಬೇರೆಡೆಗೆ ತಿರುಗಿಸಬಹುದು ಎಂಬ ತಂತ್ರ ಯಾವಾಗಲೂ ಕೆಲಸ ಮಾಡುವುದಿಲ್ಲ. ಆರ್ಥಿಕ ಕುಸಿತ, ನಿರುದ್ಯೋಗ ಮುಂತಾದ ನಿಜವಾದ ಚುನಾವಣಾ ವಿಷಯಗಳು ತೀವ್ರವಾದಾಗ ಜನ ಇತರ ಕ್ಷುಲ್ಲಕ ವಿಷಯಗಳಿಂದ ಮುಖ ತಿರುಗಿಸುತ್ತಾರೆ. 'ಯಾವಾಗಲೂ ಎಲ್ಲರನ್ನೂ ಮೂರ್ಖರಾಗಿಸುವುದು ಆಗದ ಮಾತು' ಎಂಬುದು ಈ ಫಲಿತಾಂಶದ ಇನ್ನೊಂದು ಮುಖ್ಯ ವಿಶೇಷತೆ.

ಒಬಾಮಾ ಪ್ರಥಮ ಕರಿಯ ಅಧ್ಯಕ್ಷರಾಗಿದ್ದು ಚಾರಿತ್ರಿಕ. ಆದರೆ ಈ ಗೆಲುವಿನೊಂದಿಗೆ ವರ್ಣ-ಜನಾಂಗೀಯ ದ್ವೇಷ ಅಮೆರಿಕದ ರಾಜಕೀಯದಿಂದ ಮಾಯವಾಗಿದೆ. ಎಂಬುದು ಈ ಫಲಿತಾಂಶದ ಅರ್ಥ ಖಂಡಿತ ಅಲ್ಲ. ವರ್ಣ-ಜನಾಂಗ ರಾಜಕೀಯದಲ್ಲಿ ಒಂದು ಅಂಶವಾಗಿ ಮುಂದುವರೆಯುತ್ತವೆ. ಆದರೆ ಅದನ್ನು ಬಳಸಿ ಮಾತ್ರ ರಾಜಕೀಯ ಮಾಡುವುದು ಕಷ್ಟ. ಅದೇ ರೀತಿ ಕರಿಯರ ಸಮಸ್ಯೆಗಳು ಒಬಾಮಾ ಅಧ್ಯಕ್ಷರಾದ ಕೂಡಲೇ ಪರಿಹಾರವಾಗಿ ಬಿಡುತ್ತವೆ ಎಂದು ನಿರೀಕ್ಷಿಸುವುದು ತಪ್ಪು. ಕರಿಯರ ಸಮಸ್ಯೆಗಳಿಗೆ ಕಾರಣವಾದ ಸಾಮಾಜಿಕ-ಆರ್ಥಿಕ ಸಂರಚನೆಯ ಬದಲಾವಣೆ ಆಗದೆ ಇದು ಸಾಧ್ಯವಿಲ್ಲ. ಆದರೆ ಅಂತಹ ಬದಲಾವಣೆ ಮಾಡಲು ಒತ್ತಡ ಹೇರಲು ಅನುಕೂಲ ವಾತಾವರಣ ಮೂಡಿದೆ ಎನ್ನಬಹುದು.

ಒಬಾಮಾ ಅಂತರ್ರಾಷ್ಟ್ರೀಯವಾಗಿ ಇನ್ನೂ ಹೆಚ್ಚು ನಿರೀಕ್ಷೆ ಹುಟ್ಟಿಸಿದ್ದಾರೆ. ಆದರೆ ಒಬಾಮಾ ಜತೆ ಅಮೆರಿಕದ ಆಕ್ರಾಮಕತೆ 'ಏಕಮಾತ್ರ ಸೂಪರ್ ಪವರ್' ಸ್ವಭಾವ ನಿಂತು ಹೋಗುತ್ತದೆ. ಎಂದು ನಿರೀಕ್ಷಿಸುವಂತಿಲ್ಲ. ಬುಶ್ ಶೈಲಿಯ ವಿದೇಶ ನೀತಿ ಅಮೆರಿಕವನ್ನು ಜಗತ್ತಿನ ಅತ್ಯಂತ 'ದ್ವೇಷಿತ ದೇಶ' ಆಗಿಸಿತ್ತು. ವಿದೇಶಗಳಿಗೆ ಹೋಗುವ ಅಮೆರಿಕನ್ನರಿಗೆ ಹೆಚ್ಚು ಅಸುರಕ್ಷಿತತೆ ಅನುಭವ ಬರುತ್ತಿತ್ತು. ಬುಶ್ ಆರಂಭಿಸಿದ 'ಏಕ ಪಕ್ಷೀಯತೆ'ಗೆ ಸ್ವಲ್ಪವಾದರೂ ಕಡಿವಾಣ ಹಾಕಿ, ಅಮೆರಿಕನ್ನರು ವಿದೇಶಗಳಲ್ಲಿ ಹೆಚ್ಚು ಸುರಕ್ಷಿತರಾಗುವಂತೆ 'ಶೈಲಿ'ಯನ್ನಾದರೂ ಬದಲಾಯಿಸಬೇಕು. ನೀತಿಗಳ ಸಾರವಲ್ಲದಿದ್ದರೂ. ಎಂಬುದು ಮತದಾರನ ಆಶಯ. ಈ ನಿಟ್ಟಿನಲ್ಲಿ ಬದಲಾವಣೆ ನಿರೀಕ್ಷಿಸಬಹುದು. ಆರ್ಥಿಕ ಬಿಕ್ಕಟ್ಟು ಮತ್ತು ಅದರ ಪರಿಣಾಮವಾಗಿ, ಅಮೆರಿಕ ಅದರ ಅಧಿಪತ್ಯ ಕಳೆದುಕೊಂಡು ಹೆಚ್ಚು ಬಹು ಧ್ರುವೀಯ ಜಗತ್ತಿಗೆ ಹೊಂದಿಕೊಳ್ಳಬೇಕಾಗ ಬಹುದು. ಈ ಬದಲಾವಣೆಗೆ ಒಬಮಾ ಹೆಚ್ಚು ಸುಲಭವಾಗಿ ಒಗ್ಗಿಕೊಳ್ಳಬಹುದು.

'ಬಲಿಷ್ಟ ರಾಜ್ಯಗಳಿಂದಲೇ ಬಲಿಷ್ಟ ಕೇಂದ್ರ ಸಾಧ್ಯ'

ರಾಜ್ಯಗಳ ಬಲವರ್ಧನೆ, ಅಧಿಕಾರ ವಿಕೇಂದ್ರೀಕರಣದ ಮೂಲಕ ಮಾತ್ರವೇ ಬಲಿಷ್ಠ ಭಾರತ ರೂಪುಗೊಳ್ಳಲು ಸಾಧ್ಯ. ಈ ನಿಲುವಿನೊಂದಿಗೆ ಅಧಿಕಾರ ಕೇಂದ್ರ-ರಾಜ್ಯಗಳ ಸಂಬಂಧಗಳಲ್ಲಿನ ಬದಲಾವಣೆಗೆ ಸತತ ಹೋರಾಡುತ್ತಿರುವ ಸಿಪಿಐ(ಎಂ) ನಿಲುವಿನ ಕುರಿತು ಓದಿ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ರವರು ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆ ಕುರಿತಂತೆ ಒಂದು 'ನಿಲುವು ಪ್ರಬಂಧ'ವನ್ನು ನವಂಬರ್ 5ರಂದು ಬಿಡುಗಡೆ ಮಾಡಿದ್ದಾರೆ. ಇದನ್ನು ಅಕ್ಟೋಬರ್ 12ರಿಂದ 14ರವರೆಗೆ ಕೊಲ್ಕತಾದಲ್ಲಿ ನಡೆದ ಪಕ್ಷದ ಕೇಂದ್ರ ಸಮಿತಿ ಸಭೆಯಲ್ಲಿ ಅಂಗೀಕರಿಸಲಾಗಿತ್ತು. ಈ ಸಂಬಂಧದಲ್ಲಿ ಪಕ್ಷದ ಕಚೇರಿ ಎಕೆಜಿ ಭವನದಲ್ಲಿ ಏರ್ಪಡಿಸಿದ್ದ ಪತ್ರಿಕಾ ಸಮ್ಮೇಳನದಲ್ಲಿ ಪ್ರಕಾಶ್ ಕಾರಟ್ ಬಲಿಷ್ಟ ರಾಜ್ಯಗಳಿಂದಲೇ ಬಲಿಷ್ಟ ಕೇಂದ್ರ ಸಾಧ್ಯ, ಅದ್ದರಿಂದ ಕೇಂದ್ರ -ರಾಜ್ಯ ಸಂಬಂಧಗಳ ಪುನರ್ರಚನೆ ಕುರಿತು ಚರ್ಚೆ ನಡೆಯಬೇಕಾಗಿದೆ ಎಂದರು.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ಪ್ರಶ್ನೆಯನ್ನು ತಮ್ಮ ಒಂದು ಪ್ರಮುಖ ಅಜೆಂಡಾವಾಗಿ ಎತ್ತಿಕೊಳ್ಳುತ್ತವೆ ಹಾಗೂ ಇತರ ಎಲ್ಲಾ ಪಕ್ಷಗಳು ಕೂಡಾ ಎತ್ತಿಕೊಳ್ಳುತ್ತವೆ ಎಂದು ಕಾರಟ್ ಆಶಿಸಿದರು. ಈ ಹಿಂದೆ 1983ರಲ್ಲಿ ಡಿಎಂಕೆ ಕೇಂದ್ರ-ರಾಜ್ಯ ಸಂಬಂಧಗಳ ಕುರಿತು ಒಂದು ಆಯೋಗವನ್ನು ರಚಿಸಿದಾಗ ಎಲ್ಲಾ ಪಕ್ಷಗಳು ಒಟ್ಟುಗೂಡಿ ಶ್ರೀನಗರದಲ್ಲಿ ಒಂದು ಸಮ್ಮೇಳನ ನಡೆಸಿದ್ದನ್ನು ಅವರು ಈ ಸಂದರ್ಭದಲ್ಲಿ ನೆನಪಿಸಿದರು.

ಒಕ್ಕೂಟ ಸ್ವರೂಪವನ್ನು ಬಲಪಡಿಸಲು

ಈ ಮಹತ್ವದ ಪ್ರಶ್ನೆಯ ಮೇಲೆ ಚರ್ಚೆ ಆರಂಭಿಸುವ ಪ್ರಯತ್ನದ ಭಾಗವಾಗಿ ಈ ನಿಲುವು ಪ್ರಬಂಧವನ್ನು ಎಲ್ಲಾ ರಾಜಕೀಯ ಪಕ್ಷಗಳಿಗೆ ಮತ್ತು ಸಂಘಟನೆಗಳಿಗೆ ಕಳಿಸಲಾಗುವುದು, ಈ ಪುನರ್ರಚನೆಯನ್ನು ತರುವಲ್ಲಿ ಒಂದು ಸಮಾನ ನಿಲುವು ರೂಪಿಸಲು ಸಾಧ್ಯವೇ ಎಂದು ಪರಿಶೀಲಿಸಲಾಗುವುದು ಎಂದು ಕಾರಟ್ ಹೇಳಿದರು. ಈ ಪ್ರಬಂಧದ ಮೂಲಕ ಈ ಕುರಿತಂತೆ ಕಾನೂನಾತ್ಮಕ, ಆಡಳಿತಾತ್ಮಕ, ಹಣಕಾಸು, ಸಾಂಸ್ಥಿಕ ಮತ್ತು ಇತರ ವಿಷಯಗಳ ಮೇಲೆ ಸಿಪಿಐ(ಎಂ) ತನ್ನ ಬೇಡಿಕೆಗಳನ್ನು ಮುಂದಿಟ್ಟಿದೆ ಎಂದು ಅವರು ಹೇಳಿದರು.

ಹೆಚ್ಚಿನ ರಾಜ್ಯ ಸರಕಾರಗಳು, ಅವು ಯಾವುದೇ ಪಕ್ಷದ ನೇತೃತ್ವದಲ್ಲಿರಲಿ; ಇಂತಹ ಪುನರ್ರಚನೆಯ ಅಗತ್ಯವಿದೆ ಎಂದು ಹೇಳಿವೆ. ಮೊತ್ತಮೊದಲ ಬಾರಿಗೆ, ಎಲ್ಲಾ ರಾಜ್ಯ ಸರಕಾರಗಳು ಹಣಕಾಸು ಆಯೋಗದ ಮುಂದೆ ತಮ್ಮ ಬೇಡಿಕೆಗಳನ್ನು ಕುರಿತಂತೆ ಒಂದು ಸಾಮೂಹಿಕ ಮನವಿ ಪತ್ರವನ್ನು ಸಲ್ಲಿಸಿದ್ದನ್ನು ಅವರು ಉದಾಹರಿಸಿದರು. ಈಗ ಶಾಸನಾತ್ಮಕ, ಆಡಳಿತಾತ್ಮಕ ಮತ್ತು ಹಣಕಾಸು ಅಧಿಕಾರಗಳು ಕೇಂದ್ರ ಸರಕಾರದಲ್ಲಿಯೇ ಹೆಚ್ಚಾಗಿ ಕೇಂದ್ರೀಕೃತವಾಗಿರುವುದರಿಂದ, ಈ ಪರಿಸ್ಥಿತಿಯನ್ನು ಬದಲಿಸಲು ಎಲ್ಲಾ ಪಕ್ಷಗಳು ಒಟ್ಟು ಸೇರಬೇಕಾದ ಅಗತ್ಯವಿದೆ ಎಂದು ಅವರು ಅಭಿಪ್ರಾಯ ಪಟ್ಟರು. ರಾಜ್ಯಗಳಿಗೆ ಬಹಳಷ್ಟು ಜವಾಬ್ದಾರಿಗಳಿವೆ, ಆದರೆ ಸಾಕಷ್ಟು ಸಾಯತ್ತತೆ ಇಲ್ಲ. ಆಡಳಿತ ನಡೆಯುವುದು ರಾಜ್ಯ ಸರಕಾರಗಳ ಮೂಲಕವಾದ್ದರಿಂದ ಜನಗಳ ಆಕಾಂಕ್ಷೆಗಳನ್ನು ಈಡೇರಿಸಲು ಮತ್ತು ಭಾರತದ ಐಕ್ಯತೆಯನ್ನು ಕಾಯ್ದುಕೊಳ್ಳಲು ಒಕ್ಕೂಟ ಸ್ವರೂಪವನ್ನು ಬಲಪಡಿಸುವ ಅಗತ್ಯ ಇದೆ.

ಭಾರತದ ಸಂವಿಧಾನ ಹೊರಗಿನಿಂದ ಒಕ್ಕೂಟ ಸ್ವರೂಪ ಹೊಂದಿದ್ದರೂ, ಅದು ಏಕಘಟಕ ಸ್ವಭಾವದ್ದಾಗಿದೆ ಎಂಬ ಸಿಪಿಐ(ಎಂ)ನ ದೀರ್ಘಕಾಲದ ನಿಲುವನ್ನು ಪುನರುಚ್ಚರಿಸುತ್ತ ಕಾರಟ್ ರವರು ಅದರಲ್ಲಿ ಇರುವ ಅಂತರ-ರಾಜ್ಯ ಮಂಡಳಿ, ಯೋಜನಾ ಆಯೋಗ , ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಮುಂತಾದ ಒಕ್ಕೂಟ ಸ್ವರೂಪವನ್ನು ಬಲಪಡಿಸ ಬಹುದಾದ ಕೆಲವು ಅಂಶಗಳನ್ನು ಕೂಡ ಸರಿಯಾಗಿ ಬಳಸಲಾಗಿಲ್ಲ ಎಂದು ಖೇದ ವ್ಯಕ್ತಪಡಿಸಿದರು. ಸಿಪಿಐ(ಎಂ) ಯಾವುದೇ ಸೂಚನೆಗಳನ್ನು ಪರಿಶೀಲಿಸಲು, ತನ್ನ ಬೇಡಿಕೆಗಳಲ್ಲಿ ಬದಲಾವಣೆ ತರಲು ಸಿದ್ಧವಾಗಿದೆ, ಆದ್ದರಿಂದಲೇ ಅದನ್ನು 'ನಿಲುವು ಪ್ರಬಂಧ' ಎಂದು ಹೆಸರಿಸಲಾಗಿದೆ ಎಂದು ಅವರು ಹೇಳಿದರು.

ಸಿಪಿಐ(ಎಂ) ಬೇಡಿಕೆಗಳು

ಕೇಂದ್ರ-ರಾಜ್ಯ ಸಂಬಂಧಗಳನ್ನು ಕುರಿತಂತೆ ಸಿಪಿಐ(ಎಂ) ಈ ಪ್ರಬಂಧದ ಮೂಲಕ ಮುಂದಿಟ್ಟಿರುವ ಬೇಡಿಕೆಗಳು ಹೀಗಿವೆ:

ಕಾನೂನು ಮತ್ತು ಆಡಳಿತಾತ್ಮಕ ಪ್ರಶ್ನೆಗಳು

ಕಲಮು 355 ಮತ್ತು 356: ಸಂವಿಧಾನದ 355 ಮತ್ತು 356ನೇ ಕಲಮುಗಳ ದುರುಪಯೋಗವಾಗದಂತೆ ತಡೆಯಲು ಅವುಗಳನ್ನು ತಿದ್ದುಡುಗೊಳಿಸಿ ಕೆಲವು ರಕ್ಷಣಾತ್ಮಕ ಅಂಶಗಳನ್ನು ಒಳಗೊಳ್ಳಬೇಕು.

ರಾಜ್ಯಪಾಲರ ನೇಮಕ: ರಾಜ್ಯಪಾಲರ ನೇಮಕದಲ್ಲಿ ಕೇಂದ್ರ ಸರಕಾರ ಈಗ ಅನುಸರಿಸುತ್ತಿರುವ ವಿಧಾನವನ್ನು ಬದಲಿಸಬೇಕು. ಒಂದು ರಾಜ್ಯದ ಮುಖ್ಯ ಮಂತ್ರಿ ಸೂಚಿಸಿದ ಮೂವರು ಪ್ರತಿಷ್ಠಿತ ವ್ಯಕ್ತಿಗಳ ಪಟ್ಟಿಯಿಂದ ರಾಜ್ಯಪಾಲರನ್ನು ರಾಷ್ಟ್ರಪತಿಗಳು ನೇಮಿಸಬೇಕು.

ರಾಜ್ಯಗಳಿಗೆ ಶಾಸನಾತ್ಮಕ ಅಧಿಕಾರಗಳು: ಶಾಸನ ರಚಿಸುವ ಶೇಷ ಅಧಿಕಾರಗಳನ್ನು ರಾಜ್ಯ ಪಟ್ಟಿಯಲ್ಲಿ ಇಡಬೇಕು. ಸಮವರ್ತಿ ಪಟ್ಟಿಯಲ್ಲಿನ ಶಾಸನಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಮಾಲೋಚನೆ ನಡೆಯುವಂತೆ ಅದಕ್ಕೆ ಸಾಂಸ್ಥಿಕ ಸ್ವರೂಪ ಕೊಡಬೇಕು.

ಹಣಕಾಸು ಪ್ರಶ್ನೆಗಳು

ರಾಜ್ಯಗಳಿಗೆ ಕೇಂದ್ರೀಯ ತೆರಿಗೆಗಳ ಸೇರ್ಪಡೆ: ಕೇಂದ್ರ ಸರಕಾರದ ಒಟ್ಟು ತೆರಿಗೆ ಸಂಗ್ರಹದಲ್ಲಿ 50 ಶೇಕಡಾ ರಾಜ್ಯಗಳಿಗೆ ಸೇರುವಂತೆ ಮಾಡಬೇಕು.

ತೆರಿಗೆ ಹಾಕುವ ವಿಶೇಷ ಅಧಿಕಾರಗಳು: ಕೇಂದ್ರವು ಈಗ ತೆರಿಗೆ ಹಾಕುವ ಕೆಲವು ಸೇವೆಗಳೂ ಸೇರಿದಂತೆ ನಿರ್ದಿಷ್ಟ ಸೇವೆಗಳ ಮೇಲೆ ತೆರಿಗೆ ಹಾಕಲು ರಾಜ್ಯಗಳಿಗೆ ಅವಕಾಶವಿರಬೇಕು. ರಾಜ್ಯಗಳಿಗೆ ನ್ಯಾಯಯುತ ಪಾಲು ಸಿಗುವಂತೆ ಪ್ರಸ್ತಾವಿತ ಸರಕು ಮತ್ತು ಸೇವೆಗಳ ತೆರಿಗೆಗೆ ಒಂದು ಸೂಕ್ತ ಮಾದರಿಯನ್ನು ವಿಕಾಸಗೊಳಿಸಬೇಕು.

ರಾಜ್ಯಗಳ ಮಾರುಕಟ್ಟೆ ಸಾಲ: ಮಾರುಕಟ್ಟೆಯಿಂದ ಸಾಲ ತರುವುದಕ್ಕೆ ಸಂಬಂಧಿಸಿದಂತೆ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆಗೆ, ಅವಕಾಶ ಇರುವಂತೆ ಸಂವಿಧಾನದ 293ನೇ ಕಲಮನ್ನು ತಿದ್ದುಪಡಿ ಮಾಡಬೇಕು. ರಾಜ್ಯಗಳ ಸಾಲ ತರುವ ಪಾಲನ್ನು ಈಗಿರುವ 15ಶೇ. ದಿಂದ 50ಶೇ. ಕ್ಕೆ ಹೆಚ್ಚಿಸಬೇಕು.

ಸಾಲ ಪರಿಹಾರ ಮತ್ತು ಶರತ್ತುಗಳು: ಕೇಂದ್ರೀಯ ಸಾಲಗಳಿಂದ ರಾಜ್ಯಗಳಿಗೆ ಪರಿಹಾರದಲ್ಲಿ ಯಾವುದೇ ಶರತ್ತು ಹಾಕಬಾರದು. ಎಫ್‌ಆರ್‌ಬಿಎಂ ಕಾನೂನು ಪಾಸು ಮಾಡಬೇಕು ಎಂಬಿತ್ಯಾದಿ ಶರತ್ತುಗಳನ್ನು ಹಿಂತೆಗೆದುಕೊಳ್ಳಬೇಕು. ಸಾಲ ಪರಿಹಾರವನ್ನು, ವಿಶೇಷವಾಗಿ ಎನ್‌ಎಸ್‌ಎಸ್‌ಎಫ್ ಸಾಲಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ರಾಜ್ಯಗಳಿಗೆ ನಿರ್ದಿಷ್ಟ ರೀತಿಯಲ್ಲಿ ರೂಪಿಸಬೇಕು.

ಕೇಂದ್ರೀಯ ಪ್ರಾಯೋಜಿತ ಸ್ಕೀಮುಗಳು: ರಾಜ್ಯ ವಿಷಯದಲ್ಲಿ ಎಲ್ಲಾ ಕೇಂದ್ರೀಯ ಪ್ರಾಯೋಜಿತ ಸ್ಕೀಮುಗಳ ರೂಪೀಕರಣ ಮತ್ತು ಜಾರಿಯನ್ನು ಸಂಬಂಧಪಟ್ಟ ನಿಧಿಗಳೊಂದಿಗೆ ರಾಜ್ಯಗಳಿಗೆ ವರ್ಗಾಯಿಸಬೇಕು. ಇದಕ್ಕೆ ಸ್ಥೂಲ ಮಾರ್ಗದರ್ಶಿ ಸೂತ್ರಗಳನ್ನು ಮತ್ತು ಕನಿಷ್ಠ ಶರತ್ತುಗಳನ್ನು ಜತೆಗೆ ತಿಳಿಸಬೇಕು. ಜೆಎನ್‌ಎನ್‌ಯುಆರ್‌ಎಂ ನಂತಹ ಸ್ಕೀಮುಗಳಲ್ಲಿ ಸ್ಟಾಂಪ್ ಶುಲ್ಕಗಳನ್ನು ಕಡಿತ ಮಾಡಬೇಕು ಎಂಬಿತ್ಯಾದಿಯಾದ ಶರತ್ತುಗಳನ್ನು ಹಿಂದಕ್ಕೆ ಪಡೆಯಬೇಕು.

ಸ್ಥಳೀಯ ಸ್ವಯಮಾಡಳಿತಗಳಿಗೆ ವಿಕೇಂದ್ರೀಕರಣ: ಸ್ಥಳೀಯ ಸ್ವಯಮಾಡಳಿತ ಖರ್ಚುಗಳಿಗೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಒಂದು ಕನಿಷ್ಟ ಮಟ್ಟವನ್ನು ಗುರಿಯಾಗಿ ಇಡಬೇಕು. ಸ್ಥಳೀಯ ಸಂಸ್ಥೆಗಳಿಗೆ ವಿಕೇಂದ್ರೀಕರಿಸಿದ ನಿಧಿಗಳನ್ನು ರಾಜ್ಯ ಸರಕಾರಗಳ ಮೂಲಕವೇ ಕೊಡಬೇಕು.

ಸಾಂಸ್ಥಿಕ ಪ್ರಶ್ನೆಗಳು:

ಅಂತರ-ರಾಜ್ಯ ಮಂಡಳಿ: ಅಂತರ-ರಾಜ್ಯ ಮಂಡಳಿಯ ನಿರ್ಣಯಗಳಿಗೆ ಕೇಂದ್ರ ಸರಕಾರವನ್ನು ಬದ್ಧಗೊಳಿಸುವಂತೆ ಸಂವಿಧಾನ ತಿದ್ದುಪಡಿಯನ್ನು ತರಬೇಕು. ಕೇಂದ್ರ-ರಾಜ್ಯ ಸಂಬಂಧಗಳನ್ನು ಒಳಗೊಂಡ ಎಲ್ಲಾ ಪ್ರಮುಖ ಪ್ರಶ್ನೆಗಳನ್ನು ಅಂತರ-ರಾಜ್ಯ ಮಂಡಳಿಯಲ್ಲಿ ಚರ್ಚಿಸಬೇಕು ಮತ್ತು ನಿರ್ಧರಿಸಬೇಕು.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಮತ್ತು ಯೋಜನಾ ಆಯೋಗ: ರಾಷ್ಟ್ರೀಯ ಅಭಿವೃದ್ಧಿ ಮಂಡಳಿ(ಎನ್‌ಡಿಸಿ)ಗೆ ಸಾಂವಿಧಾನಿಕ ಸ್ಥಾನಮಾನ ಕೊಡಬೇಕು. ಯೋಜನಾ ಆಯೋಗ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಕಾರ್ಯಕಾರಿ ವಿಭಾಗವಾಗಿ ಕೆಲಸ ನಿರ್ವಹಿಸಬೇಕು.

ಹಣಕಾಸು ಆಯೋಗ: ಹಣಕಾಸು ಆಯೋಗದ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವಾಗ ರಾಜ್ಯಗಳ ಅಭಿಪ್ರಾಯಗಳನ್ನು ಗಮನಕ್ಕೆ ತಗೊಳ್ಳಬೇಕು. ಇದನ್ನು ಕುರಿತಂತೆ ಏನಾದರೂ ಭಿನ್ನಾಭಿಪ್ರಾಯವಿದ್ದರೆ ಅದನ್ನು ಅಂತರ-ರಾಜ್ಯ ಮಂಡಳಿಯಲ್ಲಿ ಇತ್ಯರ್ಥ ಮಾಡಬೇಕು. ಹಣಕಾಸು ಆಯೋಗದಲ್ಲಿ ರಾಜ್ಯಗಳಿಗೆ ಸಾಕಷ್ಟು ಪ್ರಾತಿನಿಧ್ಯವಿರಬೇಕು.

ವಿಶೇಷ ವಿಧದ ರಾಜ್ಯಗಳು: ಈ ರಾಜ್ಯಗಳಿಗೆ ಯೋಜನೇತರ ಅಂತರ ನಿಧಿ ಮತ್ತು ಸಾಮಾನ್ಯ ಕೇಂದ್ರೀಯ ನೆರವು ಇವುಗಳ ಪ್ರಕಾರ ಕೊಡುವ ಭಿನ್ನ ಸೌಲಭ್ಯಗಳನ್ನು ಮುಂದುವರೆಸಬೇಕು. ಈ ರಾಜ್ಯ ಸರಕಾರಗಳ ಸಾಲವನ್ನು ಒಂದು ಸಲದ ರೀತಿಯಲ್ಲಿ ಯಾವುದೇ ಶರತ್ತುಗಳಿಲ್ಲದೆ ಇತ್ಯರ್ಥ ಮಾಡಬೇಕು. ಈ ರಾಜ್ಯಗಳಿಗೆ ಕೇಂದ್ರೀಯ ಪ್ರಾಯೋಜಿತ ಸ್ಕೀಮುಗಳ ಅಡಿಯಲ್ಲಿ ನಿಧಿಗಳ ಬಿಡುಗಡೆಯನ್ನು ಸಮಯ ಬದ್ಧವಾಗಿ, ನಿಧಿ ಬಳಕೆಯ ಬಗ್ಗೆ ಕಠಿಣ ಶರತ್ತುಗಳಿಲ್ಲದೆ ಮಾಡಬೇಕು.

ಹಲೋ ದೇಶಭಕ್ತರು?

ಹಲ್ಲೋ ದೇಶಭಕ್ತರು ವಂದನೆಯು ನಿಮಗೆ
ಶಾಸಕರ ಮಾರ್ಕೆಟ್ ಹೇಗುಂಟು ಕೊನೆಗೆ?
ತೆಜಿಯೋ ಮಂದಿಯೋ ಮಾಡದೆ ಲೋಭ
ಖರೀದಿಸಿ ಮುಂದುಂಟು ದುಪ್ಪಟ್ಟು ಲಾಭ

ಕೇಸರೀಕರಣ

ಆಗಲಿದೆ ಶಿಕ್ಷಣವು ಕೇಸರೀಕರಣ
ವಿಜೃಂಭಿಸಲಿದೆ ಶ್ರೀಪ್ರ ಇಲ್ಲಿ ಪುರಾಣ
ವೈಜ್ಞಾನಿಕ ವೈಚಾರಿಕತೆಗಳ ಜಾಗ
ತುಂಬಲಿವೆ ಪುರಾಣ ಜ್ಯೋತಿಷ್ಯ ಬೇಗ

ಮಾದರೀ ಶಿಕ್ಷಣ

ಇಲ್ಲದುದ ಇದೆಯೆಂದು ಬೋಧಿಸಲು ಇನ್ನು
ತೆರೆಯುವವರು ಅಲ್ಲಲ್ಲಿ ಹೊಸ ಶಾಲೆಯನ್ನು
ಆಧಾರವಿಲ್ಲದುದ ಆಧಾರ ಸಹಿತ
ಬೋಧಿಸುವ ಕಾರ್ಯಗಳು ನಡೆಯಲಿವೆ ತ್ವರಿತ

ಒಂದು ಜಾಹಿರಾತು

ಕೆಲವರಿಗೆ ನೌಕರಿಯ ಕೊಡಿಸಲಿಕೆ ಈಗ
ಅರ್ಜಿಯನು ಕರೆದಿಹೆವು ಖಾಲಿಯಿವೆ ಜಾಗ
ನಾವು ಹೇಳಿದ ಹಾಗೆ ನೀವೆಲ್ಲ ದಿವಸ
ಇತಿಹಾಸ ತಿರುಚುವುದು ಆ ನಿಮ್ಮ ಕೆಲಸ

ವಿಡಂಬಾರಿ

ಶ್ರೀನಿವಾಸ ಕಕ್ಕಿಲ್ಲಾಯ ಜನಪರ ಕಾಳಜಿಯ ವೈದ್ಯ. ಒಂದು ಆರೋಗ್ಯವಂತ ಸಮಾಜಕ್ಕಾಗಿ ದುಡಿಯುತ್ತಿರುವವರು. ಕಕ್ಕಿಲ್ಲಾಯರಿಗೆ ಆರೋಗ್ಯ ಎನ್ನುವುದು ದೇಹಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಅದು ಸಮಾಜದ ಮಾನಸಿಕ ಆರೋಗ್ಯ ಕೂಡಾ. ಹಾಗಾಗಿಯೇ ಸಾಕಷ್ಟು ಚಳವಳಿಗಳನ್ನು ಕಟ್ಟಿದ್ದಾರೆ.

ಕಕ್ಕಿಲ್ಲಾಯ ಕುಟುಂಬಕ್ಕೆ ಹೋರಾಟ ಉಸಿರಿನಷ್ಟೇ ಸಹಜವಾದದ್ದು. ಬಿ ವಿ ಕಕ್ಕಿಲ್ಲಾಯ ಯಾರಿಗೆ ಗೊತ್ತಿಲ್ಲ. ಅವರ ಮಗ ಶ್ರೀನಿವಾಸ ಕಕ್ಕಿಲ್ಲಾಯ ವೈದ್ಯಕೀಯ ರಂಗದ ಆರೋಗ್ಯಕ್ಕೂ ದುಡಿಯುತ್ತಿದ್ದಾರೆ.

ಗೋ ಸಮ್ಮೇಳನದ ಹಿನ್ನೆಲೆಯಲ್ಲಿ ಗೋವುಗಳನ್ನು ವೈದ್ಯಕೀಯ ದೃಷ್ಟಿಯಿಂದ ಅಧ್ಯಯನ ಮಾಡುತ್ತಾ ಬಂದಿದ್ದಾರೆ. ಇಲ್ಲಿದೆ ಅವರ ಒಂದು ಲೇಖನ. ಚರ್ಚೆಗೆ ಸ್ವಾಗತ -

ಗೋಮಯ, ಗೋಮೂತ್ರ ಔಷಧಗಳೋ, ಅಪಮಾನವೋ?

ಶ್ರೀನಿವಾಸ ಕಕ್ಕಿಲಾಯ

ಮನುಷ್ಯ ಕೃಷಿಕಾರ್ಯಗಳಲ್ಲಿ ತೊಡಗಿದಾಗ ತನಗೆ ನೆರವಾಗಲೆಂದು ಆಕಳನ್ನು ಸಾಕಲಾರಂಭಿಸಿದ.ಇಂದು ಕೃಷಿಕೆಲಸಗಳು ಸಾಕಷ್ಟು ಯಾಂತ್ರೀಕೃತಗೊಂಡಿರುವುದರಿಂದ ಸಾಕಲ್ಪಟ್ಟ ಮೂಲ ಉದ್ದೇಶಕ್ಕೆ ಈ ಪ್ರಾಣಿಗಳು ಕ್ರಮೇಣ ಅಪ್ರಸ್ತುತವೆನಿಸುತ್ತಾ ಹೋಗುತ್ತಿವೆಯಾದರೂ ಕೃಷಿಪ್ರಧಾನವಾದ ನಮ್ಮ ಸಮಾಜದಲ್ಲಿ ಅವುಗಳಿಗಿದ್ದ



ಪ್ರಾಮುಖ್ಯತೆಯನ್ನು ಇನ್ನಷ್ಟು ಎತ್ತರಕ್ಕೇರಿಸಿ, 'ಎರಡನೇ ತಾಯಿ', 'ವಿಶ್ವದ ಮಾತೆ' ಎಂಬಿತ್ಯಾದಿಯಾಗಿ ಬಿಂಬಿಸುವ ಪ್ರಯತ್ನಗಳೀಗ ವ್ಯವಸ್ಥಿತವಾಗಿ ನಡೆಯುತ್ತಿವೆ. 'ಗೋ ಮಾತೆಯ' ರಕ್ಷಣೆಗಾಗಿ ನಡೆಯುತ್ತಿರುವ 'ಹೋರಾಟಗಳು', ದನದ ಗೌರವ ರಕ್ಷಣೆಗಾಗಿ ನಡೆದ ದಲಿತರ ಕೊಲೆಗಳು ಮತ್ತು ಹಲವಾರು ದೊಂಬಿಗಳನ್ನು ನೋಡಿದಾಗ, ನಮ್ಮ ದೇಶದಲ್ಲಿ ಮನುಷ್ಯನ ಜೀವಕ್ಕಿಂತ ಸತ್ತಿರುವ ದನದ ಸ್ಥಾನಮಾನವೇ ಹೆಚ್ಚೆಂದು ಅನಿಸದಿರಲಾರದು. ಹೀಗಿರುವಾಗ, ದನಗಳು ಸ್ರವಿಸುವ ಹಾಲು ಮತ್ತು ವಿಸರ್ಜಿಸುವ ಮಲ-ಮೂತ್ರಗಳನ್ನು ಬಳಸಿ ಹಲವು 'ಉತ್ಪನ್ನಗಳನ್ನು' ತಯಾರಿಸಿ ಮಾರಾಟ ಮಾಡುವುದಕ್ಕೂ, ಈ 'ಉತ್ಪನ್ನಗಳು' ಹೈನುಗಾರಿಕೆಗಿಂತಲೂ ಹೆಚ್ಚಿನ ಲಾಭವನ್ನು ತರಬಹುದೆಂದು ಪ್ರಚಾರ ಮಾಡುವುದಕ್ಕೂ ದನಗಳ ಮೇಲಿನ ವಿಶೇಷವಾದ ಮಮತೆ ಹಾಗೂ ಭಕ್ತಿಗಳಷ್ಟೇ ಕಾರಣವೇ ಅಥವಾ ಇದರ ಹಿಂದೆ ಬೇರೇನಾದರೂ ಉದ್ದೇಶವಿದೆಯೇ ಎಂಬ ಪ್ರಶ್ನೆಗಳೇಳುತ್ತವೆ.

'ಗೋ ಉತ್ಪನ್ನಗಳು':

ದನದ ಹಾಲು ಹಾಗೂ ಮಲ-ಮೂತ್ರಗಳಿಂದ ತಯಾರಿಸಲಾದ 'ಉತ್ಪನ್ನಗಳ' ಪಟ್ಟಿಯು ಸಾಕಷ್ಟು ದೊಡ್ಡದಿದೆ. ಇವುಗಳ ಪೈಕಿ, ಪಂಚಗವ್ಯ ಹಾಗೂ ಗೋ ಅರ್ಕಗಳ ಬಗ್ಗೆ ಹೆಚ್ಚಾಗಿ ಹೇಳಲಾಗಿದೆ.

ಗೋವಿನ ಐದು ಉತ್ಪನ್ನಗಳ - ಸೆಗಣಿ, ಮೂತ್ರ, ಹಾಲು, ಮೊಸರು ಮತ್ತು ತುಪ್ಪ - ಮಿಶ್ರಣವೇ ಪಂಚಗವ್ಯ. ಗೋಮೂತ್ರವನ್ನು ಹುಳಿಬರಿಸಿ ತಯಾರಿಸಿದ ಗೋ ಮೂತ್ರಾಸವ, ಭಟ್ಟಿ ಇಳಿಸಿ ತಯಾರಿಸಿದ ಗೋ ಅರ್ಕ ಮತ್ತು ಗನವತಿ ಮಾತ್ರೆಗಳನ್ನೂ ಔಷಧಗಳಾಗಿ ಬಳಸಬಹುದಂತೆ. ಗೋ ಅರ್ಕಕ್ಕೆ ಅಮೆರಿಕದ ಎರಡು ಪೇಟೆಂಟ್ ಗಳನ್ನೂ ಪಡೆಯಲಾಗಿದ್ದು, ಈ ವಿಚಾರವನ್ನು ಬಹು ದೊಡ್ಡ ಸಾಧನೆಯೆಂಬಂತೆ ತೋರಿಸಲಾಗುತ್ತಿದೆ.

ವಿವಿಧ ಗೋ ಉತ್ಪನ್ನಗಳು ಜ್ವರದಿಂದ ಹಿಡಿದು ಕ್ಯಾನ್ಸರ್ ವರೆಗೆ ನೂರಾರು ರೋಗಗಳನ್ನು ವಾಸಿ ಮಾಡಬಹುದೆಂದು ಹೇಳಲಾಗುತ್ತಿದೆ. ಕುಟುಂಬದಲ್ಲಿ ಜನನ ಮರಣಗಳಾದಾಗ 'ಮೈಶುದ್ಧಿ' ಮಾಡಿಸಿಕೊಳ್ಳಲು ಬಳಸಲಾಗುವ ಪಂಚಗವ್ಯವನ್ನು ಹಲವು ರೋಗಗಳ ಚಿಕಿತ್ಸೆಯಲ್ಲಿಯೂ, ಗಿಡಗಳಲ್ಲಿ ಕೀಟನಾಶಕವಾಗಿಯೂ, ಮಣ್ಣಿನ ಸಾರವನ್ನು ಹೆಚ್ಚಿಸುವುದಕ್ಕೂ ಬಳಸಬಹುದೆಂದು ಹೇಳಲಾಗುತ್ತಿದೆ. (ಇಷ್ಟೊಂದು ವೈವಿಧ್ಯಮಯವಾದ ಉಪಯೋಗಗಳುಳ್ಳ ವಸ್ತು ಬಹುಶಃ ಇನ್ನೊಂದಿರಲಾರದು!) ಇತ್ತೀಚೆಗೆ, ಚಿಕುಂಗುನ್ಯಾ ರೋಗದ ಚಿಕಿತ್ಸೆಯಲ್ಲೂ ಪಂಚಗವ್ಯವು ಪರಿಣಾಮಕಾರಿಯಾಗಿದೆಯೆಂದು ಘೋಷಿಸಿ ಅದನ್ನು ವಿತರಿಸುವ ಶಿಬಿರಗಳನ್ನೂ ಕೆಲವೆಡೆಗಳಲ್ಲಿ ನಡೆಸಲಾಯಿತು. ಕೇಶತೈಲ, ಶಾಂಪೂ, ಚರ್ಮದ ಮುಲಾಮುಗಳು ಇತ್ಯಾದಿಗಳಲ್ಲೂ ಗೋಮೂತ್ರವನ್ನು ಬಳಸಬಹುದಂತೆ.

ಸಾಬೂನು, ಮೂಗಿಗೆ ಏರಿಸುವ ಪುಡಿ, ಮೈಗೆ ಹಾಕುವ ಪುಡಿ, ಮುಲಾಮು, ಅಗರಬತ್ತಿ, ಹಲ್ಲಿನ ಪುಡಿ ಇತ್ಯಾದಿಗಳನ್ನು ದನದ ಸೆಗಣಿಯಿಂದ ತಯಾರಿಸಬಹುದೆಂದೂ, ಇವಕ್ಕೆ ಔಷಧೀಯ ಗುಣಗಳಿವೆಯೆಂದೂ ಹೇಳಲಾಗುತ್ತಿದೆ.

ಯಾವ್ಯಾವುದೋ ದನಗಳ ಮಲ ಮೂತ್ರಗಳನ್ನು ಬಳಸಿದರೇನೂ ಪ್ರಯೋಜನವಾಗದಂತೆ! ಭಾರತೀಯ ಶುದ್ಧ ಗೋತಳಿಗಳ ಉತ್ಪನ್ನಗಳ 'ರೋಗ ಪ್ರತಿರೋಧ ಶಕ್ತಿಯು' ಶೇ. 90ರಿಂದ 98ರಷ್ಟಿದ್ದರೆ, ಮಿಶ್ರ ತಳಿಗಳ ಶಕ್ತಿಯು ಶೇ. 40ಕ್ಕೂ ಕಡಿಮೆಯಿದೆಯೆಂದು 'ಗುರುತಿಸಿದ' ಸಂಶೋಧನೆಗಳೂ ನಡೆದಿವೆ.

ಆಧಾರಗಳೇನು?

ಪಂಚಗವ್ಯದ ಬಗ್ಗೆ ಇನ್ನಷ್ಟು ತಿಳಿಯುವ ಕುತೂಹಲದಿಂದ ಆಯುರ್ವೇದದ ವೈದ್ಯರೊಬ್ಬರಲ್ಲಿ ಆ ಬಗ್ಗೆ ವಿಚಾರಿಸಿದೆ. ಗೋ ಮಯ, ಗೋ ಮೂತ್ರ ಹಾಗೂ ಪಂಚಗವ್ಯಗಳ ಸತ್ಪಯೋಜನಗಳ ಬಗ್ಗೆ ಚರಕ ಸಂಹಿತೆಯನ್ನುದ್ಧರಿಸಿ ಅವರು ನನಗೆ ವಿವರಿಸಿದರು. ಆದರೆ ಇಪ್ಪತ್ತೊಂದನೇ ಶತಮಾನದಲ್ಲಿರುವ ನಾವು ಆದಿ ಕಾಲದ ಅಂತಹಾ ಬರಹಗಳ ಆಧಾರದಲ್ಲಿ ದನದ ಮಲ-ಮೂತ್ರಗಳನ್ನು ಸೇವಿಸಬೇಕೆ ಎಂದು ಕೇಳಿದೆ. ಚರಕನ ಕಾಲದಲ್ಲೇ ಈ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿವೆ ಎಂದರವರು. ಆದರೆ ಜೈವಿಕ ಸಂಯುಕ್ತಗಳ ಬಗೆಗಾಗಲೀ (ಅವುಗಳನ್ನು ಅಳೆಯುವ ಪರೀಕ್ಷೆಗಳಾಗಲೀ), ಸೂಕ್ಷ್ಮಾಣು ಜೀವಿಗಳ ಬಗೆಗಾಗಲೀ (ಅವುಗಳನ್ನು ಬೆಳೆಸಿ ಪ್ರತ್ಯೇಕಿಸುವ ವಿಧಾನಗಳಾಗಲೀ) ಆಗ ತಿಳಿದಿರಲಿಲ್ಲವಲ್ಲ? ಆದರೇನಂತೆ, ದನದ ಮೂತ್ರವೇನೂ ಬದಲಾಗಿಲ್ಲವಲ್ಲ ಎಂದು ಥಟ್ಟನೇ ಉತ್ತರ ಬಂತು. ನಾನು ದಂಗಾದೆ!

ಗೋವುಗಳು ವಿಸರ್ಜಿಸುವ ಕಲ್ಮಶಗಳ ಸತ್ಪಯೋಜನಗಳ ಬಗ್ಗೆ ಬರೆದಿರುವ ಹೆಚ್ಚಿನ ಲೇಖನಗಳಲ್ಲಿ ಆದಿಕಾಲದ ಬರಹಗಳನ್ನು, ಚರಕ ಸಂಹಿತೆಯನ್ನೂ ಬಹಳಷ್ಟು ಸಲ ಉದ್ಧರಿಸಲಾಗಿದ್ದು, ಕೆಲವೊಂದು ವಾದಗಳು ಇಂತಿವೆ:

ಗೋವು ನಮ್ಮ ಮಾತೆ, ನಾವು ಅದರ ಮಕ್ಕಳು; ಆದ್ದರಿಂದ ಗೋಮೂತ್ರವು ಪ್ರಯೋಜನಕರ.

ಪಿತ್ತ, ಕಫ ಮತ್ತು ವಾಯುಗಳ ಅಸಮತೋಲನದಿಂದಲೇ ಕಾಯಿಲೆಗಳು ಉಂಟಾಗುವುದಿದ್ದು, ಗೋಮೂತ್ರವು ಇವುಗಳ ನಡುವೆ ಸಮತೋಲನವನ್ನು ಸಾಧಿಸುತ್ತದೆ.

ಮೂತ್ರಗಳಲ್ಲೆಲ್ಲ ಗೋಮೂತ್ರವೇ ಶ್ರೇಷ್ಠವಾದುದು.

ಗೋಮೂತ್ರದಲ್ಲಿ ಗಂಗಾಜಲವಿದೆ, ಅಮೃತವೆನಿಸುವ ತಾಮ್ರ ಹಾಗೂ ಚಿನ್ನದ ಧಾತುಗಳಿವೆ. ಗೋಮೂತ್ರವು ಕ್ಷಯಿಸುವುದಿಲ್ಲ, ಅದು ಹಳೆಯದಾದಂತೆ ಇನ್ನಷ್ಟು ಪರಿಣಾಮಕಾರಿಯಾಗುತ್ತದೆ.

ಗೋಮೂತ್ರದ ಬಗ್ಗೆ ಪಡೆಯಲಾಗಿರುವ ಪೇಟೆಂಟ್ ಗಳು ಇತ್ತೀಚೆಗೆ ಬಹಳಷ್ಟು ಸುದ್ದಿಯಲ್ಲಿವೆ. ಜೀವನಿರೋಧಕ ಔಷಧಗಳು ಹಾಗೂ ಕ್ಯಾನ್ಸರ್ ನಿರೋಧಕ ಔಷಧಗಳ ಪರಿಣಾಮಗಳನ್ನು ಗೋ ಅರ್ಕವು ಹೆಚ್ಚಿಸುತ್ತದೆಯೆಂದು ಪ್ರಯೋಗಗಳು ತೋರಿಸಿವೆಯೆಂಬ ಆಧಾರದಲ್ಲಿ ಪೇಟೆಂಟ್ ಪಡೆದಿರುವುದು ಒಂದೆಡೆಯಾದರೆ, ಗೋಮೂತ್ರ ಚಿಕಿತ್ಸೆಗಾಗಿಯೇ ಇನ್ನೊಂದು ಪೇಟೆಂಟ್ ಪಡೆಯಲಾಗಿದೆ. ಗೋ ಮೂತ್ರ ಚಿಕಿತ್ಸೆಯ ಬಗ್ಗೆ ಮ್ಯಾನ್ಮಾರ್‌ನಿಂದಲೂ, ಅಪಸ್ಮಾರ ಚಿಕಿತ್ಸೆಯಲ್ಲಿ ಗೋಮೂತ್ರದ ಕಷಾಯದ ಬಳಕೆಯ ಬಗ್ಗೆ ನೈಜೀರಿಯದಿಂದಲೂ ವರದಿಗಳಿವೆ. ಗೌಟ್ ಸಂಧಿವಾತ, ಬಿಳಿರಕ್ತಕಣಗಳ ಕಾರ್ಯ, ಯಕೃತ್ತಿನ ಜೀವಕೋಶಗಳ ಮೇಲೆ ಕಾರ್ಬನ್ ಟೆಟ್ರಾಕ್ಲೋರೈಡ್ ನ ಪರಿಣಾಮ ಇತ್ಯಾದಿಗಳಲ್ಲಿ ಗೋ ಅರ್ಕದ ಪ್ರಯೋಜನಗಳ ಬಗ್ಗೆ ಪ್ರಾಣಿಗಳ ಮೇಲೆ ಸಣ್ಣ ಪ್ರಮಾಣದ ಪ್ರಯೋಗಗಳು ನಡೆದಿವೆ.?19-22? ಇಂತಹಾ ವರದಿಗಳನ್ನು ಉತ್ಪ್ರೇಕ್ಷಿಸಿ, ಮನುಕುಲವನ್ನು ಕಾಡುತ್ತಿರುವ ಸುಮಾರು ಎಲ್ಲಾ ಕಾಯಿಲೆಗಳಿಗೂ ಗೋಮೂತ್ರವೇ ಅತ್ಯಂತ ಪರಿಣಾಮಕಾರಿಯಾದ,



ಸೂಫಿ ಸಂತರ ತಾಣಗಳು !

ಚನ್ನೂರು ಜಲಾಲ್ ಸಾಬ್ 'ಸಮನ್ವಯ ಸಂಸತಿ'ಯನ್ನು ಪ್ರತಿನಿಧಿಸುವ ಒಬ್ಬ ಸೂಫಿ ಸಂತ. ಅವರ ಸ್ವಾರಸ್ಯಕರ ಬದುಕಿನ ಸಂದೇಶದ ಕುರಿತು ಒಂದು ವಿವರ ಇಲ್ಲಿದೆ.

ಡಾ. ಮೀನಾಕ್ಷಿ ಬಾಳಿ

ಕಾಮಿಸಲೇನಿದು ಕೆಂವಸ್ಯೆಯಾ
ನಿಜ ಭಾವಿಸಿಕೊ ಇದು ಭಂವಸ್ಯೆಯೋ
ಜಾನಿಸಿ ತಿಳಿ ಮನ ದಿನಸಯ್ಯೋ
ಜಗ ಹುಟ್ಟುದು ಸಾವುದು ಹೀಂಗಸಯೋ :ಪ:

ಇದು ಚನ್ನೂರ ಜಲಾಲ ಸಾಹೇಬನೆಂಬ ಸೂಫಿಸಂತ ರಚನೆ ಮಾಡಿದ ತತ್ವ ಪದವೊಂದರ ಪಲ್ಲವಿಯಾಗಿದೆ. ಜಲಾಲಸಾಹೇಬ ಕನ್ನಡ ಸೂಫಿ ಪರಂಪರೆಯ ಉತ್ಕೃಷ್ಟ ಮಾದರಿಯಾಗಿದ್ದಾನೆ. ಕ್ರಿ.ಶ.14ನೇ ಶತಮಾನದಲ್ಲಿ ಹಸನಗಂಗೂ ಬಹುಮನಿಯ ಆಳ್ವಿಕೆಯ ಅವಧಿಯಲ್ಲಿ ಅರಬಸ್ತಾನದಿಂದ ಬಂದ ಗೇಸುದರಾಜ್ ಖ್ವಾಜಾ ಬಂದೇ ನವಾಜ್‌ರು ಹೈದ್ರಾಬಾದ್ ಕರ್ನಾಟಕದಿಂದ ಸೂಫಿ ಪರಂಪರೆಗೆ ನಾಂದಿ ಹಾಡಿದರು. ದಕ್ಷಿಣ ಭಾರತದಲ್ಲಿ ಬಂದೇ ನವಾಜ್‌ರಿಂದ ಪ್ರಾರಂಭವಾದ ಈ ಸಮನ್ವಯ ಸಂಸ್ಕೃತಿಯು ಇವತ್ತಿನವರೆಗೂ ಅವಿಚ್ಛಿನ್ನವಾಗಿ ಮುಂದುವರೆದುಕೊಂಡು ಬರುತ್ತಿದೆ. ಕ್ರಿ.ಶ.15 ರಿಂದ 18ನೇ ಶತಮಾನಗಳ ಅವಧಿಯಲ್ಲಿ ಗುಲಬರ್ಗಾ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಭಾವೈಕ್ಯತೆ, ಕೋಮು ಸಾಮರಸ್ಯವನ್ನು ನಿಬಾಯಿಸಿಕೊಂಡು ಬಂದ ದೊಡ್ಡ ಚರಿತ್ರೆ ಇದೆ.

ಸಮೀಕರಣ:

ಚನ್ನೂರು ಜಲಾಲ ಸಾಹೇಬರು ಈ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವ ಬಹುದೊಡ್ಡ ಉಪಲಬ್ದಿಯಾಗಿದ್ದಾರೆ. ಕ್ರಿ.ಶ. 1820 ರಿಂದ 1850 ಅಸುಪಾಸಿನಲ್ಲಿ ಬದುಕಿದ್ದ ಇವರು ಕೂಡಲೂರು ಬಸವಲಿಂಗಪ್ಪ ಎಂಬ ತತ್ವಪದಕಾರರ ಶಿಷ್ಯರಾಗಿದ್ದರು. ತಮ್ಮ ಸಮಕಾಲೀನ ಸಂದರ್ಭದಲ್ಲಿ ಬದುಕಿದ್ದ ಕಡಕೋಳ ಮಡಿವಾಳಪ್ಪ, ಬೈನೂರು ಕೃಷ್ಣಪ್ಪ, ತೇಲಗಬಾಳ ರೇವಪ್ಪ ಮುಂತಾದ ಶರಣ, ಅವಧೂತರ ಗರಡಿ ಮನೆಯಲ್ಲಿ ಬೆಳೆದಿದ್ದರು.

ಇವರು ಹುಟ್ಟಿದ್ದು ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಅಣಕಸೂಗೂರಿನಲ್ಲಿ. ನೆಲೆ ನಿಂತದ್ದು ಜೇವರ್ಗಿ ತಾಲ್ಲೂಕಿನ ಚನ್ನೂರಿನಲ್ಲಿ . ಕಾವ್ಯ ಕೃಷಿ ಮತ್ತು ಆಧ್ಯಾತ್ಮ ಸಾಧನೆಗೈದದ್ದು ಜೇವರ್ಗಿ ತಾಲ್ಲೂಕಿನ ಕಡಕೋಳದಲ್ಲಿ. ನಾಲವಾರದ ಕೋರಿಸಿದ್ದನ ಮಠದಲ್ಲಿ ಗಾಂವಠಿ ಶಾಲೆಯಲ್ಲಿ ಉರ್ದು ಕಲಿತರು. ಇವರ ತಂದೆ ನಬಿಸಾಬರು ಆಚಾರವಂತ ಮಹ್ಮದೀಯರೂ, ಸೂಗೂರಿನ ಮೌಲ್ವಿಗಳಾಗಿದ್ದರು. ಹೀಗೆಂದೇ ಇವರು ಮಸೀದಿಯಲ್ಲಿ ಖುರ್‌ಆನ್ ಪಠಿಸಿದಷ್ಟೇ ಪ್ರೀತಿಯಿಂದ ವೀರಶೈವ ಮಠಗಳಲ್ಲಿ ವಚನ ಪುರಾಣಗಳ ಅಧ್ಯಯನ ಮಾಡಿದರು.

ಆದ್ದರಿಂದಲೇ ಇವರು ಖುರ್‌ಆನ್‌ದ ತತ್ವಗಳೊಂದಿಗೆ ಶರಣರ ವಚನಗಳನ್ನು ಸಮೀಕರಿಸಿ ತತ್ವಪದ ರಚಿಸಿದರು. ಇಸ್ಲಾಂ ಮತ್ತು ವೀರಶೈವ ಫಿಲಾಸಫಿಗಳ ಸಂಗಮದಂತಿರುವ ಇವರ ತತ್ವಪದಗಳಲ್ಲಿ ಜೀವನ್ಮುಖಿ ಚಿಂತನೆ ತಾನೇ ತಾನಾಗಿ ವಿಜೃಂಭಿಸುತ್ತಿದೆ. ತಮ್ಮ ಜೀವಿತದ ಅವಧಿಯಲ್ಲಿ ಚನ್ನೂರಿನಲ್ಲಿ 'ಬಸವಪುರಾಣ' ಹೇಳಲು ಅಡ್ಡಿಪಡಿಸಿದರಂತೆ. ಜಲಾಲ ಸಾಹೇಬರು ಧರ್ಮದ್ರೋಹಿಗಳೆಂಬ ಫಿರ್ಯಾದು ಹೈದ್ರಾಬಾದ್ ನಿಜಾಮನ ಕಿವಿಯವರೆಗೂ ತಲುಪಿತು. ನಿಜಾಮ ಇವರನ್ನು ಬಂಧನದಲ್ಲಿಟ್ಟನಂತೆ. ಜ್ಞಾನದ ಸರ್ವೋನ್ನತ ಮಟ್ಟಕ್ಕೇರಿದ ಇವರು ವಿಚಲಿತರಾಗದೆ ತನ್ನ ಸತ್ಯ ಶುದ್ಧ ಸಮನ್ವಯ ನುಡಿಯಿಂದಾಗಿ ನಿಜಾಮನ ಮನಸ್ಸು ಗೆದ್ದರು. ಅಲ್ಲಾಹುವಿನ ನಿರಾಕಾರ ಮತ್ತು ಲಿಂಗಾಂಗ ಸಾಮರಸ್ಯದ ಬಯಲಸ್ಥಿತಿ ಎರಡನ್ನು ತೌಲನಿಕವಾಗಿ ವಿವರಿಸಿ ನಿಜಾಮನ ಮೆಚ್ಚುಗೆಗೆ ಪಾತ್ರರಾದರು. ಇವರ ವಿಲಕ್ಷಣ ತೀಕ್ಷ್ಣಮತಿ ಮತ್ತು ನಿಸ್ಪೃಹ ವ್ಯಕ್ತಿತ್ವ ಕಂಡು ಬೆರಗಾದ ನಿಜಾಮನು ಶರಣಾಗತನಾಗಿ ಬಿರುದು, ಬಾವಲಿ ಕೊಟ್ಟು ಸತ್ಕರಿಸಿದ್ದನ್ನು ಇವತ್ತಿಗೂ ಚನ್ನೂರಿನ ಜನ ಮಾಹಿತಿ ನೀಡುತ್ತಾರೆ. ನಿಜಾಮ ಅಂದು ನೀಡಿದ ಕುರ್ಚಿ, ಬಿಲ್‌ತ್ತುಗಳನ್ನು ತೋರಿಸುತ್ತಾರೆ.

ಪ್ರಖರ ವಿಚಾರವಾದಿ :

ಜಲಾಲ ಹಿಂದೂಗಳಿಗೆ ಜಲಾಲ ಶರಣರಾದರೇ, ಮುಸ್ಲಿಮರಿಗೆ ಜಲಾಲಪೀರ ರಾದರು. ಇವರ ಬಾಳಸಂಗಾತಿ ಉಮಾಮಬಿ ಅಪ್ಪಟ ಶರಣ ಪರಂಪರೆಯಲ್ಲಿ ಗುರುತಿಸಿಕೊಂಡು ಬಸವಲಿಂಗ ಶರಣರಿಂದ ದೀಕ್ಷೆ ಪಡೆದುಕೊಂಡರು. ಇವರು ಕೂಡ ಮುಸ್ಲಿಂರಿಂದ ಉಮಾಮಜಿ ಎಂದು ಕರೆಸಿಕೊಂಡರೇ ಹಿಂದೂಗಳಿಗೆ ಉಮ್ಮಾಬಾಯಿ, ಉಮ್ಮಾತಾಯಿ ಎಂದಾದರು. ಇರ್ವರು ಶರಣ ದಂಪತಿಗಳು ಏಕಕಾಲಕ್ಕೆ ಇಸ್ಲಾಂ ವೀರಶೈವ ಆಚರಣೆಗಳನ್ನು ಅನುಸರಿಸಿದರು. ಇಲ್ಲಿಯ ಹಿಂದೂ ಮುಸ್ಲಿಂ ಜನತೆ ಇವತ್ತಿಗೂ ಚನ್ನೂರಿನ ದರ್ಗಾಕ್ಕೆ ತುಂಬು ಪ್ರೀತಿ ಮತ್ತು ಅಸದಳ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ. ಒಂದು ಕಡೆ ಗಲಿಫಾ ಹೊದಿಸಿದರೆ ಇನ್ನೊಂದೆಡೆ ಪಲ್ಲಕ್ಕಿ ಮೆರವಣಿಗೆ, ಒಂದೆಡೆ ಕಂದೂರಿ ನಡೆದರೆ ಇನ್ನೊಂದೆಡೆಗೆ ಸಕ್ಕರೆ ಓದಿಸುವುದು ಇವೆಲ್ಲ ವರ್ಷಂ ಪ್ರತಿ ಜಾತ್ರೆಯಲ್ಲಿ ನಡೆಯುತ್ತದೆ. ಅಲ್ಲಾಹುವಿನ ಪ್ರಾರ್ಥನೆ ಮತ್ತು ವಚನಪಠಣ ತತ್ವಪದ ಭಜನೆ ಗೋಷ್ಠಿಗಳು ಸಮಸಮವಾಗಿ ನಡೆದುಕೊಂಡು ಬರುತ್ತಿವೆ.

ಜಲಾಲ ಸಾಹೇಬ ತಾತ್ವಿಕವಾಗಿ ಅದೆಂಥ ಪ್ರಖರ ವಿಚಾರವಾದಿ ಎಂದರೆ ಒಂದು ಸಲ ಕಡಕೋಳ ಮಡಿವಾಳಪ್ಪನವರು ಸೂಫಿಸಂತನೆಂದು ಪ್ರಸಿದ್ಧಿಗೆ ಬಂದಿದ್ದ ಜಲಾಲಸಾಹೇಬರನ್ನು ಮುಖಾಮುಖಿ ಯಾದರಂತೆ ಶುದ್ಧ ಅವಧೂತನಂತಿದ್ದ ಜಲಾಲರ ಹೊಸ ವೇಷವನ್ನು ಕಂಡ ಮಡಿವಾಳಪ್ಪನವರು ಥಟ್ಟನೆ


'ಫಕೀರನಾಗಬೇಕಾದರೆ
ಮನ ಧಿಕ್ಕಾರ ಮಾಡಿಕೊಂಡಿರಬೇಕು
ಆಕಾರ, ಮಕಾರ, ಉಕಾರ ಓಂಕಾರವನ್ನೆಲ್ಲ ತಿಳಿದಿರಬೇಕು'

ಎಂದು ಪದರಚಿಸಿ ಸವಾಲು ಹಾಕಿದರಂತೆ. ಐದು ನುಡಿಯವರೆಗೆ ಹಬ್ಬಿದ ಇಡೀ ಪದವನ್ನು ಸಾವಧಾನದಿಂದ ಕೇಳಿದ ಜಲಾಲ ಸಾಹೇಬರು ಮಡಿವಾಳಪ್ಪನವರ ಕುರಿತು ಅಷ್ಟೇ ತಾತ್ವಿಕ ಎತ್ತರದಿಂದ

"ಜಂಗಮನಾಗಬೇಕಾದರೆ ! ಮನ
ಲಿಂಗ ಮಾಡಿಕೊಂಡಿರಬೇಕು"

ಎಂದು ಪದ ರಚಿಸಿ ಹಾಡಿದರಂತೆ. ನಂತರ ಅವರು ಪರಸ್ಪರ ತಬ್ಬಿಕೊಂಡು ಭಾವಪರವಶ ರಾದರಂತೆ. ಜಲಾಲರ ಬದುಕಿನ ಸುತ್ತ ಇಂಥ ಹತ್ತಾರು ಭಾವಸಂವೇದಿ ನೆಲೆಗಳು ಇಲ್ಲಿ ಹರಡಿಕೊಂಡಿವೆ. ಒಂದು ಸಾಲು ಉರ್ದುವಿನಲ್ಲಿದ್ದರೆ ಇನ್ನೊಂದು ಸಾಲು ಕನ್ನಡದಲ್ಲಿ ಬರೆದಿರುವ ಇವರ ತತ್ವ ಪದಗಳಂತೂ ಭಾವ ಭಾಷೆಯ ಸುಮಧುರ ಸಾಂಗತ್ಯದಲ್ಲಿ ಕಂಗೊಳಿಸುತ್ತಿವೆ. **ಉರ್ದು ಮಿಶ್ರಿತ ಕನ್ನಡದಲ್ಲಿ ರಚಿಸಲ್ಪಟ್ಟ ಈ ಪದಗಳು ಮತೀಯ ಬಾಂಧವ್ಯದ ಕುರುಹಾಗಿ, ಮಾನವೀಯತೆಯ ಮಹೋನ್ನತಿಯಾಗಿ, ಉಚ್ಛ ದಾರ್ಶನಿಕ ಧಾರೆಯ ಶಿಖರವಾಗಿ ನಿಂತಿವೆ.** ○

ಇಎಂಎಸ್ ಭವನ ನಿಧಿ



ಎರಡನೇ ಹಂತದ ಸಂಗ್ರಹ

ಹಿಂದಿನ ಸಂಚಿಕೆಯಿಂದ		23,88,399.00
ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ		2,00,000.00
ಫ್ರಿದ್ರೀಖಾನ್, ಜಯನಗರ, ಬೆಂಗಳೂರು		25,000.00
ಮೀರಾರಾವ್, ಸೂರಿಯವರ ಮಗಳು		5,000.00
ಹಗರಿಬೊಮ್ಮನಹಳ್ಳಿ ಕುವೆಂಪು ಗ್ರಂಥಾಲಯ ಬೆಂಬಲಿಗರ ಬಳಗದ ಹುರಕಡ್ಲಿ ಶಿವಕುಮಾರ ಮೂಲಕ		
ಕೆ.ರೋಹಿತ್ ಬಾಚಿಗೊಂಡನಹಳ್ಳಿ	100.00	
ನಾಕುಕೇರಿ ನಾಗರಾಜ, ಬಾಚಿಗೊಂಡನಹಳ್ಳಿ	100.00	
ಹೆಚ್.ಜಿ.ದುರುಗಪ್ಪ, ಬಾಚಿಗೊಂಡನಹಳ್ಳಿ	100.00	
ಕೆ.ಬಸವರಾಜ್, ಕಾರ್ಯದರ್ಶಿ ಗ್ರಾಮ ಪಂಚಾಯಿತಿ	200.00	500.00
ಒಟ್ಟು		26,18,899.00

ಬಹಳ ಸಂತೋಷವಾಗುತ್ತೆ!

ಒಬ್ಬ ಅಮೆರಿಕನ್ ವ್ಯಕ್ತಿ ವೈಟ್ ಹೌಸ್ ಬಳಿ ಬಂದು, 'ನಾನು ಬುಷ್ ಅವರನ್ನು ಭೇಟಿಯಾಗಬೇಕು' ಎಂದು ಹೇಳಿದ.

ಆಗ ಕಾವಲುಗಾರ 'ನೋಡಿ ಈಗ ಬುಷ್ ಅಧ್ಯಕ್ಷರಲ್ಲ, ಅವರು ಈ ವೈಟ್ ಹೌಸಿನಲ್ಲಿ ಇಲ್ಲ' ಎಂದು ಹೇಳಿದ.

ಮರು ದಿನ ಆ ವ್ಯಕ್ತಿ ಪುನಃ ಅಲ್ಲಿಗೆ ಬಂದು, 'ನಾನು ಬುಷ್ ಅವರನ್ನು ಭೇಟಿಯಾಗಬೇಕು' ಎಂದು ಹೇಳಿದ.

ಆಗ ಕಾವಲುಗಾರ "ನಿನ್ನೇನೇ ಹೇಳಲಿಲ್ಲವೇನ್ರೀ, ಬುಷ್ ಈಗ ಅಧ್ಯಕ್ಷರಲ್ಲ,

ಹ್ಹ...ಹ್ಹಾ...ಹ್ಹಾ...

ಅವರು ವೈಟ್ ಹೌಸಿನಲ್ಲಿ ಇಲ್ಲ" ಎಂದು ಹೇಳಿದ.

ಅದೇ ವ್ಯಕ್ತಿ ಮತ್ತೆ ಮರುದಿನ ಬಂದು, 'ನಾನು ಬುಷ್ ಅವರನ್ನು ಭೇಟಿಯಾಗಬೇಕು' ಎಂದು ಹೇಳಿದ.

ಕಾವಲುಗಾರ ಕೋಪಗೊಂಡು, 'ಅಲ್ಲರೀ.... ಎಷ್ಟು ಸಾರಿ ಹೇಳಬೇಕು ನಿಮಗೆ? ಬುಷ್ ಈಗ ಅಧ್ಯಕ್ಷರಲ್ಲ, ಅವರು ವೈಟ್ ಹೌಸಿನಲ್ಲಿ ಇಲ್ಲ ಎಂದು'. ಮತ್ತೆ ಮತ್ತೆ ಬಂದು ಯಾಕೆ ಕಾಟ ಕೊಡ್ತಿದೀರ' ಎಂದು ಕೇಳಿದ.

ಆಗ ಆ ವ್ಯಕ್ತಿ, ನನಗೂ ಗೊತ್ತಪ್ಪ, ಆದರೆ 'ಬುಷ್ ಈಗ ಅಧ್ಯಕ್ಷರಲ್ಲ, ಅವರು ವೈಟ್ ಹೌಸಿನಲ್ಲಿ ಇಲ್ಲ' ಎನ್ನುವ ಮಾತನ್ನು ಕೇಳುವುದರಿಂದ ಬಹಳ ಸಂತೋಷವಾಗುತ್ತದೆ ಅದಕ್ಕೇ' ಎಂದರಂತೆ!

ರೈತ ಜನ ಸಾವು

ಸಾಲ ಬಾಧೆಯಿಂದಲ್ಲ ರೈತ ಜನ ಸಾವು
ಕಡಿದದ್ದು ಆಡಳಿತ ಎಂದೆಂಬ ಹಾವು
ಬೆಲೆ ಏರಿಕೆಯಿಂದಲ್ಲ ಬಡವರಿಗೆ ಕಷ್ಟ
ಸಗಟು ವ್ಯಾಪಾರಿ ಪರ ಅಧಿಕಾರಿ ಭ್ರಷ್ಟ

ವಿಡಂಬಾರಿ

ಸುರಕ್ಷಿತವಾದ ಚಮತ್ಕಾರಿಕ ಚಿಕಿತ್ಸೆಯೆಂಬಂತೆ ಡಂಗುರ ಸಾರಲಾಗುತ್ತಿದೆ. ಭಾರತ ಸರ್ಕಾರದ ಕೃಷಿ ಸಚಿವಾಲಯದಡಿಯಲ್ಲಿರುವ ಹೈನುಗಾರಿಕಾ ಇಲಾಖೆಯು ಕೂಡಾ ದನದ ಮೂತ್ರವನ್ನು ಔಷಧವನ್ನಾಗಿ ಮಾರುವುದಕ್ಕೆ ಪೂರಕವಾದ ವರದಿಗಳನ್ನು ಪ್ರಕಟಿಸಿದೆ.

ಸತ್ಯವೇನು?


ದನದ ಮೂತ್ರವನ್ನು ಎಲ್ಲೆಂದರಲ್ಲಿ ಮಾರಾಟ ಮಾಡುವ ಭರಾಟೆಯನ್ನೂ, ಅದಕ್ಕೆ ದೊರೆಯುತ್ತಿರುವ ಸರಕಾರದ ಸಕ್ರಿಯ ಬೆಂಬಲವನ್ನೂ ನೋಡಿದಾಗ ಅಮಾಯಕರ ಗಂಟಲೊಳಗೆ ದನದ ಕಲಶ್ಮಲಗಳನ್ನು ತಳ್ಳುವ ಅಪಾಯಕಾರೀ ಪ್ರವೃತ್ತಿಯು ಹೆಚ್ಚುತ್ತಿರುವುದು ದಿಟವಾಗುವುದರಿಂದ ಇದರ ಹಿಂದಿರುವ ಸತ್ಯವನ್ನು ಕೆದಕುವುದು ಅನಿವಾರ್ಯವಾಗಿದೆ.

ಗೋ ಮೂತ್ರ ವ್ಯಾಪಾರದ ಪ್ರವರ್ತಕರ ಸೋಗಲಾಡಿತನವನ್ನು ಕಾಣಬೇಕಾದರೆ, ಗೋಮೂತ್ರದ ಔಷಧೀಯ ಗುಣಗಳನ್ನು ತಿಳಿಸುವ ಮೂಲಾಧಾರಗಳೆನ್ನಲಾದ ಆಯುರ್ವೇದದ ಗ್ರಂಥಗಳನ್ನೇ ಪರಿಶೀಲಿಸಿದರೆ ಸಾಕಾಗುತ್ತದೆ. ಆಯುರ್ವೇದದ ಮೂರು ಗ್ರಂಥಗಳಾದ ಚರಕ ಸಂಹಿತೆ (1-2ನೇ ಶತಮಾನ), ಸುಶ್ರುತ ಸಂಹಿತೆ (3-4ನೇ ಶತಮಾನ) ಹಾಗೂ ವಾಗ್ಭಟನ ಬರಹಗಳಲ್ಲಿ (7ನೇ ಶತಮಾನ) ರೋಗ ಚಿಕಿತ್ಸೆಯಲ್ಲಿ ಗೋಮಾಂಸದ ಪ್ರಯೋಜನಗಳ ಬಗ್ಗೆಯೂ ಹೇಳಲಾಗಿದೆಯಾದರೂ, ಗೋ ಮೂತ್ರ ವ್ಯಾಪಾರದ ಪ್ರವರ್ತಕರು ಆ ಬಗ್ಗೆ ಚಕಾರವನ್ನೆತ್ತುವುದಿಲ್ಲ. ಭಾರತೀಯ ಸಂಸ್ಕೃತಿಯ ಸ್ವಯ ಘೋಷಿತ ಸಂರಕ್ಷಕರ ವಾದಗಳನ್ನು ಒಪ್ಪುವುದಾದರೆ, ಗೋಮಾಂಸ ಭಕ್ಷಣೆಯು ಪಾಪವೆನಿಸುತ್ತದೆ, ಗೋಮೂತ್ರವನ್ನು ಕುಡಿಯುವುದು ಹಾಗೂ ಗೋವಿನ ಸೆಗಣಿಯನ್ನು ತಿನ್ನುವುದು ಪುಣ್ಯದ ಕೆಲಸವಾಗುತ್ತದೆ.

ಆದರೆ ಗೋಮೂತ್ರಕ್ಕೆ ಪೇಟೆಂಟ್ ಪಡೆಯಲಾಗಿಲ್ಲವೇ? ಯಾವುದೇ ಸಂಶೋಧನೆಯನ್ನು ಇತರರು ನಕಲು ಮಾಡದಂತೆ ಯಾ ಮಾರದಂತೆ ನಿರ್ಬಂಧಿಸುವ ಏಕಸ್ವಾಮ್ಯತೆಯನ್ನಷ್ಟೇ ಪೇಟೆಂಟ್ ಒದಗಿಸುತ್ತದೆಯಲ್ಲದೆ, ಅದು ಆ ಸಂಶೋಧನೆಯ ಉಪಯುಕ್ತತೆಗೆ ಆಧಾರವೆನ್ನದು. ಇನ್ನೊಂದೆಡೆ, ಗೋಮೂತ್ರಕ್ಕೆ ವಿದೇಶಗಳಲ್ಲಷ್ಟೇ ಪೇಟೆಂಟ್ ಪಡೆಯಲಾಗಿದ್ದು, ಭಾರತ ಸರಕಾರದಿಂದ ಪೇಟೆಂಟ್ ಪಡೆದ ಬಗ್ಗೆ ವರದಿಗಳಿಲ್ಲ. ಅಂತರರಾಷ್ಟ್ರೀಯ ಪೇಟೆಂಟ್‌ವಾಗಿರುವ ಮಾನ್ಯತೆಯಾಗಲೀ, ಸುದ್ದಿಮೌಲ್ಯವಾಗಲೀ ಭಾರತೀಯ ಪೇಟೆಂಟಿಗೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿರಬಹುದೇನೋ? ಅಲ್ಲದೆ, ವಿದೇಶೀಯರೂ ಗೋಮೂತ್ರದ ಮಹತ್ವವನ್ನು ಗುರುತಿಸಿದ್ದಾರೆಂದು ಹೇಳಿಕೊಳ್ಳಲು ಇದಕ್ಕಿಂತ ಉತ್ತಮವಾದ ಪುರಾವೆಯೇನು ಬೇಕು?


ಗೋಮೂತ್ರದ ಪ್ರಯೋಜನಗಳ ಬಗ್ಗೆ ಪ್ರಯೋಗಾಲಯಗಳಲ್ಲಿ ಕೆಲವು ಅಧ್ಯಯನಗಳನ್ನು ನಡೆಸಲಾಗಿರುವ ಬಗ್ಗೆ ವರದಿಗಳಷ್ಟೇ ಇವೆಯಲ್ಲದೆ, ಮನುಷ್ಯರಲ್ಲಿ ಯಾವುದೇ ವೈಜ್ಞಾನಿಕವಾದ ಅಧ್ಯಯನಗಳನ್ನು ನಡೆಸಲಾದ ಬಗ್ಗೆ ವರದಿಗಳಿಲ್ಲ. ಇನ್ನೊಂದು 'ಅನುಭವದ ವರದಿಗಳು' ಹಾಗೂ ಸ್ವಯಂಘೋಷಿತ 'ಗೋಮೂತ್ರ ಚಿಕಿತ್ಸಕರು' ಪ್ರಕಟಿಸಿದ್ದಾರೆನ್ನಲಾದ ಅಧ್ಯಯನಗಳ ವರದಿಗಳು ಲಭ್ಯವಿವೆಯಾದರೂ ಇವು ಯಾವುದೇ ವೈಜ್ಞಾನಿಕ ಮಾನದಂಡಗಳಿಗೂ ನಿಲುಕುವುದಿಲ್ಲ. ಒಂದಕ್ಕೊಂದು ತಾಳೆ ಹೊಂದದ ಹಲವು ವಿಚಾರಗಳು ಅಂತಹ ವರದಿಗಳಲ್ಲಿ ಯಥೇಚ್ಛವಾಗಿ ದೊರೆಯುತ್ತವೆ: ಉದಾಹರಣೆಗೆ, ಗೋಮೂತ್ರದಲ್ಲಿ ತಾಮ್ರ ಹಾಗೂ ಚಿನ್ನದ ಅಂಶಗಳಿವೆ ಎಂದು ಹೇಳಲಾಗಿರುವ ಲೇಖನದಲ್ಲಿಯೇ ಇದನ್ನು ನಿರಾಕರಿಸುವ ವಿವರಗಳನ್ನೂ ನೀಡಲಾಗಿದೆ!

ಮೂತ್ರ ಬರೇ ಮೂತ್ರ, ಪ್ರಾಣಿಯ ಮೂತ್ರ ಪಿಂಡಗಳು ರಕ್ತದಿಂದ ಕಶ್ಮಲಗಳನ್ನು ಬೇರ್ಪಡಿಸಿ, ಮೂತ್ರನಾಳಗಳ ಮೂಲಕ ವಿಸರ್ಜಿಸುವ ಒಂದು ದ್ರಾವಣ, ಅಷ್ಟೆ. ಪ್ರಾಣಿಯ ಶರೀರದಲ್ಲಾಗುವ ಉಪಾಪಚಯದ ಕ್ರಿಯೆಗಳಲ್ಲಿ ಹುಟ್ಟಿಕೊಳ್ಳುವ ಹಲವು ಸಂಯುಕ್ತಗಳು, ದೇಹಕ್ಕೆ ಅಗತ್ಯವಿಲ್ಲದ ಲವಣಗಳು ಹಾಗೂ ಮೂತ್ರವು ಸಲೀಸಾಗಿ ವಿಸರ್ಜನೆಗೊಳ್ಳುವುದಕ್ಕೆ ನೆರವಾಗಲು ಮೂತ್ರನಾಳಗಳು ಸ್ರವಿಸುವ ಕೆಲವೊಂದು ವಿಶೇಷವಾದ ಸಂಯುಕ್ತಗಳು ಮೂತ್ರದಲ್ಲಿರುತ್ತವೆ. ಸಹಜವಾಗಿಯೇ, ಪ್ರಾಣಿಗಳು ಹಾಗೂ ಮನುಷ್ಯರ ಮೂತ್ರಗಳಲ್ಲಿ ಬಹಳಷ್ಟು ಸಾಮ್ಯತೆಗಳಿವೆ. ಮೂತ್ರವು ವಿಸರ್ಜನೆಗೊಳ್ಳುವಾಗ ಹೆಪ್ಪುಗಟ್ಟದಂತೆ ತಡೆಯುವ ಯೂರೋಕೈನೇಸ್ ಎಂಬ ಕಿಣ್ವವೊಂದು ಮೂತ್ರದಲ್ಲಿದೆ. ಮಾನವ ಮೂತ್ರದಿಂದ ಯೂರೋಕೈನೇಸ್ ಅನ್ನು ಪ್ರತ್ಯೇಕಿಸಿ, ರಕ್ತವು ಹೆಪ್ಪುಗಟ್ಟಿ ಮುಚ್ಚಿಹೋಗಿರುವ ಹೃದಯದ ಅಪಧಮನಿಯನ್ನು ತೆರೆಯಲು ಹೃದಯಾಘಾತದ ಸಂದರ್ಭದಲ್ಲಿ ತುರ್ತು ಚಿಕಿತ್ಸೆಗಾಗಿ ಅದನ್ನಿಂದು ನಾವು ಬಳಸುತ್ತಿದ್ದೇವೆ. ಹಾಗೆಂದು ಹೃದಯಾಘಾತವಾದಾಗ ರೋಗಿಗೆ ಮೂತ್ರವನ್ನು ಕುಡಿಸಿದರೆ ರೋಗಿಯನ್ನು ಉಳಿಸಲಿಕ್ಕಾಗುತ್ತದೆಯೇ ಅಥವಾ ಮನುಷ್ಯನ ಮೂತ್ರವು ಪೂಜನೀಯವಾಗಿಬಿಡುತ್ತದೆಯೇ?



ಏನು ಅರಿಯದ ಮುಗ್ಧ ಹಸು

ಗೋಮೂತ್ರವು ಮಾನವರಿಗೆ ಸುರಕ್ಷಿತವೇ? ಗೋಮೂತ್ರದ ಉತ್ಪನ್ನಗಳನ್ನು ಸೇವಿಸುವುದರಿಂದ ಗಂಭೀರವಾದ, ಕೆಲವೊಮ್ಮೆ ಪ್ರಾಣಾಂತಿಕವಾಗ ಬಹುದಾದ ದುಷ್ಪರಿಣಾಮಗಳು ಉಂಟಾಗಿರುವ ಬಗ್ಗೆ ವರದಿಗಳಿವೆ ಹಾಗೂ ಪ್ರಯೋಗಗಳಿಂದಲೂ ಇದು ಶ್ರುತಪಟ್ಟಿದೆ. ಇಲಿಜ್ವರವೂ ಸೇರಿದಂತೆ ಬಾಯಿಯ ಮೂಲಕ ಹರಡುವ ಕೆಲವು ಸೋಂಕು ರೋಗಗಳಿಗೂ ಗೋಮೂತ್ರವು ಕಾರಣವಾಗಬಹುದು. ಗೋಮೂತ್ರ ಹಾಗೂ ಗೋಮಯ (ಸೆಗಣಿ) ಗಳಿಗೆ ಸೂಕ್ಷ್ಮಾಣು ಜೀವಿನಾಶಕ ಶಕ್ತಿಯಿದೆಯೆಂಬ ಹೇಳಿಕೆಗಳು ಆಧಾರರಹಿತವಷ್ಟೇ ಅಲ್ಲ, ತೀರಾ ಅಪಾಯ ಕಾರಿಯೂ ಆಗಿವೆ. ಸೆಗಣಿ (ಹಾಗೂ ಎಲ್ಲಾ ಪ್ರಾಣಿಗಳ ಮಲಗಳು) ಕರುಳಿನಿಂದ ವಿಸರ್ಜಿತಗೊಂಡ ಸೂಕ್ಷ್ಮಾಣು ಜೀವಿಗಳಿಂದ ತುಂಬಿ ತುಳುಕುತ್ತಿರುವುದು ಒಂದೆಡೆಯಾದರೆ, ಪಂಚಗವ್ಯದಲ್ಲಿಯೂ ಹಲವು ತರದ ಸೂಕ್ಷ್ಮಾಣು ಜೀವಿಗಳಿರುವುದನ್ನು ಗುರುತಿಸಲಾಗಿದೆ. ಸೂಕ್ಷ್ಮಾಣು ಜೀವಿಗಳಿಂದ ತುಂಬಿರುವ ಈ ಮಲ-ಮೂತ್ರಗಳನ್ನು ತೆರೆದ ಗಾಯಗಳಿಗೇನಾದರೂ ಲೇಪಿಸಿದರೆ ಮಾರಣಾಂತಿಕವಾಗಬಲ್ಲ ಸೋಂಕುಂಟಾಗಬಹುದು. ಈ ವಿಷಯಗಳ ಬಗ್ಗೆ ಸಂಪೂರ್ಣವಾಗಿ ಅಜ್ಞಾನಿಗಳಾದವರಷ್ಟೇ ದನದ ಮಲ-ಮೂತ್ರಗಳನ್ನು ಸೂಕ್ಷ್ಮಾಣುಜೀವಿನಾಶಕ ಗಳೆಂದು ಮಾರುವ ಸಾಹಸಕ್ಕೆ ಕೈಯಿಕ್ಕಬಹು ದೆನ್ನುವುದು ನಿಜವಿದ್ದರೂ, ಆಧುನಿಕ ವೈದ್ಯವಿಜ್ಞಾನದಲ್ಲಿ ಪರಿಣತರಾದ ಕೆಲವು ವೈದ್ಯರುಗಳು, ತಮ್ಮ 'ಆಧ್ಯಾತ್ಮಿಕ ಗುರುಗಳ' ಅಥವಾ ಮಠಾಧಿಪತಿಗಳ ಮೇಲಿನ ಕುರುಡು ಭಕ್ತಿಯಿಂದ, ಇಂತಹುದನ್ನು ಬೆಂಬಲಿಸುತ್ತಿರುವುದು ದೊಡ್ಡ ದುರಂತವೆಂದೇ ಹೇಳಬೇಕು.



ಅತಿಶಯ ಗುಣಗಳನ್ನು ಆರೋಪಿಸಿದ ಕಾಮಧೇನು!

ಔಷಧಗಳಲ್ಲ, ಅವಮಾನ

ಆದ್ದರಿಂದ ಗೋಮೂತ್ರ ಹಾಗೂ ಸೆಗಣಿಗಳು, ಇತರೆಲ್ಲ ಪ್ರಾಣಿಗಳ ಮಲ-ಮೂತ್ರದಂತೆ, ದೇಹಕ್ಕೆ ಅಗತ್ಯವಿಲ್ಲದೆ ವಿಸರ್ಜಿಸಲ್ಪಟ್ಟ ಕಶ್ಮಲಗಳಷ್ಟೇ ಆಗಿವೆ ಮತ್ತು ಗೋಮೂತ್ರ ಯಾ ಸೆಗಣಿಗೆ, ಬೇರಾವುದೇ ಪ್ರಾಣಿಯ (ಮನುಷ್ಯನದೂ ಸೇರಿ) ಮಲ-ಮೂತ್ರಗಳಿಗಿಲ್ಲದ ವಿಶೇಷವಾದ, ಪೂಜನೀಯ ಸ್ಥಾನವನ್ನು ಕಲ್ಪಿಸುವುದಕ್ಕೆ ಯಾವುದೇ ಕಾರಣಗಳು ಇಲ್ಲವೇ ಇಲ್ಲ.

ದನದ ಮಲ-ಮೂತ್ರಗಳು (ಮತ್ತವುಗಳ ಉತ್ಪನ್ನಗಳು) ಎಲ್ಲಾ ರೋಗಗಳ ಚಿಕಿತ್ಸೆಯಲ್ಲಿ ಅತಿ ಪರಿಣಾಮಕಾರಿಯಾಗಿವೆ ಎನ್ನುವುದಕ್ಕೆ ಯಾವುದೇ ಆಧಾರಗಳಿಲ್ಲ, ಮಾತ್ರವಲ್ಲ, ಮನುಷ್ಯರಲ್ಲಿ ಈ ಕುರಿತು ನೇರವಾದ ಅಧ್ಯಯನಗಳು ನಡೆದಿರುವ ಬಗ್ಗೆ ವರದಿಗಳಿಲ್ಲ. ಬದಲಾಗಿ, ಗೋಮೂತ್ರದ ಬಳಕೆಯಿಂದ ಆಗಬಹುದಾದ ಗಂಭೀರವಾದ ದುಷ್ಪರಿಣಾಮಗಳ ಬಗ್ಗೆ ವರದಿಗಳಿರುವಾಗ, ಇಂತಹಾ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೂ, ಸರ್ವ ರೋಗ ನಿವಾರಕಗಳೆಂದು ಅತಿರಂಜಿತವಾಗಿ ಪ್ರಚಾರ ಮಾಡುವುದಕ್ಕೂ ಅಸ್ಪದ ನೀಡಲಾಗಿರುವುದು ಮತ್ತು ಅದಕ್ಕೆ ಭಾರತ ಸರಕಾರದ ಇಲಾಖೆಗಳ ಸಕ್ರಿಯವಾದ ಬೆಂಬಲವೂ ಇದೆಯೆನ್ನುವುದು ಅತ್ಯಂತ ಆಘಾತಕಾರಿಯಾಗಿದೆ.



ದನದ ಮಲ-ಮೂತ್ರಗಳಿಂದ ಮನುಕುಲಕ್ಕೆ ಅತ್ಯಮೋಘವಾದ ಪ್ರಯೋಜನಗಳಿವೆಯೆಂಬ ಪ್ರಚಾರದ ಹಿಂದೆ ಧಾರ್ಮಿಕ ಅಂಧಶ್ರದ್ಧೆಯನ್ನು ಬಲಪಡಿಸಬಯಸುವ ಪ್ರತಿಗಾಮಿ ಶಕ್ತಿಗಳಿರುವುದು ಸರ್ವವಿಧಿತವಾಗಿದೆ ಮಾತ್ರವಲ್ಲ, 'ಚಿಕಿತ್ಸೆ' ಹಾಗೂ 'ದೀರ್ಘಾಯುಷ್ಯ'ದ ಹೆಸರಲ್ಲಿ ಜನಸಾಮಾನ್ಯರನ್ನು ದನದ ಮಲ-ಮೂತ್ರ ಸೇವನೆಗೆ ತಳ್ಳುವ ದುರುದ್ದೇಶವೂ ಇರುವಂತಿದೆ. ಇದೇ ಮೂಲಭೂತವಾದಿ ಶಕ್ತಿಗಳು ದಲಿತರಿಗೆ ಮನುಷ್ಯನ ಮಲ-ಮೂತ್ರಗಳನ್ನು ತಿನ್ನಿಸಿದ ಹಲವಾರು ಪ್ರಕರಣಗಳು ವರದಿಯಾಗಿರುವಾಗ ಇದರಲ್ಲಿ ಅಚ್ಚರಿಯೇನೂ ಇಲ್ಲ.

ಹಾಲನ್ನು ನೀಡುತ್ತದೆ ಎನ್ನುವ ಕಾರಣಕ್ಕಾಗಿ (ಮಲ-ಮೂತ್ರಗಳಿಗಾಗಿ ಅಲ್ಲವೆಂದು ನಂಬೋಣ) ದನವನ್ನು (ಅಷ್ಟೇ 'ಉಪಯುಕ್ತವೆನಿಸುವ' ಎಮ್ಮೆಯನ್ನಲ್ಲ) 'ಎರಡನೇ ತಾಯಿ', 'ವಿಶ್ವಮಾತೆ' ಇತ್ಯಾದಿಯಾಗಿ ವೈಭವೀಕರಿಸುವುದನ್ನು ನೋಡುವಾಗ, ಕೇವಲ ಹಾಲೂಡಿಸುವುದಷ್ಟೇ ತಾಯ್ತನವೇ ಹಾಗೂ ಕೇವಲ ಅಷ್ಟಕ್ಕಾಗಿಯೇ ನಾವು ತಾಯಂದಿರನ್ನು ಗೌರವಿಸುತ್ತೇವೆಯೇ ಎಂಬ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ.

ವಯಸ್ಸಾದ ದನಗಳನ್ನು ಕಸಾಯಿಖಾನೆಗಳಿಗೆ ಮಾರಾಟ ಮಾಡದಂತೆ ತಡೆಯುವ ಮತ್ತು ಆ ಮೂಲಕ ಬಡವರಿಗೂ, ದಲಿತರಿಗೂ ಅಗ್ಗದ ಮಾಂಸವು ದೊರೆಯದಂತೆ ಮಾಡುವ ಹಾಗೂ ಮಾಂಸ ವ್ಯಾಪಾರಿಗಳ ವಹಿವಾಟಿಗೆ ಧಕ್ಕೆಯುಂಟು ಮಾಡುವ ಉದ್ದೇಶದಿಂದಲೇ ಹಾಲು ಕೊಡಲಾಗದ ದನಗಳನ್ನು ಮಲ-ಮೂತ್ರಗಳಿಗಾಗಿ ಸಾಕುವುದು ಆರ್ಥಿಕವಾಗಿ ಬಹಳ ಲಾಭದಾಯಕವೆಂದು (ಇದಕ್ಕೆ ಯಾವುದೇ ಆಧಾರಗಳು ಇದ್ದಂತಿಲ್ಲ) ಪ್ರಚಾರ ಮಾಡಲಾಗುತ್ತಿದೆ. ಆದರೆ ಪ್ರಾಣಿಗಳ ಸಾಕಣೆಯಿಂದಾಗಿ ಪರಿಸರದ ಮೇಲೆ ಅಗಾಧವಾದ ಹೊರೆಯಾಗುವುದೆಂದೂ, ಜಾಗತಿಕ ತಾಪಮಾನದ ಏರಿಕೆಗೆ ಮುಖ್ಯವಾದ ಕಾರಣಗಳಲ್ಲಿ ಇದೂ ಒಂದೆಂದೂ ವಿಶ್ವ ಸಂಸ್ಥೆಯ ವರದಿಯಲ್ಲಿ ಹೇಳಲಾಗಿದೆ. ಆದ್ದರಿಂದ ಪ್ರಜ್ಞಾವಂತರೆಲ್ಲರೂ ಈ ಎಲ್ಲಾ ವಿಚಾರಗಳ ಬಗ್ಗೆ ವಸ್ತುನಿಷ್ಠವಾದ, ವೈಜ್ಞಾನಿಕವಾದ ಅಭಿಪ್ರಾಯವನ್ನು ತಳೆಯುವುದು ಅತ್ಯಗತ್ಯವಾಗಿದೆ.

ಕೃಪೆ :'ಆರೋಗ್ಯ ಸಂಪದ' ಬ್ಲಾಗ್
ಆಯ್ಕೆ : ಪರಶುರಾಮ ಕಲಾಲ್

ಜಗದಗಲ

ಶರತ್‌ಚಂದ್ರ

ಇರಾಕ್‌ನಲ್ಲಿ ಸೈನ್ಯ ಮುಂದುವರೆಸುವ ಒಪ್ಪಂದ ಬಿಕ್ಕಟ್ಟಿನಲ್ಲಿ

ಇರಾಕ್ ನಲ್ಲಿ ಅಮೆರಿಕನ್ ಸೈನ್ಯವನ್ನು 'ಕೊಲ್ಲಿ ಪ್ರದೇಶದ ಪೋಲಿಸ್' ಆಗಿ ಶಾಶ್ವತವಾಗಿ ನೆಲೆಗೊಳಿಸುವುದು ಬುಶ್ ಅಧ್ಯಕ್ಷತೆ ಗ್ಯಾಂಗ್‌ನ 'ಕೊನೆಯ ಇಚ್ಛೆ'. ಅಮೆರಿಕನ್ ಸೈನ್ಯ ವಿಶ್ವಸಂಸ್ಥೆಯ ನಿರ್ಣಯ ಒಂದರ ಪ್ರಕಾರ ಇರಾಕ್‌ನಲ್ಲಿ ಕಾನೂನುಬದ್ದವಾಗಿ (?) ಈ ಡಿಸೆಂಬರ್‌ನವರೆಗೆ ಇರಬಹುದು. ಈ ಬಗ್ಗೆ ಎಂಟು ತಿಂಗಳುಗಳಿಂದ ಅಮೆರಿಕದ ಕೈಗೊಂಬೆ ಇರಾಕಿ ಸರ್ಕಾರದ ಜತೆ ದೀರ್ಘ ಚೌಕಾಶಿ ನಂತರ ಬರಲಾದ ಒಪ್ಪಂದ ಪುನಃ ತೀವ್ರ ಬಿಕ್ಕಟ್ಟಿನಲ್ಲಿ ಇದೆ.

ಚೌಕಾಶಿ ಒಪ್ಪಂದದ ಪ್ರಕಾರ 2009 ರ ವರೆಗೆ ಪ್ರಮುಖ ನಗರಗಳ ಭದ್ರತೆಯನ್ನು ನೋಡಿಕೊಂಡು, ಆ ಮೇಲೆ ಇರಾಕಿ ಸೈನ್ಯಕ್ಕೆ ವಹಿಸಿಕೊಡಬೇಕಾಗಿತ್ತು. 2011 ರ ಕೊನೆ ವರೆಗೆ ಇರಾಕ್ ನ ಒಟ್ಟಾರೆ ಭದ್ರತೆಗೆ ಅಮೆರಿಕನ್ ಸೈನ್ಯ ಮುಂದುವರೆಯಬಹುದು. ಇರಾಕಿ ಸರ್ಕಾರ ಚೌಕಾಶಿ ಒಪ್ಪಂದಕ್ಕೆ ಒಪ್ಪುವಂತೆ ಮಾಡಲು ಎರಡು ಮುಖ್ಯ ಶರತ್ತುಗಳಿಗೆ ಅಮೆರಿಕನ್ನರು ಮಣಿದಿದ್ದರು. ಪ್ರಮುಖ ಅಪರಾಧಗಳ ಸಂದರ್ಭದಲ್ಲಿ ಇರಾಕಿ ಸರ್ಕಾರ ಅಮೆರಿಕನ್ ಸೈನಿಕರ ವಿಚಾರಣೆ ನಡೆಸಬಹುದು ಮತ್ತು ಅಮೆರಿಕನ್ ಸೈನಿಕರು ಶಂಕಿತ ದಂಗೆಕೋರರ ಬಂಧನವನ್ನು ಇರಾಕಿ ಸರ್ಕಾರದ ಅನುಮತಿ ಮೇಲೆ ಮಾಡುತ್ತಾರೆ - ಇವೇ ಆ ಎರಡು ಶರತ್ತುಗಳು.

ಆದರೆ ಈಗ ಕೈಗೊಂಬೆ ಇರಾಕಿ ಸರ್ಕಾರದಲ್ಲೂ ಈ ಒಪ್ಪಂದಕ್ಕೆ ವಿರೋಧ ಬಂದಿದೆ. ಸ್ವಾಭಾವಿಕವಾಗಿ ಇರಾಕ್ ನ್ನು ಅಮೆರಿಕದ ವಸಾಹತು ಮಾಡುವ ಈ ಒಪ್ಪಂದಕ್ಕೆ ತೀವ್ರ ವಿರೊಧ ಬಂದಿದೆ. ವಿರೋಧಿ ಶಿಯಾ ಸಾದ್ರ್ ಚಳುವಳಿ ಒಪ್ಪಂದದ ವಿರುದ್ಧ ಭಾರೀ ಪ್ರದರ್ಶನ ಏರ್ಪಡಿಸಿತ್ತು. ಸದ್ಯಕ್ಕೆ ಪ್ರಾಂತೀಯ ಮತ್ತು ಆ ಮೇಲೆ ಪಾರ್ಲಿಮೆಂಟರಿ ಚುನಾವಣೆಗಳು ಬರಲಿದೆ. ಇದರಿಂದ ಕೈಗೊಂಬೆ ಇರಾಕಿ ಸರ್ಕಾರಕ್ಕೂ ನಡುಕ ಶುರುವಾಗಿದೆ. ಈ ಒಪ್ಪಂದಕ್ಕೆ ಪಾರ್ಲಿಮೆಂಟಿನಲ್ಲಿ ಬಹುಮತ ದೊರೆಯುವುದು ಕಷ್ಟ ಎಂಬುದು ಸ್ಪಷ್ಟವಾಗಿದೆ. ಅಲ್ಲದೆ ಕೊನೆಯ ಉಸಿರಿನಲ್ಲಿ ಇರುವ ಬುಶ್ ಸರ್ಕಾರದ ಜತೆ ಯಾಕೆ ಒಪ್ಪಂದ ಮಾಡಿಕೊಳ್ಳಬೇಕು. ಹೊಸ ಸರ್ಕಾರದ ಜತೆ ಹೆಚ್ಚು ಅನುಕೂಲಕರ ಒಪ್ಪಂದ ಮಾಡಿಕೊಳ್ಳಬಹುದು. ಎಂಬ ಅರಿವು ಸಹ ಮೂಡಿದೆ.

ಆದರೆ ಬುಶ್ ಸರ್ಕಾರಕ್ಕೆ ಅಷ್ಟು ಸಮಯವಿಲ್ಲ. ಈ ಒಪ್ಪಂದ ಆಗದಿದ್ದರೆ ಗಡುವು ವಿಸ್ತರಣೆಗೆ, ಅದು ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಬಾಗಿಲು ಬಡಿಯಬೇಕು. ಆ ನಿರ್ಣಯ ಮೀರಿ ಅಮೆರಿಕ ಮಾಡಿದ ಹಲವು ಕಾರ್ಯಾಚರಣೆಗಳಿಗೆ ಭದ್ರತಾ ಸಮಿತಿ ಅಮೆರಿಕವನ್ನು ತರಾಟೆಗೆ ತೆಗೆದುಕೊಳ್ಳಬಹುದು. ಇಂದಿನ ಸನ್ನಿವೇಶದಲ್ಲಿ ಅಮೆರಿಕಕ್ಕೆ ಅಂತಹ ಗಡುವು ವಿಸ್ತರಣೆ ಸಿಗುವ ಸಾಧ್ಯತೆ ಬಹಳ ಕಡಿಮೆ. ಇದೇ ಬುಶ್ ಸರ್ಕಾರ ಎದುರಿಸುತ್ತಿರುವ ಬಿಕ್ಕಟ್ಟು.

ಬದಲಾವಣೆಯತ್ತ ಮಾಲ್ಡೀವ್ಸ್

ಭಾರತದ ನೆರೆ ಮತ್ತು ಮಿತ್ರ ದೇಶವಾದ ಮಾಲ್ಡೀವ್ಸ್ ನಲ್ಲಿ ಮಹತ್ವದ ರಾಜಕೀಯ ಬದಲಾವಣೆ ಆಗಿದೆ. 30 ವರ್ಷ ಕಾಲ ದೇಶದ ಅಧ್ಯಕ್ಷರಾಗಿದ್ದ ಅಬ್ದುಲ್ ಗಯೂಂ ರ ದೀರ್ಘಆಳ್ವಿಕೆ ಕೊನೆ ಆಗಿದೆ. ಅವರು ಚುನಾವಣೆ ಸೋತು ಅಧಿಕಾರ ಕಳೆದು ಕೊಂಡಿದ್ದಾರೆ. ಮಹಮ್ಮದ್ ಅನ್ನಿ ನಶೀದ್ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ತೀವ್ರ ರಾಜಕೀಯ ಚಳುವಳಿ ಎದುರಿಸಿದ ಗಯೂಂ, 2004 ರಿಂದ ಈಚೆಗೆ ಪ್ರಜಾಪ್ರಭುತ್ವ ಸುಧಾರಣೆ ತಂದು ಬಹು-ಪಕ್ಷೀಯ ಚುನಾವಣೆ ಜಾರಿಗೆ ತಂದರು. ಅದರ ಮೊದಲು ಗಯೂಂ ಎಂದೂ ಚುನಾವಣೆ ಎದುರಿಸಲಿಲ್ಲ. ಐದು ವರ್ಷಗಳಿಗೆ ಒಮ್ಮೆ ಬದಲಿ ಅಭ್ಯರ್ಥಿ ಇಲ್ಲದ ಬರಿಯ ಜನಮತ ಸಂಗ್ರಹ ಅವರ ಆಳ್ವಿಕೆಗೆ ಜನರ ಸಮ್ಮತಿ ಎಂಬ ವ್ಯವಸ್ಥೆ ಇತ್ತು.

ಭಾರತದ ಮತ್ತು ಇತರ ನೆರೆ ದೇಶಗಳ ನಾಯಕರ ವೈಯಕ್ತಿಕ ಸ್ನೇಹ ಹೊಂದಿದ್ದ ಅಬ್ದುಲ್ ಗಯೂಂ ರ ನಿರ್ಗಮನದಿಂದ ಸಂಬಂಧಗಳ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂದು ಕಾದು ನೋಡಬೇಕಾಗಿದೆ. ಮಾಲ್ಡೀವ್ಸ್ ಆರ್ಥಿಕವಾಗಿ ಭದ್ರವಾಗಿದ್ದರೂ ಇಸ್ಲಾಮಿಕ್ ಮೂಲಭೂತವಾದದ ಸಮಸ್ಯೆ ಎದುರಿಸುತ್ತಿದೆ. ಹೊಸ ಅಧ್ಯಕ್ಷರು ತರುವ ಬದಲಾವಣೆಗಳಿಗೆ ಕಾದು ನೋಡಬೇಕು.

'ಅನಿರ್ಬಂಧಿತ ಮಾರುಕಟ್ಟೆಯಲ್ಲಿ ಹುಳುಕಿದೆ' - ಗ್ರೀನ್‌ಸ್ಪಾನ್ ತಪ್ಪೊಪ್ಪಿಗೆ

ಹಲವು ವರ್ಷಗಳ ಕಾಲ ಅಮೆರಿಕದ 'ಫೆಡರಲ್ ರಿಸರ್ವ'(ನಮ್ಮ ರಿಸರ್ವ ಬ್ಯಾಂಕಿನಂತಹ ಸಂಸ್ಥೆ) ನ ಮುಖ್ಯಸ್ಥನಾಗಿದ್ದ ಅಲನ್ ಗ್ರೀನ್‌ಸ್ಪಾನ್. ಅಮೆರಿಕದ ಮುಕ್ತ ಮಾರುಕಟ್ಟೆಯ ಸೈದ್ಧಾಂತಿಕ 'ಮಹರ್ಷಿ' ಯಾಗಿದ್ದ. ಆತನ ಫ್ಯಾನ್ ಗಳು ಆತನನ್ನು ಮಾರುಕಟ್ಟೆಯ 'ಮಾಂತ್ರಿಕ' ಎಂದು ಕರೆದಿದ್ದರು. ಮಾರುಕಟ್ಟೆಯ ನಿಬಂಧನೆ ಅವನ ಮುಖ್ಯ 'ಕೆಲಸ'ವಾದರೂ, ಮಾರುಕಟ್ಟೆ ಸ್ವಯಂ-ನಿಬಂಧಿತ ವ್ಯವಸ್ಥೆ ಎಂದು ಆತ ಧೃಢವಾಗಿ ನಂಬಿದವನು. 2001 ರ ಮಾರುಕಟ್ಟೆ



ಕುಸಿತದ ನಂತರ ಪುನಃ 'ಮಾರುಕಟ್ಟೆ ಸುಗ್ಗಿ' ಗೆ ಒಯ್ದದ್ದು ಅವನೇ ಎಂದು ಹಲವರು ನಂಬಿದ್ದರು. ಈ ಸುಗ್ಗಿ 'ಸಬ್ ಪ್ರೈಮ್ ಸಾಲ' ಮುಂತಾದ ಜೂಜುಕೋರ ಚಟುವಟಿಕೆಯ ಮೇಲೆ ಆಧಾರಿತವಾಗಿದೆ. ಬರಿಯ ನೀರ್ಗುಳ್ಳೆ. ಇದರ ವಿರುದ್ಧ ನಿಬಂಧನೆ ಅಗತ್ಯ ಎಂಬ ಒತ್ತಾಯಕ್ಕೆ ಜಗ್ಗದವನು.

ಆದರೆ ಇತ್ತೀಚಿನ ಈ ಮಹಾಕುಸಿತದ ನಂತರ ಇಂತಹ ಗ್ರೀನ್‌ಸ್ಪಾನ್ ಸಹ 'ಅನಿರ್ಭಂಧಿತ ಮಾರುಕಟ್ಟೆಯಲ್ಲಿ ಹುಳುಕಿದೆ' ಎಂದು ಒಪ್ಪಿಕೊಳ್ಳಬೇಕಾಗಿದೆ. ಅದೂ ಆತನನ್ನು 'ಮಹರ್ಷಿ' ಎಂದು ಬಗೆದಿದ್ದ ಸೆನೆಟ್ ಸಮಿತಿ ಎದುರು. ಸೈದ್ಧಾಂತಿಕ ನಂಬಿಕೆಯಿಂದ ಮಾರುಕಟ್ಟೆ ನಿಬಂಧನೆ ನಿರಾಕರಿಸಿದೆ. ತಮ್ಮ ಶೇರುದಾರರ ಹಿತಾಸಕ್ತಿ ಕಾಪಾಡಲಾದರೂ ಕಂಪನಿಗಳು ಸ್ವಯಂ-ನಿಬಂಧಿತ ವ್ಯವಸ್ಥೆ ರೂಪಿಸಿಕೊಳ್ಳುತ್ತದೆ ಎಂಬ ತಮ್ಮ ನಂಬಿಕೆ ಹುಸಿಯಾಗಿದೆ. ಮಾರುಕಟ್ಟೆಯ ನಿಬಂಧನೆಯ ಅಗತ್ಯ ಇದೆ. ಎಂದು ಗ್ರೀನ್‌ಸ್ಪಾನ್ ಸೆನೆಟ್ ಸಮಿತಿಗೆ ಹೇಳಿದ್ದಾರೆ.



ವೈದ್ಯ ವೃತ್ತಿಗೆ ತಗಲಿರುವ ಶಾಪಗಳು

ವೈದ್ಯವೃತ್ತಿ ನೂರಾರು ವರ್ಷಗಳಿಂದ ಜನರ ಆರೋಗ್ಯ ಸೇವೆ ಮಾಡುತ್ತಾ ಬಂದಿದೆ. ವೈದ್ಯ ವೃತ್ತಿಯಲ್ಲಿರುವವರು ಖಾಸಗಿ ವೈದ್ಯರೇ ಹೆಚ್ಚು ಸಂಖ್ಯೆಯಲ್ಲಿ. ವೈದ್ಯರೆಂದರೆ ದೇವರಿಗೆ ಸಮಾನ ಅನ್ನುವ ಮನೋಭಾವನೆ ಜನರಲ್ಲಿದೆ. ಆದರೆ ಇತ್ತೀಚಿಗಿನ ದಶಕಗಳಲ್ಲಿ ವೈದ್ಯವೃತ್ತಿ ವ್ಯಾಪಾರೀಕರಣಗೊಳ್ಳುತ್ತಿದೆ. ಜನರು ಈಗೀಗ ಅರ್ಥಮಾಡಿಕೊಳ್ಳುತ್ತಿದ್ದಾರೆ. ಈ ವ್ಯಾಪಾರೀಕರಣ ದಿಂದಾಗಿ ವೈದ್ಯವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಾಮಾನ್ಯರಿಗೆ ದಿನನಿತ್ಯದ ಆರೋಗ್ಯ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಪಡೆಯಲು ಮೊದಲಿನಷ್ಟು ಸುಲಭವಾಗಿಲ್ಲ ಹಾಗೂ ದುಬಾರಿಯಾಗುತ್ತಿದೆ. ಈ ಬದಲಾವಣೆಯಿಂದ ವೈದ್ಯವೃತ್ತಿ ಏಳು ಶಾಪಗಳಿಗೆ ಗುರಿಯಾಗಿದೆ!

ಶಾಪ 3

ಅನಗತ್ಯ ಪರೀಕ್ಷೆಗಳು

ಈಗಿನ ದಿನಗಳಲ್ಲಿ ಗಲ್ಲಿ ಗಲ್ಲಿಗಳಲ್ಲಿ ಲ್ಯಾಬ್‌ಗಳಿವೆ, ನಾಯಿ ಕೊಡೆಗಳಂತೆ ಹುಟ್ಟಿಕೊಂಡಿವೆ. ಈಗಿನ ದಿನಗಳಲ್ಲಿ ಲ್ಯಾಬ್ ಪರೀಕ್ಷೆಗಳನ್ನು (ರಕ್ತಪರೀಕ್ಷೆ ಸ್ಕ್ಯಾನ್, ಎಕ್ಸರೇ ಇತ್ಯಾದಿ) ಹೆಚ್ಚು ಹೆಚ್ಚು ವೈದ್ಯರು ಅವಲಂಬಿಸುತ್ತಾರೆ. ಆದ್ದರಿಂದ ಈ ಪರೀಕ್ಷೆ ಮಾಡಿಸುವವರ ಸಂಖ್ಯೆಯೂ ಹೆಚ್ಚುತ್ತಿದೆ. ರೋಗ ಕಂಡುಹಿಡಿಯಲು ಒಂದು ಪರಿಣಾಮಕಾರಿ ವಿಧಾನ ರೋಗಿಯಿಂದ - ರೋಗ ತೊಂದರೆಯ ಇತಿಹಾಸವನ್ನು ಪಟ್ಟಿ ಮಾಡುವುದು. ಪರೀಕ್ಷೆ ಮಾಡುವುದು ಪ್ರಾಥಮಿಕ ಆರೋಗ್ಯ ಪಾಲನೆಯಲ್ಲಿ ಕೆಲವೊಂದು ಸಾಮಾನ್ಯ ಪರೀಕ್ಷೆಗಳಿಂದ ರೋಗವನ್ನು ಸಂಪೂರ್ಣವಾಗಿ ಗುರುತಿಸಲು ಸಾಧ್ಯ. ದ್ವಿತೀಯ ಹಾಗೂ ತೃತೀಯ ಆರೋಗ್ಯ ಪಾಲನೆಯಲ್ಲಿ ವಿಶೇಷ ಪರೀಕ್ಷೆಗಳು ಅವಶ್ಯಕವಾಗುತ್ತವೆ. ಇಂದು ಪರೀಕ್ಷೆಗಳು ದೊರಕುತ್ತವೆಂಬ ಕಾರಣಕ್ಕಾಗಿ ಪರೀಕ್ಷೆಗಳನ್ನು ಬರೆದುಕೊಡುವ ಪರಿಪಾಠಕ್ಕೆ ವೈದ್ಯರು ಒಗ್ಗಿಹೋಗಿದ್ದಾರೆ. ಈ ವಿಷಯ ನೈತಿಕ ವಿಷಯಕ್ಕೆ ಸಂಬಂಧಿಸುವುದು, ಇದರ ಮೇಲ್ವಿಚಾರಣೆ ಅಸಾಧ್ಯ. ವೈದ್ಯರಿಗೆ ಪರೀಕ್ಷೆಗಳನ್ನು ಬರೆದುಕೊಡಲು ಒತ್ತಡದೊಂದಿಗೆ, ಹಣದ ಆಮಿಷವೂ ಇರುತ್ತದೆಂಬುದು ವಿಷಾದಕರ.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಎಲ್ಲಾ ಪರೀಕ್ಷೆಗಳೂ ಕಾಯಿಲೆ ಇದೆಯೆಂದು ಸ್ಪಷ್ಟ ಚಿತ್ರಣ ನೀಡುವುದಿಲ್ಲ. ವೈದ್ಯಕೀಯ ಪಠ್ಯಗಳಲ್ಲಿ ಈ ಪರೀಕ್ಷೆಗಳನ್ನು ಮಾಡಲು ನಿರ್ದಿಷ್ಟ ಮಾರ್ಗದರ್ಶನವಿದೆ. ಆದರೆ ಅದನ್ನು ಅನುಸರಿಸಲಾಗುತ್ತಿಲ್ಲ. ಮಾಸ್ಟರ್ ಹೆಲ್ತ್ ಚೆಕ್‌ಅಪ್‌ನ ಹೆಸರಿನಲ್ಲಿ ಸಾವಿರಾರು ರೂಪಾಯಿಗಳ ಪರೀಕ್ಷೆಗಳನ್ನು ಮಾಡಿಸಿ ಲಾಭ ಮಾಡಲಾಗುತ್ತಿದೆ. ಕಾರಣ ಈ ಲ್ಯಾಬ್‌ಗಳು ವ್ಯಾಪಾರದ ಕೇಂದ್ರಗಳಾಗಿವೆ. ವೈದ್ಯನನ್ನು ಮೂಕ ಪ್ರೇಕ್ಷಕನಂತೆ ಇಟ್ಟುಕೊಳ್ಳಲಾಗಿದೆ. ಈಗಿನ ದಿನಗಳಲ್ಲಿ ತಜ್ಞ ವೈದ್ಯರೇ ಈ ಲ್ಯಾಬ್‌ಗಳ ಮಾಲೀಕರಾಗಿ, ವ್ಯಾಪಾರಿಗಳೂ ಆಗಿದ್ದಾರೆ.

ಪುಟ 3 ರಿಂದ

ಕಾಂಗ್ರೆಸ್ ಆತ್ಮಾವಲೋಕನ...

ನಿಟ್ಟಿನಲ್ಲಿ ಅಂತಹ ನಿಲುವಿಗೆ ಬಂದದ್ದು, ಕಾಣಿಸುತ್ತಿಲ್ಲ, ಕೇಳಿಸುತ್ತಿಲ್ಲ. ಇದು ಬೇರೆಲ್ಲ ಎಂಬುದು ಹಿಂದೆಲ್ಲಾ ನಡೆಸ ಸಭೆಗಳಾಗಲೀ, ಬಂದ ಅಭಿಪ್ರಾಯಗಳನ್ನು ಪರಿಗಣಿಸಬೇಕೆಂಬುದಾಗಲಿ ಕವಡೆ ಕಿಮ್ಮತ್ತು ನೀಡದಿರುವುದು ಇದೆ.


ಆದರೆ ಈಗಿನ ಸಭೆಯಲ್ಲಿ ಆತ್ಮಾವಲೋಕನ ನಡೆದು ಒಗ್ಗಟ್ಟಿನಿಂದ ಕೆಲಸ ಮಾಡುವ ದಿಶೆಯಲ್ಲಿ ಏನಾದರೂ ಕ್ರಮವಹಿಸಬಹುದೆಂಬ ನಿರೀಕ್ಷೆಯೂ ಮೂಡಿಲ್ಲ. ಬದಲಾಗಿ ಪಕ್ಷದ ನಾಯಕರಲ್ಲಿರುವ ಅತೃಪ್ತಿ, ಪಕ್ಷದೊಳಗಿನ ಕಿತ್ತಾಟಗಳೇ ಪ್ರಧಾನವಾಗಿ ಸ್ಫೋಟಿಸಿವೆ. ಒಂದೆಡೆ ಎಐಸಿಸಿ ಯ ಪ್ರಧಾನ ಕಾರ್ಯದರ್ಶಿ ಮಾರ್ಗರೇಟ್ ಆಳ್ವ ಬಹಿರಂಗವಾಗಿಯೇ ಕಾಂಗ್ರೆಸ್ ಮುಖಂಡರನ್ನು ತರಾಟೆಗೆ ತೆಗೆದುಕೊಂಡು ವಿಧಾನಸಭಾ ಕ್ಷೇತ್ರದ ಚುನಾವಣೆಯ ಸ್ಪರ್ಧೆಗಳಿಗೆ ಟಿಕೆಟ್ ಮಾರಾಟ ಮಾಡಲಾಗಿದೆ. ಒಬ್ಬರನ್ನೊಬ್ಬರು ಸೋಲಿಸಲು ಯತ್ನಿಸಲಾಗಿದೆ ಎಂದು ಹೇಳಿರುವುದು ಒಗ್ಗಟ್ಟಿಗಿಂತ ಶಿಸ್ತು ಕ್ರಮದ ಮಾತುಗಳತ್ತ ಹೊರಳಿದೆ. ಅಧ್ಯಕ್ಷ ಅಥವಾ ತಮ್ಮ ಸಾಮರ್ಥ್ಯಕ್ಕೆ ಸ್ಥಾನಮಾನ ಸಿಗಲಿಲ್ಲ ಎಂಬ ಸಿದ್ದರಾಮಯ್ಯನವರ ಅತೃಪ್ತಿಯಿಂದಾಗಿ ಸಭೆಗೆ ಬರದೇ ಬಂಡಾಯ ಹೂಡಿದ್ದಾರೆ. ಚಾಲಪ್ಪ ಬಹುತೇಕ ಹೊರಗೆ ನಿಂತಿದ್ದಾರೆ. ಜಾಫರ್‌ಷರೀಫ್‌ರಂಥವರು ಸಾಕು ಸಹವಾಸ ಎಂಬಂತೆ ಆಡುತ್ತಿದ್ದಾರೆ.

ಇಂತಹ ಬೆಳವಣಿಗೆಗಳು ನಿರೀಕ್ಷಿಸಲಾರದ್ದೇನಲ್ಲ. ಕಾಂಗ್ರೆಸ್ ಪಕ್ಷ ತಾನು ಅನುಸರಿಸಿದ, ಅನುಸರಿಸುತ್ತಿರುವ ಜನವಿರೋಧೀ ನೀತಿಗಳ ಬಗ್ಗೆ ಅದಕ್ಕೆ ಬೇಸರವಿಲ್ಲ ಜನರು ಯಾಕೆ ದೂರ ಸರಿಯುತ್ತಿದ್ದಾರೆ ಎಂದೂ ಕಿಂಚಿತ್ತೂ ಯೋಚಿಸುವುದೇ ಇಲ್ಲ. ಅಂತಹ ಆರ್ಥಿಕ ನೀತಿ ಕೈಬಿಡಲು ನಿರಾಕರಿಸುತ್ತಲೇ ಇದೆ. ಮೇಲಾಗಿ ದೇಶವನ್ನು ಅಮೇರಿಕಾದ ಪಾದಕ್ಕೆ ಅರ್ಪಿಸಲು ಎಲ್ಲಾ ಕ್ರಮ ವಹಿಸಿದೆ. ಒಟ್ಟಾರೆ ಕಾಂಗ್ರೆಸ್ ಒಂದು ನಿರ್ಣಾಯಕ ಕಾರ್ಯಕ್ರಮಗಳಲ್ಲಿ, ಅದರ ಆಧಾರದಲ್ಲಿ ಐಕ್ಯತೆಗೆ ಯತ್ನಿಸುವುದೂ ಇಲ್ಲ. ಹೀಗಾಗಿ ರಾಜಕೀಯ ಪರಿಭಾಷೆಯೇ ಪೂರ್ಣವಾಗಿ ಬದಲಾಗಿರುವ ಕಾಂಗ್ರೆಸ್ ಒಂದು ಆತ್ಮಾವಲೋಕನದ ಸಭೆಯಲ್ಲಿ ಸರಿಪಡಿಸಿಕೊಂಡಿತೇ?

ಇವೆಲ್ಲಾ ಇರುವಾಗಲೇ ಕನಿಷ್ಟ ಪಕ್ಷ ಮುಂಬರುವ ಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸುವ ನಿಟ್ಟಿನಲ್ಲಿ ಏನಾದರೂ ನಿರ್ದಿಷ್ಟ ಕ್ರಮ ವಹಿಸಿತೇ? ಚುನಾವಣೆಯ ಬಳಿಕವೂ ಇದು ಪ್ರಶ್ನೆಯಾಗಿಯೇ ಉಳಿದೀತೇ? ●

ಕಾಸ್ಮಿಕ್ ಹೀಲಿಂಗ್ ಎಂಬ ದಗಲ್ಬಾಜಿ ವಿದ್ಯೆ.....

ಪುಟ 2 ರಿಂದ



f the muscles' ಎನ್ನುತ್ತಾರೆ. ಯಾವ ವ್ಯಕ್ತಿ ದನ್ನು ಮುಟ್ಟಿಕೊಂಡಿರುತ್ತಾನೊ ಅದು ಚಲಿಸಲು ರಣ ಆ ವ್ಯಕ್ತಿಯ ಸ್ವಸಂಮೋಹಿತ ಸ್ಥಿತಿ. ಅವನಿಗೆ ೂತ್ತಿಲ್ಲದೆಯೇ ಅಪ್ರಜ್ಞಾತ್ಮಕವಾಗಿಯೂ ಅದು ಳ್ಳಲ್ಪಡುತ್ತದೆ. ಈ ರೀತಿಯ ಸ್ವಸಂಮೋಹಿತ ಸ್ಥಿತಿಗೆ ತನ ವಿಭ್ರಾಂತಿಯ ನಂಬಿಕೆಗಳು (Delusional eliefs) ಕಾರಣವಾಗಿರುತ್ತವೆ. ಇಲ್ಲದಿದ್ದರೆ ರ್ಜೀವವಾದ ಪ್ಲಾಂಚೆಟ್ ಯಾ ಲೋಟ ಚಲಿಸಲು ೇಗೆ ಸಾಧ್ಯ? ಅದರಿಂದ ಗೀಚಲ್ಪಟ್ಟ ಬರಹಗಳಿಗೆ ಸಂಮೋಹಿತ ವ್ಯಕ್ತಿಯೇ ಅರ್ಥೈಸುತ್ತಾನೆ. ಲ್ಲೇನೂ ಬರಹಗಳಿರುವುದಿಲ್ಲ, ಆದರೆ, ಆಪರೇಟ್ ಾಡುವ 'ಅವಧೂತ!' ತನ್ನ ಸುಪ್ತ ಚೇತನದಿಂದ ಒದರುತ್ತಲೇ ಇರುತ್ತಾನೆ. ಆ ಅವಧೂತನಿಗೆ ತಿಳಿಯದ ಭಾಷೆಯುಳ್ಳ ಭೂತವನ್ನು ಆಹ್ವಾನಿಸಲು ಹೇಳಿ ಪ್ರಶ್ನಿಸಿದರೆ ಪ್ಲಾಂಚೆಟ್ಟಿನ ಠಕ್ಕು ಹೊರಬರುತ್ತದೆ.

ಆದರೆ ಈ ಭಯಾನಕ ಮೌಢ್ಯವನ್ನು ನಂಬುವ ಮಹಾ ಮಹಾ ಪಂಡಿತರು ಈ ಭರತಖಂಡದಲ್ಲಿ ಎಲ್ಲೆಲ್ಲಾ ಇದ್ದಾರೆ. ಉಡುಪಿ ತಾಲೂಕಿನ ಸಾಲಿಗ್ರಾಮದಲ್ಲಿ ಎಮ್.ಬಿ.ಬಿ.ಎಸ್. ಪದವೀಧರನೊಬ್ಬ ಲಕ್ಷಾಂತರ ಜನರನ್ನು ಈ ತಂತ್ರದ ಮೂಲಕ ಸೆಳೆದುಕೊಂಡಿದ್ದಾನೆ. ಈತ ಪ್ಲಾಂಚೆಟ್ ಮೂಲಕ ತನ್ನ ಮೇಲೆ ವಿವೇಕಾನಂದರ ಭೂತ ಬರುತ್ತಾನೆಂದು ಹಬ್ಬಿಸಿದ್ದಾನೆ. ಸಿರಿವಂತ ಮುರ್ಖರ ಹಿಂಡೇ ಅಲ್ಲಿ ಕಲೆಯುತ್ತದೆ. ಯಾವ ವಿವೇಕಾನಂದರು ಮಾನವ ಮಾತ್ರರ ಶ್ರೇಯಸ್ಸಿಗೆ ಹೋರಾಡಿದರೋ, ಶಿಕಾಗೋದಲ್ಲಿ ಭಾರತದ ಹಿರಿಮೆಯ ಡಿಂಡಿಮವನ್ನು ಭಾರಿಸಿದರೊ, ಭಾರತಕ್ಕೆ ಇನ್ನು ಐವತ್ತು ವರ್ಷಗಳ ತನಕ ಧರ್ಮದ ಅಗತ್ಯ ಇಲ್ಲ - ಎಂದರೊ, ಜನ್ಮಜನ್ಮಾಂತರದ ಮೌಢ್ಯಗಳಿಗೆ ಕಿಚ್ಚು ಹಚ್ಚಲು ಹೇಳಿದರೊ, ರಾಮ - ರಹೀಮರನ್ನು ಒಂದಾಗಿ ಕಂಡರೊ ಅಂತಹ ಮಹಾ ಮಹಿಮ ಈ ದುರುಳನ ಲೆಕ್ಕದಲ್ಲಿ ಭೂತವಾಗಿ ಬರುತ್ತಿದ್ದಾನೆ! ವಿವೇಕಾನಂದರ ಇಂಥ ಕೊಲೆಯನ್ನು ನಮ್ಮ ಜನ ಸಹಿಸುತ್ತಾರೆಂದರೆ ಅಂಥವರ ವಿವೇಕಕ್ಕೆ ಏನೆನ್ನಬೇಕು? ಇಂದು ಈತ ಕೋಟ್ಯಾಧಿಪತಿ. ಈ ಸಾಲಿನಲ್ಲಿ ಅಂತರಾಷ್ಟ್ರೀಯ ಕ್ರಿಮಿನಲ್‌ಗಳಾದ ರವಿಶಂಕರ್, ಸಾಯಿಬಾಬಾ, ತಬ್ಬಿಕೊಳ್ಳುವ ವಿಕೃತ 'ಅಮ್ಮ'ನಂತಹ ಹಲವಾರು ಜನರಿದ್ದಾರೆ. ಆದರೆ, ಉಚ್ಚ ಮಧ್ಯಮವರ್ಗದ ಜನರು ಮಾತ್ರ ಆತನ ಬಂಡವಾಳವನ್ನು ಹೆಚ್ಚಿಸುವವರು. ಬಡಜನರಿಗೆ ಪಂಜುರ್ಲಿ, ಕಲುಡ್ಕ ಇತ್ಯಾದಿಗಳಿವೆ. ಅವರಿಗೆ ಅಷ್ಟೇ ಸಾಕು.

ಇಂದು ಮಿಥ್ಯಾವಿಜ್ಞಾನವು ಏಕ ಪ್ರಕಾರವಾಗಿ ಬೆಳೆಯುತ್ತಿದೆ. ಅಮೆರಿಕಾವಂತೂ ಅದರ ಕೇಂದ್ರ ಸ್ಥಾನ. ಜಾಗತಿಕ ಮೌಢ್ಯದ ಪುನರುತ್ಥಾನಕ್ಕೆ ಅದು ಪಣ ತೊಟ್ಟಿದೆ. ಹಾಗಾಗಿ ಅಲ್ಲಿದ್ದಷ್ಟು ಸ್ವಾಮಿಗಳು, ಮಠಾಧಿಶರು, ಅವಧೂತರು ಇನ್ನೆಲ್ಲೂ ಇಲ್ಲ.

ಕಮ್ಯೂನಿಸ್ಟ ದೇಶಗಳಲ್ಲಿ ವಾಕ್‌ಸ್ವಾತಂತ್ರ್ಯವಿಲ್ಲವೆಂದು ಬೊಳ್ಳುಗರೆಯುವ ನರಿ ನಾಯಿಗಳು ಅಮೆರಿಕಾವು ವಿಚಾರವಾದಿಗಳನ್ನು ಹೇಗೆ ನಡೆಸಿಕೊಂಡಿದೆ ಎಂಬುದನ್ನು ಗಮನಿಸಬೇಕು. ಅಮೆರಿಕಾದ ವಿಚಾರವಾದಿಗಳ ಸಂಘದ ಅಧ್ಯಕ್ಷೆ - ಡಾ. ಮಡಲಿನ್ ಮುರ್ರೈ ಓ ಹೇರ್ - ಎಂಬುವರನ್ನು ಹನ್ನೊಂದು ಬಾರಿ ಜೈಲಿಗೆ ತಳ್ಳಲಾಗಿದೆ. ಇವರ ಮೇಲೆ 41 ಮೊಕದ್ದಮೆಗಳು ಕೋರ್ಟಿನಲ್ಲಿವೆ. ಅಮೆರಿಕಾ ಶೇ. 95 ರಷ್ಟು ಭಾಗ ಚರ್ಚುಗಳ ಅಧೀನದಲ್ಲಿದೆ. ಅಲ್ಲಿಯ ನಾಣ್ಯಗಳು 'In God we trust' ಎಂಬ ಘೋಷಣೆಯನ್ನು ಹೊಂದಿದೆ. ಮಿಲಿಟರಿಯಲ್ಲಿಯೂ ಅಲ್ಲಿ ಪ್ರಾರ್ಥನೆಗಳು ನಡೆಯುತ್ತಿರುತ್ತವೆ. ದಿನದಿನಕ್ಕೂ ವೈಜ್ಞಾನಿಕ ಮನೋಧರ್ಮಕ್ಕೆ ವಿರುದ್ಧವಾಗಿ ಬಗೆಬಗೆಯಲ್ಲಿ ಅಲ್ಲಿ ಪ್ರಚಾರಗಳು ನಡೆಯುತ್ತಿರುತ್ತವೆ. 'Scientific Americana' 'Readers Digest' ಎಲ್ಲವೂ ಈ ಮಾರಕ ಮಿಥ್ಯಾ ವಿಜ್ಞಾನದ ಪ್ರಸಾರಕೇಂದ್ರದ ಪತ್ರಿಕೆಗಳು. ಇದರ ಪರಿಣಾಮವಾಗಿಯೇ ಇಂದೂ ಅಂಥ ಪತ್ರಿಕೆಗಳಲ್ಲಿ 'ಪರಮಾನಸ ಶಾಸ್ತ್ರ', 'ಹಾರುವ ತಟ್ಟೆ', 'ಬರ್ಮುಡಾ ಟ್ರೈಎಂಗಲ್', 'ಪ್ರಿಕಾಗ್ನಿಶನ್', 'ಟೆಲಿಪತಿ', 'ಕ್ಲೈರಿವಾಯೆನ್ಸ್', 'ಸೈಟೊಕೈನೆಸಿಸ್' - ಮುಂತಾದ ನಾನಾ ವೈಜ್ಞಾನಿಕ (!) ಮೂಢ ನಂಬಿಕೆಗಳು ವಿಜ್ಞಾನದ ಹೆಸರಿನಲ್ಲಿ ಪ್ರಕಟವಾಗುತ್ತಿರುತ್ತವೆ.

ಟೆಲಿಪತಿ:

ಟೆಲಿಪತಿಯ ಬಗ್ಗೆ ಪತ್ರಿಕೆಗಳಲ್ಲಿ ಹಲವಾರು ವಾರ್ತೆಗಳು ಬಂದಿವೆ. ಆದರೆ ಅವುಗಳನ್ನು ಪರೀಕ್ಷಿಸಲಾಗಿ ಅವೆಲ್ಲವೂ ಸುಳ್ಳು, ಮೋಸ ಎಂಬುದಾಗಿ ಎಲ್ಲ ವಿಚಾರವಾದಿ ಸಂಘಟನೆಗಳು ಮತ್ತು ವಿಜ್ಞಾನಿಗಳು ಸಾಧಿಸಿ ತೋರಿಸಿದ್ದಾರೆ. ಟೆಲಿಪತಿಯ ವೀಕ್ಷಣೆಗೆ Card list ಎಂಬ ಒಂದು ವಿಲಕ್ಷಣ ಪ್ರಯೋಗವಿದೆ. ಆದರೆ, ಇದು, ಏನೇನೂ ಫಲಕಾರಿಯಾಗಿಲ್ಲ. 'Law of Chance' ನಲ್ಲಿ ಬಂದುದನ್ನೆ ಆಧಾರವೆಂದು ಸ್ವೀಕರಿಸಲಾಗುವುದಿಲ್ಲ. ಒಮ್ಮೆ ಪಡೆದ ಪರಿಣಾಮವನ್ನು ಪುನರಾವರ್ತಿಸಲು ಬಾರದಿದ್ದಲ್ಲಿ ಅದು ವೈಜ್ಞಾನಿಕ ಸತ್ಯವಾಗುವುದಿಲ್ಲ. 'Card listing for Telepathy' ಸಂಪೂರ್ಣ ಅರ್ಥಹೀನವೆಂದು 1973 ರ Encyclopedia of Britanica ಸ್ಪಷ್ಟವಾಗಿ ಉಲ್ಲೇಖಿಸಿದೆ.

ಟೆಲಿಪತಿಯ ಬಗ್ಗೆ ಬಹಳ ಬುರುಡೆ ಬಿಟ್ಟ ಪ್ರೊ. ಹೀವಿಜ್ (Hewage) ಗೆ ಕೋವೂರ್ ಹೀಗೆಂದು ಹೇಳಿದ್ದಾರೆ -

'Can Prof. Hewage produce a single person from any part of the world - even from behind the Irons curtains - who can read the mind of a person not in space or in submarine but just close by in an adjucent room'

ಈ ಟೆಲಿಪತಿ ಪ್ರಯೋಗದಲ್ಲಿ ಭಾಗವಹಿಸಿದ್ದನೆನ್ನಲಾದ ಇನ್ನೊಬ್ಬ ವಾಯುಪಡೆಯ Colonial Within Bowers ಎಂಬುವನು ಹೀಗೆ ವರದಿ ಮಾಡಿದ್ದಾನೆ -


'ನಾನು ಭಾಗವಹಿಸಿದ್ದೇನೆಂಬ ಪ್ರಯೋಗ ನಡೆಯಲೇ ಇಲ್ಲ. ವಾಶಿಂಗ್‌ಟನ್ ಪ್ರಯೋಗಾಲಯದಲ್ಲಿ ಟೆಲಿಪತಿ ಪ್ರಯೋಗದಲ್ಲಿ ಭಾಗವಹಿಸಲು ನನಗೆ ಕಾರ್ಯಭಾರ ವಹಿಸಲೇ ಇಲ್ಲ. ವಸ್ತುಸ್ಥಿತಿಯೇನೆಂದರೆ ಜುಲೈ 25 (1956) ರಂದು ಅಲ್ಜೇರಿಯಾದ ವಾಯುಪಡೆಯಲ್ಲಿ ನಾನು ಕಾರ್ಯ ನಿರ್ವಹಿಸುತ್ತಿದೆ, ಅದಕ್ಕೂ E.S.P. (Extra Sensory Preception) ಗೂ ಸಂಬಂಧವೇ ಇಲ್ಲ. ಇದೊಂದು ಒಂದು ದೊಡ್ಡ ವಂಚನೆ ಎಂಬುದನ್ನು 'This Week' ಪತ್ರಿಕೆ ಚೆನ್ನಾಗಿ ಬಯಲಿಗೆಳೆಯಿತು.

ಕಾದಂಬರಿಯನ್ನು ಬರೆಯುವವರಂತೆ ವಿಶ್ವವಿದ್ಯಾಲಯಗಳ ಸಂಶೋಧಕರು ಹೀಗೆ ಮಾಡಿದರೆ ಈ ವಿಶ್ವವನ್ನು ಯಾರು ರಕ್ಷಿಸುತ್ತಾರೋ ತಿಳಿಸುವುದಿಲ್ಲ. ನಮ್ಮ ಚಿದಾನಂದ ಮೂರ್ತಿಯವರನ್ನೇ ನೋಡಿ. ರಾಮನ ಮಂಗಗಳು ಸೇತುವೆ ಕಟ್ಟಿದ್ದನ್ನು ಅವರು ಸಂಶೋಧಿಸಿದ್ದಾರೆ!

'ಅರೋಲಾ'ವನ್ನು ನೋಡಿ ತೆಗೆದ ಛಾಯಾಚಿತ್ರವನ್ನು J&K (Unfounded Objects) ಎಂದು ಭಾವಿಸಿ ಅಮೆರಿಕಾದ ಒಂದು ಪತ್ರಿಕೆ ಹೇಗೆ ಅವೈಜ್ಞಾನಿಕವಾಗಿ ವರ್ತಿಸಿತು ಎಂಬುದು ಸರ್ವವಿದಿತ. ವಸ್ತುಸ್ಥಿತಿಯೇನೆಂದರೆ ಇಂಥ ವಿಕೃತ ಭಾವನಾತ್ಮಕ ವಿಚಾರಗಳ ಕುರಿತು ಬರೆದು ಪತ್ರಿಕೆಗಳನ್ನು ಹೆಚ್ಚು ಹೆಚ್ಚು ಮಾರಾಟ ಮಾಡುವುದೇ ಇವರ ತಂತ್ರವಾಗಿದೆ. 'ಕಾಸ್ಮಿಕ್ ಹೀಲಿಂಗ್' ಕುರಿತು ಬರೆಯುವ ಪತ್ರಿಕೆಯ ಉದ್ದೇಶವೂ ಇಷ್ಟೆ. ಹೆಚ್ಚಿನ ಎಲ್ಲಾ ಟಿ.ವಿ. ಚಾನೆಲ್‌ಗಳು 'ಹೀಗೂ ಉಂಟೇ'ದಂತಹ ಕಾರ್ಯಕ್ರಮಗಳನ್ನು ನಿರಂತರ ನೀಡುತ್ತಿವೆ. ಇವರು ಭಾರೀ ರಭಸದಿಂದ ಈ ದೇಶವನ್ನು ಕ್ರಿಸ್ತಪೂರ್ವಕ್ಕೆ ಕೊಂಡೊಯ್ಯುವ ಪ್ರಯತ್ನ ನಡೆಸಿದ್ದಾರೆ. ಸಾಮ್ರಾಜ್ಯಶಾಹಿಯ ರಕ್ಷಣೆಗೆ ಈ ಎಲ್ಲಾ ಕಸರತ್ತುಗಳು ಅತ್ಯವಶ್ಯವಾಗಿವೆ.

ಏನೇ ಇರಲಿ, ಈ ವಿಚಾರಗಳ ಬಗ್ಗೆ ಸಾಕಷ್ಟು ಸಾಮಾಗ್ರಿಗಳಿವೆ. ಜನ ಬುದ್ಧಿವಂತರಾದರೆ ಪ್ರಾಮಾಣಿಕರಾದರೆ ಅವುಗಳನ್ನು ಅಧ್ಯಯನ ಮಾಡುವ ಪಕ್ವತೆಯನ್ನು ತೋರುತ್ತಾರೆ. ಇಲ್ಲವಾದರೆ ವ್ಯರ್ಥ ಚರ್ಚೆಯಲ್ಲಿ ಸಮಯ ಹಾಳು ಮಾಡುತ್ತಾ ತಮ್ಮ ಮೌಢ್ಯದ ಕೆಸರು ಹೊಂಡದಲ್ಲಿ ಹೂತು ಹೋಗುತ್ತಾ ಚೀತ್ಕಾರ, ಘೂತ್ಕಾರ ಮಾಡುತ್ತಾ ಉಳಿದವರನ್ನೂ ತಮ್ಮೆಡೆಗೆ ಸೆಳೆದುಕೊಳ್ಳುತ್ತಾರೆ. ○

ಡಾ: ಆರ್.ವಿ.ಯವರ 'ಬೆಳಕಿನ ಆರಾಧನೆ'



ಇತ್ತೀಚೆಗೆ ನಮ್ಮನ್ನಗಲಿದ ಹಿರಿಯ ಬಂಡಾಯ ಸಾಹಿತಿ, ಪ್ರಗತಿಪರ ಚಳುವಳಿಗಳ ಒಡನಾಡಿ ಡಾ:ಆರ್.ವಿ.ಭಂಡಾರಿಯವರ ಬದುಕು, ಬರಹಗಳನ್ನು ಕುರಿತ ಒಂದು ಬರಹ ಇಲ್ಲಿದೆ. 'ಚಿಂತನ ಉತ್ತರ ಕನ್ನಡ'ವು ಡಾ: ಆರ್.ವಿ.ಯವರ ಬದುಕು ಬರಹದೊಂದಿಗೆ 'ಸಹಯಾನ' ಕೃತಿಯನ್ನು ಹೊರ ತರುವ ಸಿದ್ಧತೆಯಲ್ಲಿದ್ದಾಗಲಿ ಅವರು ನಮ್ಮನ್ನಗಲಿದರು. ಈ ಪುಸ್ತಕಕ್ಕೆ ಡಾ: ಎಂ.ಜಿ.ಹೆಗಡೆಯವರು ಬರೆದ ಮುನ್ನಡೆಯನ್ನು ಇಲ್ಲಿ ಪ್ರಕಟಿಸಲಾಗಿದೆ.

ಡಾ. ಎಂ.ಜಿ. ಹೆಗಡೆ

'ಬೆಳಕಿನ ಕಡೆಗೆ' ಎಂಬುದು ಆರ್.ವಿ.ಭಂಡಾರಿಯವರು ಬರೆದ ಮಕ್ಕಳ ನಾಟಕವೊಂದರ ಹೆಸರು. ಅದು ಅವರ ಒಟ್ಟು ಸಾಹಿತ್ಯದ ಮೂಲ ಆಶಯವನ್ನು, ಅವರ ಬದುಕಿನ ಆದರ್ಶವನ್ನು ಸಮರ್ಥವಾಗಿ ಧ್ವನಿಸುವ ಪದ ಕೂಡ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ತೀರ ಹಿಂದುಳಿದ ವರ್ಗದಿಂದ ಬಂದ ಅವರು ತುಂಬ ಕಷ್ಟಪಟ್ಟು ಆಧುನಿಕ ವಿದ್ಯಾಭ್ಯಾಸವನ್ನು ಪಡೆದು ಮಾಸ್ತರರಾದರು. ಹಲವು ಬಗೆಯ ನೋವು ಹಾಗೂ ಅವಮಾನಗಳನ್ನು ನುಂಗಿಕೊಂಡು, ಹಟ ಹಿಡಿದು ಉನ್ನತ ವ್ಯಾಸಂಗವನ್ನು ಕೈಕೊಂಡು ವೃತ್ತಿ ಜೀವನದಲ್ಲಿ ಮೇಲೇರಿದರು. ಆದರ್ಶ ಶಿಕ್ಷಕರೆಂದು ಗೌರವವನ್ನು ಸಂಪಾದಿಸಿದರು. ಅಕ್ಷರ ಬೆಳಕಿನಲ್ಲಿ ಅವರು ಇಟ್ಟುಕೊಂಡ ಶ್ರದ್ಧೆಯಿಂದಾಗಿ ನಿವೃತ್ತಿಯ ನಂತರದಲ್ಲೂ ಸಾಕ್ಷರತಾ ಆಂದೋಳನದೊಂದಿಗೆ ಗುರುತಿಸಿಕೊಂಡು ಬೆಳಕು ಹರಡುವ ಕೈಂಕರ್ಯವನ್ನು ಮುಂದುವರಿಸಿದರು. 'ಚಿಂತನಉತ್ತರಕನ್ನಡ'ದಂತಹ ಹಲವು ಜನಪರ ಸಂಘಟನೆಗಳನ್ನು ಹುಟ್ಟುಹಾಕಿ, ಬೆಳಕಿನ ಪ್ರತಿಪಾದನೆಗೂ ಮುಂದಾದರು. ಅಕ್ಷರ ಬೆಳಕಿನಲ್ಲಿ ಶ್ರದ್ಧೆ ಹಾಗೂ ಬೆಳಕು ಹಂಚುವ ಕೈಂಕರ್ಯದಲ್ಲಿ ಉತ್ಸಾಹ- ಇವು ಸಾಹಿತ್ಯವೂ ಸೇರಿದಂತೆ ಆರ್.ವಿ. ಯವರು ಕೈಕೊಂಡ ಪ್ರತಿಯೊಂದು ಕೆಲಸದಲ್ಲೂ ಪ್ರೇರಕ ಬಿಂದುಗಳಾಗಿವೆ.

ಆರ್.ವಿ. ಯವರು ತಮ್ಮ ವ್ಯಕ್ತಿ ಜೀವನವನ್ನು ಆರಂಭಿಸಿದ ಕಾಲದ ಉತ್ತರ ಕನ್ನಡದ ಸಾಮಾಜಿಕ ಪರಿಸರದ ಮೇಲೆ ಬೆಳಕು ಚೆಲ್ಲುವ ಹಲವು ಕತೆಗಳು ಅವರ ಸಂಕಲನದಲ್ಲಿವೆ. 'ನಾನು ನನ್ನ ಕತೆಗಳಿಂದ ಬೇರೆ ಆಗಲಾರೆ' ಎನ್ನುವ ಮೂಲಕ ತಮ್ಮ ಕತೆಗಳು ಆತ್ಮ ಚರಿತ್ರಾತ್ಮಕವಾಗಿವೆ ಎಂದು ಆರ್.ವಿ. ಯವರೇ ಸೂಚಿಸಿದ್ದಿದೆ. 'ದಲಿತ ಜಾತಿಗೆ ಸೇರಿದ ಲಿಂಗಪ್ಪ ಮಾಸ್ತರು ನಮ್ಮೂರ ಶಾಲೆಗೆ ವರ್ಗವಾಗಿ ಬಂದಾಗ ಸ್ತಬ್ಧವಾಗಿದ್ದ ಕೆರೆಗೆ ಕಲ್ಲೊಗೆದಂತಾಯಿತು' ಎಂದು ಈ ಸಂಕಲನದ ಕತೆಯೊಂದು ಆರಂಭವಾಗುತ್ತದೆ. ಆ ಕೆರೆ ಸ್ತಬ್ಧವಾಗಿದ್ದದ್ದು ಜಾತಿ-ಜಾತಿಗಳ ನಡುವೆ, ಸಮಾಜದ ವಿವಿಧ ಶ್ರೇಣಿಗಳ ನಡುವೆ 'ಲಕ್ಷ್ಮಣನೆಳೆದ ರೇಖೆ' ಸ್ಪಷ್ಟವಾಗಿದ್ದುದರಿಂದಲೇ ಎಂಬ ಕಾರಣ ಮೀಮಾಂಸೆಯೂ ಕತೆಯಲ್ಲೇ ಇದೆ. ಆದರೆ ಲಿಂಗಪ್ಪನಂತಹ ದಲಿತ ಮಾಸ್ತರಾಗುವಂತಾದಾಗ, ವರ್ಗವಾಗಿ ಯಾವ ಗ್ರಾಮಕ್ಕೂ ಕಾಲಿಡಬಹುದು ಎಂತಾದಾಗ ಊರಿನ ವ್ಯಾಕರಣ ಬದಲಾಗಬೇಕಾಗುತ್ತದೆ. ಲಕ್ಷ್ಮಣರೇಖೆ ಉಲ್ಲಂಘನೆ ಆಗ್ತದೆ. ಅನಿವಾರ್ಯವಾಗಿ ಕೆರೆಯ ಸ್ತಬ್ಧತೆಗೆ ಭಂಗ ಬರ್‍ತದೆ. ಆರ್.ವಿ.ಯವರು ಇಟ್ಟುಕೊಂಡ ಪ್ರಗತಿಪರ ಧೋರಣೆಗಳು, ಎಡಪಂಥೀಯ ವಿಚಾರಗಳು ಹಲವು ವಿವಾದಗಳನ್ನು ಹುಟ್ಟುಹಾಕಿವೆ. ಊರಿನ ವ್ಯಾಕರಣದ ಬಗ್ಗೆ ಪ್ರಜ್ಞಾಪೂರ್ವಕವಾಗಿ ಚಿಂತಿಸುವಂತೆ ಆಹ್ವಾನಿಸಿವೆ. ಈಗ ಮೂವತ್ತು ನಲವತ್ತು ವರ್ಷಗಳೀಚೆ ಲಿಂಗಪ್ಪ ಮಾಸ್ತರಂತಹವರು ಯಾವ ಊರಿಗೆ ವರ್ಗವಾಗಿ ಬಂದರೂ ಆ ಊರಿನಲ್ಲಿ ಅವರು ಸುಲಭವಾಗಿ ಸ್ವೀಕೃತವಾಗಬಲ್ಲರು ಎಂದಾದರೆ ಊರಿನ ವ್ಯಾಕರಣದಲ್ಲೇ ಸಾಕಷ್ಟು ಬದಲಾವಣೆ ಆಗಿದೆ ಎಂದೇ ಲೆಕ್ಕ. ಇಂತಹ ಬದಲಾವಣೆಯ ಪ್ರಕ್ರಿಯೆಯ ಜೊತೆ ಜೊತೆಯಲ್ಲೇ ನಡೆಯಲೇಬೇಕಾದ ವಿಚಾರ ಮಥನದಲ್ಲಿ ಆರ್.ವಿ. ಯವರ ಬರಹಗಳು ತೊಡಗಿಕೊಂಡಿವೆ ಎಂಬುದೇ ಅವರ ಹೆಚ್ಚುಗಾರಿಕೆಯಾಗಿದೆ.

ಆರ್.ವಿ.ಯವರ ಕತೆ, ಕಾದಂಬರಿ, ನಾಟಕಗಳಲ್ಲಿ ಪಾತ್ರಗಳು ಮತ್ತು ಪರಿಸರ ಕೂಡಿಯೇ ಬೆಳಕಿನ ಕಡೆಗೆ ಪಯಣ ಬೆಳೆಸುತ್ತವೆ. ಸಮಾನತೆಯ ತತ್ತ್ವವನ್ನು ಬೋಧಿಸುತ್ತವೆ, ಅಥವಾ ಅರ್ಥಮಾಡಿಕೊಳ್ಳುತ್ತವೆ. ಇದೊಂದು ದೊಡ್ಡ ಕನಸು. ಈ ಕನಸನ್ನು ನಿಜ ಜೀವನದಲ್ಲೂ, ತಮ್ಮ ಜೀವಿತಾವಧಿಯಲ್ಲೇ ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ತವಕದಲ್ಲಿ ಆರ್.ವಿ.ಯವರು ಬರೆದರು. ಕಳೆದ ಮೂರು ದಶಕಗಳ ಅವಧಿಯಲ್ಲಿ ಜಿಲ್ಲೆಯ ವಿವಿಧ ಪತ್ರಿಕೆಗಳಲ್ಲಿ ಅವರು ನಡೆಸಿದ ವಾಗ್ವಾದಗಳು ಈ ತವಕವನ್ನು ಹಂಚಿಕೊಂಡ ರೋಚಕ ದಾಖಲೆಗಳಾಗಿವೆ.

ಆರ್.ವಿ. ಯವರು ಸಾಹಿತ್ಯ ಹಾಗೂ ಪತ್ರಿಕೆಗಳನ್ನು ತಮ್ಮ ವಿಚಾರಗಳ ಪ್ರವರ್ತನೆಗಾಗಿ ಬಳಸಿಕೊಂಡಂತೇ ಯಕ್ಷಗಾನ ಮಾಧ್ಯಮವನ್ನು ಬಳಸಿಕೊಂಡರು. ಅವರು ಸ್ವತಃ ರಚಿಸಿದ ಯಕ್ಷಗಾನ ಪ್ರಸಂಗಗಳು ಅಕ್ಷರದ ಬೆಳಕನ್ನು ಆರಾಧಿಸುತ್ತವೆ. ಭಾವಪೂರ್ಣವಾದ, ಆದರೆ ತಮ್ಮ ವೈಚಾರಿಕ ನಿಲುವಿನೊಂದಿಗೆ ಎಲ್ಲಿಯೂ ರಾಜಿ ಮಾಡಿಕೊಳ್ಳದ ವಿಶಿಷ್ಟ ಅರ್ಥಧಾರಿಗಳೆಂದೂ ಅವರು ಸಾಕಷ್ಟು ಪ್ರಸಿದ್ಧರಾದರು. ತುಂಬ ಹಿಂದೆ ಅವರು ಹೊನ್ನಾವರ ಕಾಲೇಜಿನಲ್ಲಿ ನಡೆಸಿಕೊಟ್ಟ ತಾಳಮದ್ದಲೆ ಕಾರ್ಯಕ್ರಮ ವಿವಾದಕ್ಕೆ ಕಾರಣವಾಗಿತ್ತು. ಪ್ರಸಂಗ ವಾಲಿಮೋಕ್ಷ. ಅವಧಾನಿಯವರು ಹಾಗೂ ಆರ್.ವಿ.ಯವರು ರಾಮ-ವಾಲಿ ಪಾತ್ರಗಳನ್ನು ನಿರ್ವಹಿಸಿದ್ದರು. ಆರ್.ವಿ.ಯವರು ವಾಲಿಮೋಕ್ಷವನ್ನು ವಾಲಿವಧೆಯ ಪ್ರಸಂಗವಾಗಿ ಪ್ರಸ್ತುತಪಡಿಸಿದರು. ಆ ಪ್ರಸಂಗದಲ್ಲಿ ಕೊನೆಗೂ ರಾಮ ತನ್ನಿಂದ ಒಂದು ಪ್ರಮಾದವಾಯಿತೆಂದು ವಾಲಿಯ ಕ್ಷಮೆ ಯಾಚಿಸುತ್ತಾನೆ. ರಾಮನ ಪಾತ್ರ ಹೀಗೆ ವರ್ತಿಸಬಹುದೇ ಎಂಬುದು ಆಗ ಸಾಕಷ್ಟು ದಿನ ಚರ್ಚೆಯಲ್ಲಿತ್ತು. ವಾಲ್ಮೀಕಿಯ ರಾಮ ಹೇಗೇ ವರ್ತಿಸಿದ್ದರೂ ಇದು ಆರ್.ವಿ.ಯವರ ರಾಮ, ಈತನ ನೈತಿಕತೆಯ ಚೌಕಟ್ಟು ಭಿನ್ನವಾಗಿದ್ದು ಎಂಬುದನ್ನು ಅರಗಿಸಿಕೊಳ್ಳಲು ಯಕ್ಷಗಾನ ಪ್ರಿಯರಿಗೆ ಕಷ್ಟವಾಗಿರಬೇಕು. ಆರ್.ವಿ.ಯವರು ತಮ್ಮ ಯಕ್ಷಗಾನ ಅರ್ಥಗಾರಿಕೆಲ್ಲೂ ಬರಹಗಳಲ್ಲೂ ಹೀಗೆ ಪುರಾಣ ಪ್ರತಿಮೆಗಳನ್ನು ಮುರಿದು ಹೊಸದಾಗಿ ನಿರ್ಮಿಸಲು ಹೊರಟರು. ಬೆಳಕಿನ ಕಡೆಗೆ ಸಮುದಾಯವನ್ನು ಮುನ್ನಡೆಸಲು ಇದು ಅಗತ್ಯವಾಗಿ ತುರ್ತಾಗಿ ಆಗಬೇಕಾದ ಕೆಲಸವೆಂದು ಅವರು ನಂಬಿದ್ದರು.

ಆರ್.ವಿ.ಯವರ ವಿಚಾರಗಳ ಕುರಿತು ಹೀಗೆ ಸಾಕಷ್ಟು ಚರ್ಚೆ ನಡೆದಿದ್ದರೂ ಅವರ ಕೃತಿಗಳ ಕುರಿತು ಹೆಚ್ಚಿನ ಬರಹಗಳೇನು ಬಂದಿರಲಿಲ್ಲ. ಹೀಗಾಗಿ ಅವರ ಕೃತಿಗಳನ್ನು ಅವಲೋಕಿಸುವ ಹಾಗೂ ಚರ್ಚಿಸುವ ಬರಹಗಳನ್ನೊಳಗೊಂಡಂತೆ ಅಭಿನಂದನ ಗ್ರಂಥವೊಂದನ್ನು ಪ್ರಕಟಿಸುವ ಇರಾದೆ ಚಿಂತನಕ್ಕಿತ್ತು. 'ಚಿಂತನಉತ್ತರಕನ್ನಡ'ದ ಹಿರಿಯ ಸದಸ್ಯರು, ನಾಡಿನ ಬಂಡಾಯ ಚಳುವಳಿಯ ಮುಂಚೂಣಿಯ ಬರಹಗಾರರೂ, ಇದೆಲ್ಲಕ್ಕಿಂತ ಮುಖ್ಯವಾಗಿ ಉತ್ತರ ಕನ್ನಡದ ಸಾಂಸ ತಿಕ ಬದುಕಿನಲ್ಲಿ ಹೊಸ ಸಂಚಲನವನ್ನುಂಟು ಮಾಡುವಲ್ಲಿ ಶ್ರಮಿಸಿದವರೂ ಆದ ಆರ್.ವಿ.ಯವರನ್ನು ಅಭಿನಂದಿಸುವುದು 'ಚಿಂತನಉತ್ತರಕನ್ನಡ'ಕ್ಕೆ ಹೆಮ್ಮೆಯ ಸಂಗತಿಯಾಗಿತ್ತು. ಆದರೆ ಆರ್.ವಿ. ಯವರು ಈ ಯೋಜನೆಗೆ ಸಮ್ಮತಿಯನ್ನೇ ನೀಡಲಿಲ್ಲ. ಹೀಗಾಗಿ ಅಭಿನಂದನ ಗ್ರಂಥದ ಯೋಜನೆಯನ್ನು ಕೈಬಿಟ್ಟು ಅವರ ಕೃತಿಗಳನ್ನು ಅನುಸಂಧಾನಿಸುವ ಹಾಗೂ ಅವರ ಕ್ರಿಯಾಶೀಲತೆಯ ವಿವಿಧ ಮುಖಗಳನ್ನು ಪರಿಚಯಿಸುವ ಬರಹಗಳನ್ನೊಳಗೊಂಡ ಈ ಹೊತ್ತಿಗೆಯನ್ನು ರೂಪಿಸಬೇಕಾಯಿತು.

ಇನ್ನೇನು ಈ ಹೊತ್ತಿಗೆ ಬಿಡುಗಡೆಗೊಳ್ಳಬೇಕು ಅನ್ನುವಾಗಲೇ ಆರ್.ವಿ. ಭಂಡಾರಿಯವರು ನಮ್ಮನ್ನಗಲಿದರು. ಇದು ಅವರಿಗೆ ಶ್ರದ್ಧಾಂಜಲಿ ಕೂಡ.

'ಭಾರತ ರತ್ನ' ಭೀಮಸೇನ ಜೋಶಿ



ಖ್ಯಾತ ಹಿಂದುಸ್ಥಾನಿ ಗಾಯಕ ಭೀಮಸೇನ ಜೋಶಿಯವರು ಭಾರತ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ತಲ್ಲೀನರಾಗಿ ಹಾಡುತ್ತಿರುವ ಕರ್ನಾಟಕದ ಹೆಮ್ಮೆಯ ಹಾಡುಗಾರನಿಗೆ 'ಜನಶಕ್ತಿ' ಯ ಅಭಿನಂದನೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH